ಸಂಪುಟ: 21, ಸಂಚಿಕೆ: 303, ಪುಟಗಳು: 8, ಶನಿವಾರ, 10 ಆಗಸ್ಟ್ 2024 RNI NO. KARKAN/2002/08054
epaper: www.sanjemugilu.com



ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ವೇಣು ಸಾರಥ್ಯದಲ್ಲಿ...

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ ₹3




### ಸುಭಾಷಿತ

ನಮ್ಮೆಲ್ಲ ಸಮಸ್ಯೆಗಳು ಪರಿಹಾರಗೊಳ್ಳುವ ತನಕ ಚಳವಳಿಗಳನ್ನು ಜೀವಂತವಾಗಿಟ್ಟಿರುವುದು ಅತ್ಯಗತ್ಯ.

। ಕುವೆಂಪು

### ಪಂಚಾಂಗ

(ಶನಿವಾರ 10, ಆಗಸ್ಟ್-2024)

- ಶ್ರೀ ಕ್ರೋಧಿನಾಮ ಸಂವತ್ಸರ,
- ದಕ್ಷಿಣಾಯಣ, ವರ್ಷ ಋತು,
- ಶ್ರಾವಣ ಮಾಸ, ಶುಕ್ಲ ಪಕ್ಷ, ಪಂಚಮಿ,
- ಗುರುವಾರ, ಉತ್ತರಪಾಲ್ಗುಣಿ ನಕ್ಷತ್ರ
- ರಾಹುಕಾಲ - 09:04AM 10:40 AM
- ಗುಳಿಕಕಾಲ - 05:52 AM 07:28 AM
- ಯಮಗಂಡಕಾಲ - 1:52 PM 3:28 PM

## ಮೈಶುಗರ್ ಕಾರ್ಖಾನೆಗೆ ಅಗತ್ಯ ಸೌಲಭ್ಯ ಒದಗಿಸಲು ಕ್ರಮ

**ಮಂಡ್ಯ:** ಕೆಲ ದಿನಗಳ ಹಿಂದೆ ಮಂಡ್ಯದ ಮೈಶುಗರ್ ಕಾರ್ಖಾನೆ ಮೈದಾನದಲ್ಲಿ ನಡೆದ ಜನಾಂದೋಲನ ಸಭೆ ಯಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಅವರು ವಿಪಕ್ಷಗಳ ವಿರುದ್ಧ ಗುಡುಗಿದ್ದರು. ಇದೀಗ ಮತ್ತೆ ಕೆಆರ್ ಎಸ್ ವೀಕ್ಷಣೆಗೆ ಬಂದು ಡಿಕೆ ಶಿವಕುಮಾರ್ ಅವರು ಮೈಶುಗರ್ ಕಾರ್ಖಾನೆ ಸಂಬಂಧ ಮಾತನಾಡಿದ್ದಾರೆ. ಮೈಶುಗರ್ ಕಾರ್ಖಾನೆ ಉಳಿಸಿಕೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದೆ. ಇರೋದನ್ನೇ ಉಳಿಸಿಕೊಳ್ಳಬೇಕಾ ಅಥವಾ ಹೊಸ ಕಾರ್ಖಾನೆ ಮಾಡಬೇಕಾ ಎಂಬ ಬಗ್ಗೆ ಚರ್ಚೆ ನಡೆದಿದೆ. ಇರುವ ಕಾರ್ಖಾನೆಗೆ ಅಗತ್ಯ ಸೌಲಭ್ಯ ಒದಗಿಸುವ ಬಗ್ಗೆಯೂ ಚರ್ಚೆ ನಡೆದಿದೆ. ಸ್ಥಳೀಯ ಶಾಸಕರು ಕೆಲವು ಸಲಹೆ ಕೊಟ್ಟಿದ್ದಾರೆ



ಎಂದು ಡಿಕೆ ಶಿವಕುಮಾರ್ ತಿಳಿಸಿದ್ದಾರೆ.

ಕೆಆರ್‌ಎಸ್ ವೀಕ್ಷಣೆಗೆ ಬಂದಿದ್ದ ಡಿಸಿಎಂ ಡಿಕೆ ಶಿವಕುಮಾರ್, ನಿನ್ನೆ ಅಧಿಕಾರಿಗಳು, ಜನಪ್ರತಿನಿಧಿಗಳ ಜೊತೆ ಸಭೆ ಮಾಡಿದ್ದೇವೆ. ಮಂಡ್ಯ, ಕೆಆರ್‌ಎಸ್ ಸಮಸ್ಯೆ ಬಗ್ಗೆ ಚರ್ಚೆ ಮಾಡಿದ್ದೇವೆ. ಮೊದಲಿಗೆ ಮೈಶುಗರ್ ಕಾರ್ಖಾನೆ ಉಳಿಸಿಕೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಸ್ಥಳೀಯ ಶಾಸಕರು ಕೆಲವು ಸಲಹೆ ಕೊಟ್ಟಿದ್ದಾರೆ. ನಂಬಿಕೆ ಉಳಿಸಿಕೊಳ್ಳುವ ಬಗ್ಗೆ ತೀರ್ಮಾನ ಮಾಡಲಾಗಿದೆ ಎಂದು ತಿಳಿಸಿದರು.

ಮೈಶುಗರ್ ಆಸ್ತಿ ಉಳಿಸಿಕೊಳ್ಳುವುದು. 5 ಸಾವಿರ TCD ಹೆಚ್ಚಿಸುವುದು. ಆ ನಂತರ ಡಿಸ್ಟಿಲರಿ ಇತರೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು, ಹೊಸ ಕಬ್ಬಿನ ತಳಿ ಪರಿಚಯಕ್ಕೂ ತೀರ್ಮಾನ ಮಾಡಲಾಗಿದೆ. 5 ಸಾವಿರ TCDಗೆ ಅಗತ್ಯ ಇರುವ ಎಲ್ಲವನ್ನೂ ಕೊಡಿಸಲು ಟೆಕ್ನಿಕಲ್ ಟೀಂ ಸಲಹೆ ನೀಡಿದೆ. ರೈತರಿಗೆ ಉತ್ತಮ ಬೆಲೆ ಕೊಡಿಸಬೇಕು. 50 TCD ಬಿಡಬೇಕಿತ್ತು. 96 TCD ಹೆಚ್ಚುವರಿಯಾಗಿ ಬಿಟ್ಟಿದ್ದೇವೆ. 150 TCD ಈಗಾಗಲೇ ಬಿಟ್ಟಿದ್ದೇವೆ. ಕೆರೆ-ಕಟ್ಟೆಗಳನ್ನ ತುಂಬಿಸಲು ಸೂಚಿಸಿದ್ದೇನೆ. ಆ ಕೆಲಸ ಮಾಡುತ್ತಿದ್ದಾರೆ ಎಂದರು.

**ಹೆಚ್ ಡಿಕೆಗೆ ಟಾಂಗ್ ಕೊಟ್ಟ ಡಿಕೆಶಿ:** ಇನ್ನು ಇದೇ ವೇಳೆ ತಮಿಳುನಾಡು ಸರ್ಕಾರ ಒಪ್ಪಿಸಲಿ ಎಂಬ ಹೆಚ್ ಡಿಕೆ ಹೇಳಿಕೆ ವಿಚಾರಕ್ಕೆ ಸಂಬಂಧಿಸಿ, ದೊಡ್ಡವರ ಸುದ್ದಿ ಈಗ ಬೇಡ. ಅವರೇನು ಅನುಮತಿ ಕೊಡಿಸಬೇಕಾದ ಅವಶ್ಯಕತೆಯಿಲ್ಲ. ಕಾನೂನುಪ್ರಕಾರ ಹೋರಾಟ ಮಾಡ್ತೀವಿ.

ಪುಟ 2

## ಸಂಕ್ಷಿಪ್ತ ಸುದ್ದಿ

### ಅಗ್ನಿ ದುರಂತ: ಕಾರ್ಖಾನೆ ಆಡಳಿತ ಮಂಡಳಿಯಿಂದ ಮೃತ ಕಾರ್ಮಿಕ ಕುಟುಂಬಕ್ಕೆ 18 ಲಕ್ಷ ರೂ ಪರಿಹಾರ

**ಬೆಳಗಾವಿ:** ಕಾರ್ಖಾನೆಯಲ್ಲಿ ಅಗ್ನಿ ದುರಂತದಲ್ಲಿ ಮೃತಪಟ್ಟ ಕಾರ್ಮಿಕ ಯಲ್ಲಪ್ಪ ಕುಟುಂಬಕ್ಕೆ ಕಾರ್ಖಾನೆ ಆಡಳಿತ ಮಂಡಳಿಯಿಂದ ಒಟ್ಟು 18 ಲಕ್ಷ ರೂ. ಪರಿಹಾರ ನೀಡಲಾಗಿದೆ.



ಆ.6ರಂದು ಜಿಲ್ಲೆಯ ನಾವಗೆ ಬಳಿಯ ಸ್ನೇಹಂ ಟೇಪಿಂಗ್ ಕಾರ್ಖಾನೆಯಲ್ಲಿ ನಡೆದಿದ್ದ ದುರ್ಘಟಯಲ್ಲಿ ಲಿಫ್ಟ್‌ನಲ್ಲಿ ಕಾರ್ಮಿಕ ಯಲ್ಲಪ್ಪ ಗುಂಡ್ಯಾಗೋಳ ಸಜೀವದಹನವಾಗಿದ್ದ. ವರದಿ ಬೆನ್ನಲ್ಲೇ ಸರ್ಕಾರ ಹಾಗೂ ಜಿಲ್ಲಾಡಳಿತಕ್ಕೂ ಮೊದಲು ಕಾರ್ಖಾನೆ ಆಡಳಿತ ಮಂಡಳಿ 18 ಲಕ್ಷ ರೂ. ಪರಿಹಾರ ನೀಡಿದೆ.

ಮುಂಚೆ 10 ಲಕ್ಷ ರೂ. ಪರಿಹಾರ ಬೇಡ ಅಂತಾ ಸುದ್ದಿವಾಹಿಯ ಮೂಲಕ ಮೃತನ ತಂದೆ ಸಣ್ಣಯಲ್ಲಪ್ಪ ಅಳಲು ತೋಡಿಕೊಂಡಿದ್ದರು. ಪುಟ 2

### ಶ್ರೀಲಂಕಾ ನೌಕಾಪಡೆಯಿಂದ 35 ತಮಿಳುನಾಡು ಮೀನುಗಾರರ ಬಂಧನ



**ರಾಮನಾಥಪುರಂ:** ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ಪಂಬನ್‌ನ ಸುಮಾರು 35 ಮೀನುಗಾರರನ್ನು ಶ್ರೀಲಂಕಾ ಸಮುದ್ರದಲ್ಲಿ ಬೇಟೆಯಾಡಿದ ಆರೋಪದ ಮೇಲೆ ಶ್ರೀಲಂಕಾ ನೌಕಾಪಡೆಯು ಬಂಧಿಸಿದೆ. ಪಂಬನ್ ಮೀನುಗಾರರು ಮೀನುಗಾರಿಕೆಗೆ ಬಳಸುತ್ತಿದ್ದ 4 ದೇಶದ ದೋಣಿಗಳನ್ನು ಗುರುವಾರ ಅಂತಾರಾಷ್ಟ್ರೀಯ ಕಡಲ ಗಡಿ ರೇಖೆಯನ್ನು (ಐಎಂಬಿಎಲ್) ಉಲ್ಲಂಘಿಸಿದ ಆರೋಪದ ಮೇಲೆ ವಶಪಡಿಸಿಕೊಳ್ಳಲಾಗಿದೆ ಎಂದು ಮೀನುಗಾರಿಕೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಲಂಕಾದ ವಾಯವ್ಯ ಸಮುದ್ರದಲ್ಲಿ ಮನ್ನಾರ್‌ನ ದಕ್ಷಿಣಕ್ಕೆ ಲಂಕಾದ ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿದ್ದಾಗ ಪುಟ 2

# ಕರಾಳ ಸ್ವಾತಂತ್ರ್ಯ ದಿನಾಚರಣೆ ಕೈಬಿಡಿ

## ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಎಸ್.ಸುರೇಶ್ ಕಿವಿಮಾತು

**ಬೆಂಗಳೂರು:** ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಆಗ್ರಹಿಸಿ ಆಗಸ್ಟ್ 15ರಂದು ಕರಾಳ ಸ್ವಾತಂತ್ರ್ಯ ದಿನಾಚರಣೆ ಆಚರಿಸಲು ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಕೆಲವು ಸಂಘಟನೆಗಳು ಮುಂದಾಗಿದೆ. ಆದರೆ ಯಾವುದೇ ಕಾರಣಕ್ಕೂ ನಮ್ಮ ಹೆಮ್ಮೆಯ ದೇಶಕ್ಕೆ ಸ್ವಾತಂತ್ರ್ಯ ದಿನವನ್ನು ಕರಾಳ ದಿನವನ್ನಾಗಿ ಆಚರಿಸಬೇಡಿ. ಪ್ರತಿಭಟನೆಯನ್ನು ಕೈಬಿಡುವಂತೆ ಮಾಜಿ ಸಚಿವ ಎಸ್.ಸುರೇಶ್ ಕುಮಾರ್ ಮನವಿ ಮಾಡಿದ್ದಾರೆ.

ಈ ಕುರಿತಾಗಿ ತಮ್ಮ ಸೋಶಿಯಲ್ ಮೀಡಿಯಾದಲ್ಲಿ ಮಾಹಿತಿ ಹಂಚಿಕೊಂಡಿದ್ದು, ಈ ಕುರಿತು ಈ ಸಂಘಟನೆಗಳು ಬಿಡುಗಡೆ ಮಾಡಿರುವ ಹೇಳಿಕೆಗಳನ್ನು ಗಮನಿಸಿದ್ದೇನೆ. ಇವರ ಸಮಸ್ಯೆ, ಪರಿಹಾರಕ್ಕಾಗಿ ಆಗ್ರಹ ಎಲ್ಲವೂ ಸಮ್ಮತವೇ. ಆದರೆ ಇವರು ಪ್ರತಿಭಟನೆಗಾಗಿ ಆಯ್ಕೆ ಮಾಡಿಕೊಂಡಿರುವ ದಿನಾಂಕವನ್ನು ಸ್ವಾತಂತ್ರ್ಯವನ್ನು ಪ್ರೀತಿಸುವ ಯಾರೇ ಆದರೂ ಒಪ್ಪತಕ್ಕದಂತದ್ದಲ್ಲ.

ನಮ್ಮ ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿ



ಪ್ರತಿಭಟನೆಗಳಿಗೆ ಪೂರ್ಣ ಅವಕಾಶ ಇದೆ. ಒಂದು ರೀತಿಯಿಂದ ಈ ರೀತಿಯ ಪ್ರತಿಭಟನೆ ಹೋರಾಟಗಳ ಮೂಲಕವೇ ನಾವು ಬ್ರಿಟಿಷರಿಂದ ಮುಕ್ತಿ ಪಡೆದು ಆಗಸ್ಟ್ 15 ರಂದು ಸ್ವಾತಂತ್ರ್ಯಗಳಿಸಿದ್ದು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರಿಕ, ಸಂಘಟನೆ-ಸಮುದಾಯ ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಪ್ರತಿಭಟನೆಯ ಮಾರ್ಗ ಹಿಡಿಯುವುದು ಸಹಜ ಪ್ರಕ್ರಿಯೆ. ಆದರೆ ಈ ಪ್ರತಿಭಟನೆಗಳು ದೇಶದ ಆಶಯಗಳ ಮೂಲ ಸ್ವರೂಪಕ್ಕೆ ಧಕ್ಕೆ ತರುವಂತದ್ದಾಗಿರಬಾರದು. ಪ್ರತಿಭಟನೆಯ ಸಮಯ-ಸಂದರ್ಭಗಳು ಬಹಳ ಮುಖ್ಯವಾಗುತ್ತವೆ.

ತಾವು ಕೈಗೊಳ್ಳಲಿರುವ ಪ್ರತಿಭಟನೆ ಪರಿಣಾಮ ಯಾರ ಮೇಲೆ ಹೇಗೆ ಆಗಬಹುದು ಎಂಬ ವಿವೇಚನೆ ಪ್ರತಿಭಟನೆಯ ನೇತಾರರಿಗೆ ಇರಬೇಕು. ತಮ್ಮ ಪ್ರತಿಭಟನೆ ನಮ್ಮ ಸಮಾಜದ ಮೇಲೆ ಯಾವ ರೀತಿಯ ಪರಿಣಾಮ ಉಂಟುಮಾಡುತ್ತದೆ ಎಂಬುದರ ಅರಿವಿರಬೇಕು. ಸ್ವಾತಂತ್ರ ಬಂದ ಹರ್ಷದ ದಿನಕ್ಕಿಂತ ನಮ್ಮ ಪ್ರತಿಷ್ಠೆಯೇ ಮುಖ್ಯವಾಗಬಾರದು.

**ಸಮಸ್ಯೆಗಳಿಗೆ ಸರ್ಕಾರ ತ್ವರಿತ ಪರಿಹಾರ ಹುಡುಕಬೇಕಿದೆ:** ರಾಜ್ಯದಲ್ಲಿನ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕಾಗಿರುವುದು ಅತ್ಯಗತ್ಯ. ಅವರ ಸಮಸ್ಯೆಗಳನ್ನು ಆಲಿಸಿ, ಅದಕ್ಕೆ ಸೂಕ್ತ ರೀತಿಯಲ್ಲಿ ಸ್ಪಂದಿಸಿ,

ಪುಟ 2

### ಉಪ ರಾಷ್ಟ್ರಪತಿ ಸ್ಥಾನದಿಂದ ಜಗದೀಪ್ ಧಂಖರ್ ವಜಾಗೊಳಿಸಲು ವಿರೋಧ ಪಕ್ಷ ತಂತ್ರ

## ನೋಟಿಸ್ ಸಲ್ಲಿಸುವ ಸಾಧ್ಯತೆ

**ನವದೆಹಲಿ:** ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧಂಖರ್ ಮತ್ತು ಇಂಡಿಯಾ ಬ್ಲಾಕ್ ಪಕ್ಷಗಳ ನಡುವಿನ ಸಂಬಂಧ ಮತ್ತಷ್ಟು ಹದಗೆಟ್ಟಿದೆ. ಹೀಗಾಗಿ, ಉಪರಾಷ್ಟ್ರಪತಿಯನ್ನು ಅವರ ಕಚೇರಿಯಿಂದ ಪದಚ್ಯುತಗೊಳಿಸುವ ನಿರ್ಣಯವನ್ನು ಮಂಡಿಸಲು ಪ್ರತಿಪಕ್ಷಗಳು ನೋಟಿಸ್ ಸಲ್ಲಿಸಲು ಚಿಂತನೆ ನಡೆಸಿವೆ. ನೋಟಿಸ್‌ನ ಸಮಯವನ್ನು ಚರ್ಚಿಸಿ ನಿರ್ಧರಿಸಲಾಗುವುದು ಎಂದು ಅವರು ಹೇಳಿದ್ದಾರೆ.



ಸಂವಿಧಾನದಪರಿಚ್ಛೇದ67(ಬಿ)ಪ್ರಕಾರ, ''ರಾಜ್ಯಗಳ ಕೌನ್ಸಿಲ್ (ರಾಜ್ಯಸಭೆ) ನಿರ್ಣಯದ ಮೂಲಕ ಉಪರಾಷ್ಟ್ರಪತಿಯನ್ನು ಅವರ ಹುದ್ದೆಯಿಂದ ತೆಗೆದುಹಾಕಬಹುದು. ಜಗದೀಪ್ ಧಂಖರ್ ವಿರುದ್ಧ ಕ್ರಮ ಕೈಗೊಳ್ಳುವ ಪ್ರಸ್ತಾವನೆಗೆ 87 ಸದಸ್ಯರು ಸಹಿ ಹಾಕಿದ್ದಾರೆ ಎಂದು ವಿರೋಧ ಪಕ್ಷದ ಮೂಲಗಳು ತಿಳಿಸಿವೆ.

ಈ ಬಗ್ಗೆ ಎರಡು ದಿನಗಳ ಹಿಂದೆ ಸದನದ ನಾಯಕ ಜೆಪಿ ನಡ್ಡಾ ಅವರಿಗೆ ಅನೌಪಚಾರಿಕವಾಗಿ ತಿಳಿಸಲಾಗಿದೆ ಎಂದು ಮೂಲವೊಂದು ತಿಳಿಸಿದೆ.

### ವಯನಾಡು ಸಂತ್ರಸ್ತರಿಗೆ 15 ಕೋಟಿ ರೂ., 300 ಮನೆ ನೀಡಲು ಮುಂದಾದ

## ನಟಿ ಜಾಕ್ವೆಲಿನ್ ಗೆಳೆಯ ಸುಕೇಶ್

**ಕೇರಳ:** ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಅವರ ಬಾಯ್ ಫ್ರೆಂಡ್ ಸುಕೇಶ್ ಚಂದ್ರಶೇಖರ್ ಅವರು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಪತ್ರ ಬರೆದಿದ್ದು, ವಯನಾಡ್ ಜಿಲ್ಲೆಯಲ್ಲಿ ಉಂಟಾದ ಭೂಕುಸಿತದಿಂದ ಜನರ ಆಶ್ರಯಕ್ಕಾಗಿ ಮುಖ್ಯಮಂತ್ರಿಗಳ ಸಂಕಷ್ಟ ಪರಿಹಾರ ನಿಧಿಗೆ 15 ಕೋಟಿ ರೂಪಾಯಿಗಳನ್ನು ಸ್ವೀಕರಿಸುವಂತೆ ಮನವಿ ಮಾಡಿದ್ದಾರೆ. ಸುಮಾರು 200 ಕೋಟಿ ರೂ. ವಂಚನೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ಸುಕೇಶ್ ಚಂದ್ರಶೇಖರ್ ಅವರು ಇದೀಗ ವಯನಾಡ್ ಜನರ ಪರ ನಿಂತಿದ್ದಾರೆ. ಪುಟ 2




### ಡಿಎಂಕೆಯಲ್ಲಿ ಅಪ್ಪ-ಮಗನ ದರ್ಬಾರ್

## ಉದಯನಿಧಿ ಸ್ಟಾಲಿನ್‌ಗೆ ಉಪಮುಖ್ಯಮಂತ್ರಿ ಎಂದು ಕರೆದ ಸಚಿವರು

**ಚೆನ್ನೈ:** ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ರಾಜಾ ಕಣ್ಣಪ್ಪನ್ ಅವರು ಸಾರ್ವಜನಿಕ ಸಮಾರಂಭದಲ್ಲಿ ಸ್ಟಾಲಿನ್ ಕುಟುಂಬದ ಕುಡಿ ಉದಯನಿಧಿ ಸ್ಟಾಲಿನ್ ಅವರನ್ನು ಉಪಮುಖ್ಯಮಂತ್ರಿ ಎಂದು ಉಲ್ಲೇಖಿಸಿದ ನಂತರ ತಮಿಳುನಾಡು ರಾಜಕೀಯದಲ್ಲಿ ರಾಜ್ಯ ಯುವ ಕಲ್ಯಾಣ ಮತ್ತು ಕ್ರೀಡಾ ಸಚಿವ ಉದಯನಿಧಿ ಸ್ಟಾಲಿನ್ ಅವರನ್ನು ಶೀಘ್ರದಲ್ಲೇ ಉಪಮುಖ್ಯಮಂತ್ರಿ ಹುದ್ದೆಗೆ ಏರಿಸಬಹುದು ಎಂಬ ಊಹಾಪೋಹಗಳು ತುಂಬಿದೆ. ಆದರೆ, ತಕ್ಷಣವೇ ತಮ್ಮನ್ನು ತಾವು ಸರಿಪಡಿಸಿಕೊಂಡ ಅವರು, ಆಗಸ್ಟ್ 19ರ ನಂತರವೇ ಉದಯನಿಧಿ ಅವರನ್ನು ಉಪಮುಖ್ಯಮಂತ್ರಿ ಎಂದು ಉಲ್ಲೇಖಿಸಬಹುದು ಎಂದು ಸಲಹೆ ನೀಡಿದರು. ಪುಟ 2



### ಗದಗ ಜಿಲ್ಲೆಯಲ್ಲಿ ಹಳ್ಳ ಹಿಡಿದ ಜಲ ಜೀವನ್ ಯೋಜನೆ

## ನೀರು ಬರುವ ಮೊದಲೇ ತುಕ್ಕು ಹಿಡಿದ ಪೈಪ್!

**ಗದಗ:** ಕೇಂದ್ರ ಸರ್ಕಾರ ಪ್ರತಿ ಗ್ರಾಮಗಳ ಮನೆ ಮನೆಗೆ ಕುಡಿಯುವ ನೀರು ಪೂರೈಕೆ ಮಾಡುವ ಉದ್ದೇಶದಿಂದ ಜಲ ಜೀವನ ಮಿಷನ್ ಯೋಜನೆ ಜಾರಿ ಮಾಡಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವ್ರ ಮಹತ್ವಾಕಾಂಕ್ಷಿ ಯೋಜನೆ. ಇದು ಗದಗ ಜಿಲ್ಲೆಯಲ್ಲಿ ಸಂಪೂರ್ಣ ಹಳ್ಳಹಿಡಿದಿದೆ. ರಾಜ್ಯದ ಪ್ರತಿಯೊಂದು ಮನೆಗೆ ಕುಡಿಯವ ನೀರು ಸಿಗಲಿ ಅಂತ ಕೇಂದ್ರ ಸರ್ಕಾರ ಕೋಟಿ ಕೋಟಿ ಅನುದಾನ ನೀಡಿದೆ. ಆದ್ರೆ, ಕಾಮಗಾರಿ ಮುಗಿದು ಮೂರ್ನಾಲ್ಕು ವರ್ಷಗಳು ಕಳೆದ್ರೂ, ಬಹುತೇಕ ಗ್ರಾಮಗಳ ಪೈಪ್ ನಲ್ಲಿ ಇನ್ನೂ ಹನಿ ನೀರು ಬರ್ತಾಯಿಲ್ಲ.

ಗದಗ ತಾಲೂಕಿನ ಚಿಕ್ಕಹಂದಿಗೋಳ, ಹುಯಿಲಗೋಳ ಗ್ರಾಮ ಸೇರಿದಂತೆ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಜೆಜೆಎಂ ಕಾಮಗಾರಿ ಮುಗಿದು ಹಲವು ವರ್ಷಗಳು ಕಳೆದಿವೆ. ಆದರೆ ನಲ್ಲಿಯಲ್ಲಿ ನೀರು ಬರುವ ಮುನ್ನವೇ ಪೈಪ್ ಗಳು ತುಕ್ಕು ಹಿಡಿದು ಯೋಜನೆ ಹಳ್ಳ ಹಿಡಿದು ಹೋಗಿವೆ. ಇನ್ನೂ ಕೆಲ ಗ್ರಾಮಗಳಲ್ಲಿ ಅರ್ಧಮರ್ಧ ಪೈಪುಗಳ ಹಾಕಿ ಗುತ್ತಿಗೆದಾರರು ಎಸ್ಕೇಪ ಆಗಿದ್ದಾರೆ. ಪ್ರತಿ



ಗ್ರಾಮಗಳಲ್ಲಿ ಮನೆ ಮನೆಗೆ ನೀರು ಕೊಡುವ ಯೋಜನೆ ಇದಾಗಿದೆ. ಅಷ್ಟೇ ಅಲ್ಲ ಪೈಪ್ ಹಾಕಲು ಇಡೀ ಗ್ರಾಮದಲ್ಲಿ ರಸ್ತೆ ಅಗೇದು ಹಾಳು ಮಾಡಿದ್ದಾರೆ.

ರಸ್ತೆ ರಿಪೇರಿ ಮಾಡದೇ ಹೋಗಿದ್ದಾರೆ ಅಂತ ಮಹಿಳೆಯರು ಆಕ್ರೋಶ ಹೊರ ಹಾಕಿದ್ದಾರೆ. ನೀರು ಇಲ್ಲ. ಒಳ್ಳೆಯ ರಸ್ತೆಗಳು ಹಾಳಾಗಿ ನಿತ್ಯವೂ ಗ್ರಾಮಸ್ಥರು ನರಕಯಾತನೆ ಅನುಭವಿಸುವಂತಾಗಿದೆ. ಚಿಕ್ಕಹಂದಿಗೋಳ, ಹುಯಿಲಗೋಳ ಗ್ರಾಮಗಳು ನರಗುಂದ ಮತಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ.

ಜಲ ಜೀವನ ಮಿಷನ್ ಯೋಜನೆ ಕಾಮಗಾರಿ ಗದಗ ಜಿಲ್ಲೆ ನಂಬರ್ ಒನ್ ಸ್ಥಾನದಲ್ಲಿದೆ. ಆದ್ರೆ, ಕಳಪೆ ಹಾಗೂ ಬೇಕಾಬಿಟ್ಟಿ ಗುತ್ತಿಗೆದಾರರು ಕಾಗಮಗಾರಿ ಮಾಡಿದ್ರಿಂದ ಜಿಲ್ಲೆಯಲ್ಲಿ ಜೆಜೆಎಂ ಯೋಜನೆ ಬಹುತೇಕ ಗ್ರಾಮಗಳಲ್ಲಿ ಹಳ್ಳ ಹಿಡಿದಿದೆ ಅಂತ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪುಟ 2

### ಬ್ಯಾಟರಾಯನಪುರ ಠಾಣೆಯಲ್ಲಿ ಹಣ ದುರ್ಬಳಕೆ ಆರೋಪ

## ತನಿಖೆಗೆ ನೀಡಿದ್ದ ತಡೆಯಾಜ್ಞೆ ತೆರವು

**ಬೆಂಗಳೂರು:** ಬ್ಯಾಟರಾಯನಪುರದ ಠಾಣೆಯಲ್ಲಿ ಪ್ರಕರಣವೊಂದರ ಹಣ ದುರ್ಬಳಕೆ ಆರೋಪದ ಹಿನ್ನಲೆ ಇನ್ಸ್‌ಪೆಕ್ಟರ್ ಶಂಕರ್ ನಾಯ್ಕ್ ವಿರುದ್ಧದ ತನಿಖೆಗೆ ನೀಡಿದ್ದ ತಡೆಯಾಜ್ಞೆಯನ್ನು ಹೈಕೋರ್ಟ್ ತೆರವುಗೊಳಿಸಿದೆ. ಇನ್ಸ್‌ಪೆಕ್ಟರ್ ಶಂಕರ್ ಅರ್ಜಿಯನ್ನು ವಜಾಗೊಳಿಸಿದ ಹೈಕೋರ್ಟ್, ಪ್ರಕರಣ ರದ್ದು ಪಡಿಸಲು ನಿರಾಕರಿಸಿದೆ.




**ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ:** ಕರ್ತವ್ಯದ ವೇಳೆ ಕಳ್ಳತನ ಪ್ರಕರಣವೊಂದರಲ್ಲಿ 72 ಲಕ್ಷ ರೂಪಾಯಿ ಜಪ್ತಿ ಮಾಡಿದ್ದ ಪೊಲೀಸ್ ಶಂಕರ್ ನಾಯ್ಕ್, ಈ ಹಣವನ್ನು ಸರ್ಕಾರದ ಖಜಾನೆ ಅಥವಾ ಠಾಣೆಯ ಸುಪರ್ದಿಗೆ ಕೊಡದೆ ಸ್ವಂತಕ್ಕೆ ಬಳಸಿಕೊಂಡ ಆರೋಪ ಕೇಳಿಬಂದಿದ್ದು, ಈ ಸಂಬಂಧ ಬ್ಯಾಟರಾಯನಪುರ ಠಾಣೆಯಲ್ಲಿ ಶಂಕರ್ ಹಾಗೂ ಮಧ್ಯವರ್ತಿ ಲೋಕನಾಥ್ ವಿರುದ್ಧ ಎಸಿಪಿ ಭರತ್ ರೆಡ್ಡಿ ನೀಡಿದ್ದ ದೂರು ಆಧರಿಸಿ 2023ರ ನವೆಂಬರ್ ನಲ್ಲಿ ಎಫ್ ಐಆರ್ ದಾಖಲಾಗಿತ್ತು.

**ಪ್ರಕರಣದ ತನಿಖೆಗೆ ತಡೆ ನೀಡಿದ್ದ ಹೈಕೋರ್ಟ್:** ಎಫ್ ಐಆರ್ ದಾಖಲಾಗುತ್ತಿದ್ದಂತೆ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಿಸಲಾಗಿತ್ತು. ಬಳಿಕ ಪ್ರಕರಣ ರದ್ದು ಕೋರಿ ಇನ್ಸ್ ಪೆಕ್ಟ್ ರ್ ಶಂಕರ್ ನಾಯ್ಕ್ ಹೈಕೋರ್ಟ್ ಮೆಟ್ಟಲೇರಿದ್ದರು. ನಂತರ ಪ್ರಕರಣದ ತನಿಖೆಗೆ ಹೈಕೋರ್ಟ್ ತಡೆ ನೀಡಿತ್ತು. ಆದರೆ, ತಡೆಯಾಜ್ಞೆ ತೆರವುಗೊಳಿಸುವಂತೆ ಸಿಸಿಬಿ ಮೇಲ್ಮನವಿ ಸಲ್ಲಿಸಿತ್ತು. ಈ ಹಿನ್ನೆಲೆ ತನಿಖೆಗೆ ನೀಡಿದ್ದ ತಡೆಯಾಜ್ಞೆಯನ್ನು ಇದೀಗ ಹೈಕೋರ್ಟ್ ತೆರವುಗೊಳಿಸಿದೆ.

ಇನ್ನು ಉದ್ಯಮಿ ಹರೀಶ್ ಎಂಬುವವರ ಕಾರು ಚಾಲಕ ಸಂತೋಷ್ ಎಂಬಾತ 2022 ರಲ್ಲಿ ಹೊಸಕೋಟೆಯಲ್ಲಿ 72 ಲಕ್ಷ ರೂ. ಗಳನ್ನು ಕದ್ದಿದ್ದರು. ಇದನ್ನು ಲೋಕನಾಥ್ ಸಿಂಗ್ ಅವರು ಬ್ಯಾಟರಾಯನಪುರ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಶಂಕರ್ ಅವರ ಗಮನಕ್ಕೆ ತಂದಿದ್ದರು. ಬಳಿಕ ನಾಯ್ಕ್ ಅವರು ಸಂತೋಷ್‌ನಿಂದ 72 ಲಕ್ಷ ರೂ. ಗಳನ್ನು ವಸೂಲಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಅದನ್ನು ಪೊಲೀಸ್ ಠಾಣೆಯಲ್ಲಿ ಇಡದೆ, ಸರ್ಕಾರದ ಖಜಾನೆಗೂ ಇಡದೆ ವೈಯಕ್ತಿಕ ಬಳಕೆಗೆ ಉಪಯೋಗಿಸಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಇದೀಗ ಈ ಪ್ರಕರಣದ ತನಿಖೆಗೆ ನೀಡಿದ್ದ ತಡೆಯಾಜ್ಞೆಯನ್ನು ಹೈಕೋರ್ಟ್ ತೆರವುಗೊಳಿಸಿದೆ.

## ವಿನೇಶ್ ಫೋಗಟ್‌ಗೆ ರಾಜ್ಯಸಭಾ ಸ್ಥಾನ ನೀಡಲು ಒತ್ತಾಯ



**ದೆಹಲಿ:** ಪ್ಯಾರಿಸ್ ಒಲಿಂಪಿಕ್‌ನಲ್ಲಿ ಫೈನಲ್ ಪಂದ್ಯಕ್ಕೆ ಮುನ್ನ ನಿಗದಿತ ತೂಕಕ್ಕಿಂತ ಜಾಸ್ತಿ ಇದೆ ಎಂದು ಹೇಳಿ ಪಂದ್ಯದಲ್ಲಿ ಭಾಗವಹಿಸಲು ಕುಸ್ತಿಪಟು ವಿನೇಶ್ ಫೋಗಟ್ ಅನರ್ಹಗೊಂಡಿದ್ದರು. ಐಒಸಿ ಅವರನ್ನು ಅನರ್ಹಗೊಳಿಸಿದ ಬೆನ್ನಲ್ಲೇ ವಿನೇಶ್ ನಂತರ ಕ್ರೀಡೆಯಿಂದ ನಿವೃತ್ತಿ ಘೋಷಿಸಿದ್ದರು. ಕ್ರೀಡಾ ಕಣದಲ್ಲಿ ಒಂದು ರೀತಿಯ ಬೆಳವಣಿಗೆಗಳು ನಡೆಯುತ್ತಿದ್ದರೆ ಇತ್ತ ರಾಜಕೀಯ ವಲಯದಲ್ಲಿ ವಿನೇಶ್ ಫೋಗಟ್‌ಗೆ ರಾಜ್ಯಸಭಾ ಸ್ಥಾನ ನೀಡಬೇಕು ಎಂಬ ಬೇಡಿಕೆ, ಒತ್ತಾಯಗಳು ಕೇಳಿಬಂದಿದೆ.

ರಾಜ್ಯಸಭೆ, ಸಂಸತ್ತಿನ ಮೇಲ್ಮನೆ ಮತ್ತು 'ಹಿರಿಯರ ಮನೆ'ಯ ಸದಸ್ಯರಾಗಲು ಕನಿಷ್ಠ ವಯಸ್ಸು 30. ಆದರೆ ಫೋಗಟ್ ವಯಸ್ಸು 29. ಆಗಸ್ಟ್ 25 ರಂದು ಅವರಿಗೆ ಮೂವತ್ತು ತುಂಬುತ್ತದೆ. ಪ್ರಸ್ತುತ, ರಾಜ್ಯಸಭೆಯಲ್ಲಿ 12 ಸ್ಥಾನಗಳು ಖಾಲಿ ಇವೆ. ಈ ಖಾಲಿ ಹುದ್ದೆಗಳ ಭರ್ತಿಗೆ ಚುನಾವಣೆ ಸೆಪ್ಟೆಂಬರ್ 3 ರಂದು ನಡೆಯಲಿದೆ. ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ ಆಗಸ್ಟ್ 21 ಆಗಿದೆ. ಹಾಗಾಗಿ ನಾಮಪತ್ರ ಸಲ್ಲಿಸುವ ಹೊತ್ತಿಗೆ ವಿನೇಶ್‌ಗೆ 30 ವರ್ಷ ಆಗುವುದಿಲ್ಲ, ಆದ್ದರಿಂದ ಆಕೆಗೆ ನಾಮಪತ್ರ ಸಲ್ಲಿಸುವ ಅರ್ಹತೆ ಇರುವುದಿಲ್ಲ, ಖಾಲಿ ಇರುವ ಸೀಟುಗಳಲ್ಲಿ ಒಂದು ವಿನೇಶ್ ಅವರ ತವರು ರಾಜ್ಯವಾದ ಹರ್ಯಾಣದಿಂದ ಬಂದಿದೆ. ಹರ್ಯಾಣದ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಅವರ ಪುತ್ರ ದೀಪೇಂದರ್ ಹೂಡಾ ಅವರು ಜೂನ್‌ನಲ್ಲಿ ಲೋಕಸಭೆಗೆ ಆಯ್ಕೆಯಾದ ನಂತರ ಈ ಸ್ಥಾನ ತೆರವಾಗಿತ್ತು. ಫೋಗಟ್‌ಗೆ ಒಲಿಂಪಿಕ್ ನ ನಿರಾಸೆಯ ನಂತರ ರಾಜ್ಯಸಭಾ ನಾಮನಿರ್ದೇಶನವನ್ನು ಕೋರಿದ ರಾಜಕಾರಣಿಗಳಲ್ಲಿ ಹೂಡಾ ಕೂಡ ಸೇರಿದ್ದಾರೆ. ಆದರೆ ಆಕೆಯ ಕುಟುಂಬವು ಈ ಕರೆಯನ್ನು ತಿರಸ್ಕರಿಸಿತು. ಲೆಜೆಂಡರಿ ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್, ವಿಶ್ವ ಚಾಂಪಿಯನ್ ಬಾಕ್ಸರ್ ಎಂಸಿ ಮೇರಿ ಕೋಮ್ ರಾಜ್ಯಸಭೆಯಲ್ಲಿದ್ದರು. ನಿವೃತ್ತ ಸ್ಪಿನ್ ಮಾಂತ್ರಿಕ ಹರ್ಭಜನ್ ಸಿಂಗ್ ಪ್ರಸ್ತುತ ಸದಸ್ಯರಾಗಿದ್ದಾರೆ, ಅವರು ಎಎಪಿಯ ನಾಮನಿರ್ದೇಶಿತರಾಗಿ ಆಯ್ಕೆಯಾಗಿದ್ದಾರೆ.

### ಪರಶುರಾಮ ಸಾವು ಕೇಸ್

# ಶಾಸಕ ಚೆನ್ನಾರೆಡ್ಡಿ ವಿರುದ್ಧ ಕ್ರಮಕ್ಕೆ ಪೊಲೀಸರ ಹಿಂದೇಟು!

**ಯಾದಗಿರಿ:** ಯಾದಗಿರಿ ಪಿಎಸ್‌ಐ ಪರಶುರಾಮ ಅನುಮಾನಸ್ಪದವಾಗಿ ಮೃತಪಟ್ಟು ಒಂದು ವಾರ ಕಳೆದಿದೆ. ಈ ಪ್ರಕರಣ ರಾಜ್ಯ ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿದೆ. ಆಡಳಿತಾರೂಢ ಕಾಂಗ್ರೆಸ್ ಮತ್ತು ವಿಪಕ್ಷಗಳ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ಪ್ರಕರಣದ ತನಿಖೆಯನ್ನು ಸಿಐಡಿ ನಡೆಸುತ್ತಿದೆ. ಪಿಎಸ್ ಐ ಪರಶುರಾಮ ಅವರ ಸಾವಿಗೆ ಯಾದಗಿರಿ ಕಾಂಗ್ರೆಸ್ ಶಾಸಕ ಚೆನ್ನರೆಡ್ಡಿ ಮತ್ತು ಪುತ್ರ ಪಂಪನಗೌಡ ಕಾರಣ ಎಂದು ಕುಟುಂಬಸ್ಥರು ಆರೋಪ ಮಾಡಿದ್ದಾರೆ. ಈ ಕೇಸ್ ಗೆ ಸಂಬಂಧಿಸಿದಂತೆ ಶಾಸಕ ಚೆನ್ನಾರೆಡ್ಡಿ ಮತ್ತು ಪುತ್ರ ಪಂಪಾಗೌಡ ವಿರುದ್ಧ ಜಾತಿ ನಿಂದನೆ ದೂರು ದಾಖಲಾಗಿದೆ. ಪ್ರಕರಣದಲ್ಲಿ ಶಾಸಕ ಚೆನ್ನಾರೆಡ್ಡಿ ಎ1 ಆಗಿದ್ದಾರೆ.

ಪಿಎಸ್ ಐ ಪರಶುರಾಮ ಅನುಮಾನಾಸ್ಪದ ಸಾವು ಪ್ರಕರಣ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದಂತೆ ಮತ್ತು ತಮ್ಮ ವಿರುದ್ಧ ಗಂಭೀರ ಆರೋಪ ಕೇಳಿಬರುತ್ತಿದ್ದಂತೆ ಶಾಸಕ ಚೆನ್ನಾರೆಡ್ಡಿ ಮತ್ತು ಪುತ್ರ ಪಂಪನಗೌಡ ನಾಪತ್ತೆಯಾಗಿದ್ದಾರೆ. ಹಾಗಿದ್ದರೆ ಶಾಸಕ ಚೆನ್ನಾರೆಡ್ಡಿ ಮತ್ತು ಪಂಪನಗೌಡ ಎಲ್ಲಿದ್ದಾರೆ ಶಾಸಕ ಚೆನ್ನಾರೆಡ್ಡಿ ವಿರುದ್ಧ ಜಾತಿನಿಂದನೆ ದೂರು ದಾಖಲಾಗಿದ್ದರೂ ಪೊಲೀಸರು ಇನ್ನೂವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲವೇಕೆ

ಪಿಎಸ್ ಐ ಪರಶುರಾಮ ಅನುಮಾನಸ್ಪದ ಸಾವು ಮಾಧ್ಯಮಗಳಲ್ಲಿ ನಿರಂತರವಾಗಿ ಪ್ರಸಾರವಾಗುತ್ತಿದ್ದಂತೆ ಪ್ರಕರಣ ಗಂಭೀರವಾಗ ತೊಡಗಿತು. ಮತ್ತು ಪರಶುರಾಮ ಪತ್ನಿ ಶ್ವೇತಾ ನನ್ನ ಪತಿ ಸಾವಿಗೆ ಶಾಸಕ ಚೆನ್ನಾರೆಡ್ಡಿ ಮತ್ತು ಅವರ ಪುತ್ರ ಪಂಪನಗೌಡ ಕಾರಣ ಎಂದು ಆರೋಪಿಸಿದ್ದರು.



ಮತ್ತು ದೂರು ದಾಖಲಿಸಿಕೊಳ್ಳಲು ಯಾದಗಿರಿ ಪೊಲೀಸರು ಹಿಂದೇಟು ಹಾಕುತ್ತಿದ್ದಾರೆ ಎಂದು ಆರೋಪಿಸಿದರು. ಇದು ಸರ್ಕಾರ ಒತ್ತಡಕ್ಕೆ ಒಳಗಾಗುವಂತೆ ಕಾರಣವಾಯಿತು. ಕೊನೆಗೆ ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ಶಾಸಕ ಚೆನ್ನಾರೆಡ್ಡಿ ಮತ್ತು ಪಂಪನಗೌಡ ವಿರುದ್ಧ ದೂರು ದಾಖಲಾಯ್ತು. ಇತ್ತ ದೂರು ದಾಖಲಾಗುತ್ತಿದ್ದಂತೆ ಶಾಸಕ ಚೆನ್ನಾರೆಡ್ಡಿ ಮತ್ತು ಪಂಪನಗೌಡ ಯಾದಗಿರಿಯಿಂದ ಕಾಲ್ಕಿತ್ತಿದ್ದು, ದೆಹಲಿಗೆ ತೆರಳಿದ್ದಾರೆ ಎಂಬ ವಂದತಿ ಹಬ್ಬಿತ್ತು.

ಶಾಸಕ ಚೆನ್ನಾರೆಡ್ಡಿ ಮತ್ತು ಪಂಪನಗೌಡ ಅಪ್ಪ-ಮಕ್ಕಳು ಬೆಂಗಳೂರಿನಲ್ಲೇ ಇದ್ದಾರೆ ಎಂದು ತಿಳಿದುಬಂದಿದೆ. ಇಷ್ಟೇ ಅಲ್ಲದೆ, ಪಿಎಸ್ಐ ಪರಶುರಾಮ ಅನುಮಾನಾಸ್ಪದ ಸಾವು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದಂತೆ ಯಾದಗಿರಿಯಿಂದ ಕಾಲ್ಕಿತ್ತ ಶಾಸಕ ಚೆನ್ನಾರೆಡ್ಡಿ ಬೆಂಗಳೂರಿಗೆ ಬಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಘಟನೆ ಬಗ್ಗೆ ಸಂಪೂರ್ಣ ವಿವರ ನೀಡಿದ್ದಾರೆ ಎಂದು ಮಾಹಿತಿ ದೊರೆತಿದೆ. ಮುಖ್ಯಮಂತ್ರಿಗಳನ್ನು ಭೇಟಿಯಾದ ಬಳಿಕ ಶಾಸಕ ಚೆನ್ನಾರೆಡ್ಡಿ ಬೆಂಗಳೂರಿನಲ್ಲೇ ನೆಲಸಿದ್ದಾರೆ ಎಂದು ಮೂಲಗಳಿಂದ ಮಾಹಿತಿ ದೊರೆತಿದೆ.

**ಕ್ರಮಕ್ಕೆ ಪೊಲೀಸರ ಹಿಂದೇಟು:** ಪಿಎಸ್ ಐ ಪರಶುರಾಮ ಅನುಮಾನಾಸ್ಪದ ಸಾವು ಪ್ರಕರಣದಲ್ಲಿ ಶಾಸಕ ಚೆನ್ನಾರೆಡ್ಡಿ ವಿರುದ್ಧ ಜಾತಿ ನಿಂದನೆ ಕೇಸ್ ದಾಖಲಾದರೂ ಪೊಲೀಸರು ಯಾಕೆ ಇನ್ನೂ ಅವರ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂಬ ಪ್ರಶ್ನೆ ಉದ್ಭವಿಸಿದೆ. ಜಾತಿ ನಿಂದನೆ ಪ್ರಕರಣ ದಾಖಲಾಗಿದ್ದು, ಶಾಸಕ ಚೆನ್ನಾರೆಡ್ಡಿ ಎ1 ಇದ್ದರೂ ಪೊಲೀಸರು ಅವರನ್ನು ಇನ್ನೂವರೆಗೂ ವಿಚಾರಣೆಗೆ ಒಳಪಡಿಸಿಲ್ಲ. ಎಫ್ ಎಸ್ ಎಲ್ ವರದಿ ಬಂದ ಬಳಿಕ ಪೊಲೀಸರು ಶಾಸಕ ಚೆನ್ನಾರೆಡ್ಡಿ ಅವರನ್ನು ವಿಚಾರಣೆಗೆ ಕರೆಯಲಿದ್ದಾರೆ ಎಂದು ಪೊಲೀಸ್ ಮೂಲಗಳಿಂದ ಮಾಹಿತಿ ದೊರೆತಿದೆ.

**ಪಿಎಸ್ ಐ ಪರಶುರಾಮ ಸಾವು:** ಪಿಎಸ್ ಐ ಪರಶುರಾಮ ಯಾದಗಿರಿ ನಗರ ಠಾಣೆಗೆ ವರ್ಗಾವಣೆಯಾಗಿ ಒಂದು ವರ್ಷ ಕಳೆದಿರಲಿಲ್ಲ. ಏಳು ತಿಂಗಳಲ್ಲಿ ಮತ್ತೆ ಯಾದಗಿರಿ ಸೈಬರ್ ಕ್ರೈಂ ಠಾಣೆಗೆ ವರ್ಗಾವಣೆಯಾಗಿದ್ದರು. ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲೇ ಮುಂದುವರೆಸಲು ಶಾಸಕ ಚೆನ್ನಾರೆಡ್ಡಿ 30 ಲಕ್ಷ ರೂ. ಬೇಡಿಕೆ ಇಟ್ಟಿದ್ದರು. ಇದರಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದ ಪಿಎಸ್ ಐ ಶುಕ್ರವಾರ (ಆಗಸ್ಟ್ .02) ಮಧ್ಯಾಹ್ನ ವಸತಿ ಗೃಹದಲ್ಲಿ ಮಲಗಿದ್ದಲ್ಲೇ ಮೃತಪಟ್ಟಿದ್ದಾರೆ. ಮೂಗಿನಲ್ಲಿ ಹಾಗೂ ಬಾಯಯಲ್ಲಿ ರಕ್ತ ಬಂದಿತ್ತು. ಈ ಸಾವಿಗೆ ಶಾಸಕ ಚೆನ್ನಾರೆಡ್ಡಿ ಮತ್ತು ಪಂಪನಗೌಡ ಕಾರಣ. ಶಾಸಕ ಚೆನ್ನಾರೆಡ್ಡಿ ನಮಗೆ ಜಾತಿ ನಿಂದನೆ ಮಾಡಿದ್ದಾರೆ ಎಂದು ಪರಶುರಾಮ ಪತ್ನಿ ಶ್ವೇತಾ ಆರೋಪಿಸಿದ್ದಾರೆ.

## ನಂಬಿದವರು ಅಸಹಾಯಕ ಸ್ಥಿತಿಯಲ್ಲಿದ್ದಾಗಲೇ ಆ ಇಬ್ಬರು ವಿವಾಹಿತರ ಮಧ್ಯೆ ಪ್ರೇಮಾಂಕುರ!



**ಬೆಂಗಳೂರು:** ಜೋಡಿ ಆ ಯಪ್ ನಲ್ಲಿ ಪರಿಚಯವಾಗಿ, ಅದು ಪ್ರೇಮಕ್ಕೆ ತಿರುಗಿ ನಂತರ ಜೋಡಿಯಾಗಲು ಮುಂದಾದ ವಿವಾಹಿತರಿಬ್ಬರು ಮನೆ ಕಳವು ಮಾಡಿದ ಆರೋಪದಲ್ಲಿ ಪೊಲೀಸರ ಬಲೆಗೆ ಬಿದ್ದ ಘಟನೆ ಬೆಂಗಳೂರಿನ ಆಡುಗೋಡಿಯಲ್ಲಿ ವರದಿಯಾಗಿದೆ. ವಿವಾಹಕ್ಕೆ ಹಣ ಹೊಂದಿಸಲು ಪ್ರಿಯಕರನಿಗೆ ಕಳ್ಳತನದ ಐಡಿಯಾ ಕೊಟ್ಟ ಪ್ರೇಯಸಿ ಹಾಗೂ ಪ್ರಿಯಕರ ಇಬ್ಬರೂ ಪೊಲೀಸರ ಅತಿಥಿಗಳಾಗಿದ್ದಾರೆ.

ಮೂಲತಃ ತಮಿಳುನಾಡಿನ ನಾರಾಯಣಸ್ವಾಮಿ (34) ಎಂಬಾತನಿಗೆ ಜೋಡಿ ಆ ಯಪ್ ನಲ್ಲಿ ನವೀನಾ (39) ಎಂಬಾಕೆಯ ಪರಿಚಯವಾಗಿದೆ. ನಾರಾಯಣಸ್ವಾಮಿ ಹೆಂಡತಿಗೆ ಪ್ಯಾರಲಿಸಿಸ್ ಆಗಿತ್ತು. ನವೀನಾಳ ಗಂಡನಿಗೂ ಪ್ಯಾರಲಿಸಿಸ್ ಆಗಿತ್ತು. ಇಬ್ಬರ ಪರಿಚಯ ಕ್ರಮೇಣ ಪ್ರೇಮಕ್ಕೆ ತಿರುಗಿದೆ. ನಂತರ ಇಬ್ಬರೂ ಮಕ್ಕಳನ್ನ ಬಿಟ್ಟು ಮದುವೆಯಾಗುವ ನಿರ್ಧಾರ ಮಾಡಿದರು. ಇದಕ್ಕಾಗಿ ಹಣ ಹೊಂದಿಸುವುದೇ ಅವರಿಗೆ ಸಮಸ್ಯೆಯಾಗಿತ್ತು.

**ಪ್ರೇಯಸಿ ಕೊಟ್ಟಳು ಐಡಿಯಾ!:** ಮದುವೆಗಾಗಿ ಹಣ ಹೊಂದಿಸಬೇಕಾಗಿದ್ದ ಕಾರಣ ನಾರಾಯಣಸ್ವಾಮಿಗೆ ಪ್ರೇಯಸಿ ಕಳ್ಳತನದ ಐಡಿಯಾ ಕೊಟ್ಟಿದ್ದಾಳೆ. ಆರೋಪಿ ನಾರಾಯಣಸ್ವಾಮಿ ತಾಯಿ ಬೆಳ್ಳಿಯಮ್ಮ ಲಕ್ಕಸಂದ್ರದಲ್ಲಿ ಮನೆಕೆಲಸ ಮಾಡುತ್ತಿದ್ದರು. ತಾಯಿ ಕೆಲಸ ಮಾಡುತ್ತಿದ್ದ ಮನೆಗೆ ಆಗಾಗ ಹೋಗುತ್ತಿದ್ದ ನಾರಾಯಣಸ್ವಾಮಿ, ಆ ಮನೆಯಲ್ಲಿ ಚಿನ್ನಾಭರಣ ಇರುವ ಮಾಹಿತಿ ಸಂಗ್ರಹಿಸಿದ್ದಾನೆ. ಅದು ರಿಹಾನ್ ಅಸ್ಮ ಎಂಬುವವರಿಗೆ ಸೇರಿದ ಮನೆಯಾಗಿತ್ತು. ಮೊದಲೇ ಕಳವಿಗೆ ಸ್ಕೆಚ್ ಹಾಕಿದ್ದ ನಾರಾಯಣಸ್ವಾಮಿ ಆ ಮನೆಯಿಂದ ಸುಮಾರು 330 ಗ್ರಾಂ ಚಿನ್ನಾಭರಣ ಕದ್ದಿದ್ದಾನೆ. ಬಳಿಕ ಕದ್ದ ಚಿನ್ನವನ್ನು ಇಬ್ಬರೂ ಸೇರಿ ಹಲವೆಡೆ ಅಡವಿಟ್ಟಿದ್ದರು. ಸುಮಾರು 16 ಕಡೆ ಚಿನ್ನವನ್ನು ಅಡವಿಟ್ಟು ಹಣ ಪಡೆದಿದ್ದರು. ಆ ಹಣದೊಂದಿಗೆ ಹೆಂಡತಿ ಮಕ್ಕಳನ್ನು ಬಿಟ್ಟು ಚೆನ್ನೈಗೆ ಜೋಡಿ ಪರಾರಿಯಾಗಿತ್ತು. ಅಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಿದ್ದರು.

ಎರಡೂ ಮನೆಗಳಲ್ಲಿ ತಮ್ಮನ್ನು ನಂಬಿ ಬಂದಿದ್ದವರು ದುಃಖದ ಮಡುವಿನಲ್ಲಿರುವಾಗ, ಅದರ ಮಧ್ಯೆಯೇ ಇವರಿಬ್ಬರಲ್ಲಿ ಪ್ರೇಮಾಂಕುರವಾಗಿದ್ದು ನಿಜಕ್ಕೂ ಸೋಜಿಗವಾಗಿದೆ. ಆದರೆ, ಪ್ರಕರಣ ಇಷ್ಟಕ್ಕೇ ಮುಗಿದಿಲ್ಲ. ಈ ಮಧ್ಯೆ, ರಿಹಾನ್ ಅಸ್ಮ ಕುಟುಂಬದವರು ನಾರಾಯಣಸ್ವಾಮಿ ಮೇಲೆ ಅನುಮಾನ ವ್ಯಕ್ತಪಡಿಸಿ, ಆಡುಗೋಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ದೂರಿನ ಆಧಾರದಲ್ಲಿ ಜೋಡಿಯನ್ನು ಪತ್ತೆಮಾಡಿ ಕರೆತಂದು ವಿಚಾರಣೆ ನಡೆಸಿದ ಪೊಲೀಸರಿಗೆ ಸತ್ಯಾಂಶ ಗೊತ್ತಾಗಿದೆ. ಬಂಧಿತ ಆರೋಪಿಗಳಿಂದ 330 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ.

### ಧಾರವಾಡ ಕೆಐಎಡಿಬಿ ಅಕ್ರಮ ಪ್ರಕರಣ

# ಸಿಐಡಿ ತನಿಖೆ ಬೆನ್ನಲ್ಲೇ ಎಂಟ್ರಿ ಕೊಟ್ಟ ಇಡಿ

**ಧಾರವಾಡ:** ಧಾರವಾಡ ಕೆಐಎಡಿಬಿ ಕಚೇರಿ ಅಂದರೆ ಅಲ್ಲಿ ಅಕ್ರಮಗಳದ್ದೇ ಪಾರುಪತ್ಯ. ಕಳೆದ ವರ್ಷ ಇಲಾಖೆಯ ವಿಶೇಷ ಭೂ ಸ್ವಾಧೀನ ಅಧಿಕಾರಿಯಾಗಿದ್ದ ವ್ಹಿ. ಡಿ. ಸಜ್ಜನ್ ತಮ್ಮ ನಿವೃತ್ತಿಯ ಕೊನೆಯ ದಿನವೇ 30 ಕೋಟಿ ರೂಪಾಯಿ ಹಣವನ್ನು ವರ್ಗಾವಣೆ ಮಾಡಿರುವುದು ಬೆಳಕಿಗೆ ಬಂದಿತ್ತು. ಅದಕ್ಕೂ ಮುನ್ನ 20 ಕೋಟಿ ರೂ. ಡಬಲ್ ಪೇಮೆಂಟ್ ಹಗರಣವೂ ನಡೆದು, ಅದರಲ್ಲಿ ಸಜ್ಜನ್ ಮೊದಲನೇ ಆರೋಪಿ ಆಗಿ, ಜೈಲು ಕೂಡ ಕಂಡು ಬಂದಿದ್ದರು. ಡಬಲ್ ಪೇಮೆಂಟ್ ಕುರಿತು ಸಿಐಡಿ ತನಿಖೆಯ ಚಾರ್ಜ್ ಶೀಟ್ ನಲ್ಲಿ ಒಂದೇ ದಿನದಲ್ಲಿ 30 ಕೋಟಿ ರೂಪಾಯಿ ಹಣ ವರ್ಗಾವಣೆ ಬಗ್ಗೆ ಆರೋಪಿಸಲಾಗಿತ್ತು. ಇದೇ ವೇಳೆ ಸಿಐಡಿ ತನಿಖೆಯಲ್ಲಿ ಸಾಕಷ್ಟು ಲೋಪಗಳಾಗಿವೆ



ಎನ್ನುವ ಆರೋಪವೂ ಕೇಳಿ ಬಂದಿತ್ತು. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ(ಇಡಿ) ಎಂಟ್ರಿ ಕೊಟ್ಟಿದೆ. ಇಂದು ಬೆಂಗಳೂರಿನಿಂದ ಆಗಮಿಸಿದ ಇಡಿ ಅಧಿಕಾರಿಗಳ ತಂಡ, ಕೆಐಎಡಿಬಿ ಕಚೇರಿಗೆ ದಾಳಿ ಮಾಡಿ ತನಿಖೆ ಆರಂಭಿಸಿದೆ.

ಸರ್ಕಾರ ಹಾಗೂ ರೈತರ ನಡುವೆ ಕೆಲಸ ಮಾಡುವ ಇಲಾಖೆ ಇದಾಗಿದೆ. ರೈತರಿಂದ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಕೈಗಾರಿಕೆಗಳಿಗೆ ನೀಡಲಾಗುತ್ತದೆ. ಆದರೆ, ಇದನ್ನೇ ದಂಧೆ ಮಾಡಿಕೊಂಡ ಅಧಿಕಾರಿಗಳು ಹಾಗೂ ಏಜೆಂಟರು ನಿರಂತರವಾಗಿ ಹಣವನ್ನು ಲೂಟಿ ಮಾಡುತ್ತಲೇ ಬಂದಿದ್ದಾರೆ. ಇನ್ನು ಇದೇ ವೇಳೆ ಬೆಂಗಳೂರಿನ ಖನಿಜ ಭವನದಲ್ಲಿರುವ ಕೆಐಎಡಿಬಿ ಕಚೇರಿಗೂ ದಾಳಿ ಮಾಡಿರುವ ಇಡಿ ತಂಡ, ಅಲ್ಲಿಯೂ ತನಿಖೆ ಶುರು ಮಾಡಿದೆ. ಈ ಇಲಾಖೆಯ ವಿಶೇಷ ಡಿಸಿ ದಯಾನಂದ ಅವರ ಹೆಸರು ಕೂಡ ಈ ಪ್ರಕರಣದಲ್ಲಿ ಕೇಳಿ ಬಂದಿತ್ತು. ಆದರೆ, ಸಿಐಡಿ ಆರೋಪಪಟ್ಟಿಯಲ್ಲಿ ಅವರ ಹೆಸರನ್ನು ಸೇರ್ಪಡೆ ಮಾಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಈ ಬಗ್ಗೆ ಜಾರಿ ನಿರ್ದೇಶನಾಲಯಕ್ಕೆ ಬಸವರಾಜ ಕೊರವರ್ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಇಂದು ದಾಳಿ ಮಾಡಿರೋ ಇಡಿ ಅಧಿಕಾರಿಗಳು ತನಿಖೆಯನ್ನು ಶುರು ಮಾಡಿದ್ದಾರೆ.

ಸಿಐಡಿ ತನಿಖೆಯಲ್ಲಿ ಸಾಕಷ್ಟು ಲೋಪಗಳಾಗಿರುವುದರಿಂದ ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎನ್ನುವ ಕೂಗು ಕೂಡ ಕೇಳಿ ಬಂದಿತ್ತು. ಆದರೆ, ಅದೇಕೋ ಸರಕಾರ ಮಾತ್ರ ಈ ಹಗರಣವನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಇದೇ ಕಾರಣಕ್ಕೆ ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಲಾಗಿತ್ತು. ಕೊನೆಗೂ ಜಾರಿ ನಿರ್ದೇಶನಾಲಯ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಇದೀಗ ತನಿಖೆ ಶುರು ಮಾಡಿದೆ. ಈ ತನಿಖೆಯಲ್ಲಿ ಮತ್ತೆ ಯಾವೆಲ್ಲ ಹೊಸ ಅಕ್ರಮಗಳು ಹೊರಗೆ ಬರುತ್ತವೆಯೋ ಕಾದು ನೋಡಬೇಕಿದೆ.

## ಜನ ವಸತಿ ಪ್ರದೇಶದಲ್ಲೇ ವಿಮಾನ ಪತನ ಒಟ್ಟು 62 ಜನರ ಸಾವು

**ಬ್ರೆಜಿಲ್:** ಬ್ರೆಜಿಲ್‌ನಲ್ಲಿ ಭಾರಿ ವಿಮಾನ ಅಪಘಾತ ಸಂಭವಿಸಿದ್ದು ಅದರಲ್ಲಿದ್ದ 62 ಜನರೆಲ್ಲರೂ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಏರ್ ಲೈನ್ ವೊಪಾಸ್ ಲಿನ್ಹಾಸ್ ಏರಿಯಾಸ್ ನಿರ್ವಹಿಸುತ್ತಿದ್ದ ATR-72ಟರ್ಬೊಪ್ರೊಪ್ ವಿಮಾನವು ಪರಾನಾ ರಾಜ್ಯದ ಕ್ಯಾಸ್ಕಾವೆಲ್ ನಿಂದ ಸಾವೊ ಪಾಲೊದಲ್ಲಿನ ಗೌರುಲ್ಹೋಸ್ ಗೆ ತೆರಳುತ್ತಿತ್ತು. ಆದರೆ, ಮಾರ್ಗ ಮಧ್ಯೆ ಸಾವೊ ಪಾಲೊ ನಗರದ ಜನವಸತಿ ಪ್ರದೇಶದಲ್ಲೇ ಪತನಗೊಂಡಿದೆ. ಅದರಲ್ಲಿದ್ದ 62 ಜನ ಸಾವನ್ನಪ್ಪಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಅಪಘಾತ ಸಂಭವಿಸುತ್ತಿದ್ದಂತೆ ಸ್ಥಳಕ್ಕೆ ಸಾವೊ ಪಾಲೊದ ರಾಜ್ಯ ಅಗ್ನಿಶಾಮಕ ದಳದ ಏಳು ತಂಡ ತೆರಳಿ ಬೆಂಕಿ ನಂದಿಸಿದೆ. 58 ಪ್ರಯಾಣಿಕರು ಮತ್ತು ನಾಲ್ವರು ಸಿಬ್ಬಂದಿಯನ್ನು ಹೊತ್ತೊಯ್ದು ಸಾವೊ ಪಾಲೊದ ಗೌರುಲ್ಹೋಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದ ವಿಮಾನ ಅಪಘಾತಕ್ಕೀಡಾಗಿದೆ. ಎಂದು ಏರಲೈನ್ ವೊಪಾಸ್ ತಿಳಿಸಿದೆ. ಆದರೆ, ಅಪಘಾತಕ್ಕೆ ಕಾರಣವೇನೆಂದು ತಿಳಿದು ಬಂದಿಲ್ಲ.

ಸಮೀಪದ ಕಾಂಡೋಮಿನಿಯಂ ಕಾಂಪ್ಲೆಕ್ಸ್‌ನಲ್ಲಿರುವ ಒಂದು ಮನೆಗೆ ಮಾತ್ರ ಹಾನಿಯಾಗಿದೆ. ನಿವಾಸಿಗಳಿಗೆ ಯಾವುದೆ ಗಾಯವಾಗಿಲ್ಲ. ವಿಮಾನ ಅಪಘಾತದ ದೃಶ್ಯ ಸ್ಥಳೀಯರ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ವಿಮಾನವು ಆಕಾದಲ್ಲಿ ತಿರುಗುತ್ತ ನೆಲಕ್ಕೆ ಅಪ್ಪಳಿಸಿದೆ. ವಿಮಾನ ಭೂಮಿಗೆ ಬಿದ್ದ ಕೂಡಲೆ ಹೊತ್ತಿ ಉರಿದಿದೆ.

## ಸೌಲಭ್ಯ ಒದಗಿಸಲು ಕ್ರಮ

ಕಾನೂನು ಮೂಲಕ ಅನುಮತಿ ಪಡೆದುಕೊಳ್ಳುತ್ತೇವೆ. ಕಾನೂನು ನಮಗೆ ರಕ್ಷಣೆ ನೀಡಲಿದೆ. ಕೇಂದ್ರದಲ್ಲಿ ಸಚಿವರನ್ನ ಭೇಟಿ ಮಾಡಿದ್ದೇನೆ. ಅವರು ಎಂದೂ ರೈತರ ಪರ ಇದ್ದ ಉದಾಹರಣೆಯೇ ಇಲ್ಲ. ಅವರ ಬುಡುಬುಡುಕೆ ಮಾತುಗಳು ಬೇಕಿಲ್ಲ. ಹೊಸದಾಗಿ ಪಂಚೆ ಹಾಕಿದ್ದನ್ನ ಬಿಟ್ರೆ ಎಂದೂ ರೈತರ ಪರ ನಿಂತಿಲ್ಲ. ಕೇಂದ್ರ ಇರಿಗೇಸನ್ ಮಿನಿಸ್ಟರ್ ಭೇಟಿ ಮಾಡಿ ಸಭೆ ಕರೆಯುವಂತೆ ಮನವಿ ಮಾಡಿದ್ದೇವೆ. 71 TCD ಈಗಾಗಲೇ ಸಮುದ್ರಕ್ಕೆ ಹೋಗಿದೆ ಎಂದರು.

**ಕಾವೇರಿ ಅಮ್ಯೂಸ್ ಮೆಂಟ್ ಪಾರ್ಕ್ ನಿರ್ಮಾಣಕ್ಕೆ ಚಾಲನೆ:** ಇನ್ನು ಅಧಿಕಾರಿಗಳು, ಜನಪ್ರತಿನಿಧಿಗಳನ್ನ ಒಳಗೊಂಡ ತಂಡ ಕಾವೇರಿ ಆರತಿ ಅಧ್ಯಯನಕ್ಕೆ ಪ್ರವಾಸ ಕೈಗೊಳ್ಳುತ್ತಿದೆ. ಕಾವೇರಿ ಅಮ್ಯೂಸ್ ಮೆಂಟ್ ಪಾರ್ಕ್ ನಿರ್ಮಾಣಕ್ಕೆ ಈಗ ಇರುವ ಸುಮಾರು 200 ಎಕರೆ ಜಾಗದಲ್ಲೇ ಅಭಿವೃದ್ಧಿ ಪಡಿಸಲಾಗುವುದು. ನಮ್ಮ ಪರಂಪರೆ ಉಳಿಸಿಕೊಂಡು ಪಾರ್ಕ್ ಅಭಿವೃದ್ಧಿ ಮಾಡುತ್ತೇವೆ. ಟೆಂಡರ್ ಕರೆಯುತ್ತಿದ್ದೇವೆ. ಸುಮಾರು 2 ಸಾವಿರ ಕೋಟಿ ಲೆಕ್ಕಾಚಾರ ಇದೆ ಎಂದರು.

## ದಿನಾಚರಣೆ ಕೈಬಿಡಿ

ವಸ್ತುನಿಷ್ಠ ಪರಿಹಾರವನ್ನು ಹುಡುಕಬೇಕಾಗಿದೆ. ಸರ್ಕಾರಗಳು ಈ ಕುರಿತು ಈ ಹಿಂದೆಯೂ ಪ್ರಯತ್ನವನ್ನು ಮಾಡಿವೆ. ಈಗಲೂ ಮಾಡಬೇಕಿದೆ. ಈ ಸಮಸ್ಯೆಗಳು ಎಷ್ಟು ಬೇಗ ಪರಿಹಾರವಾದರೆ, ಅಷ್ಟು ಬೇಗ ಒಳಿತಾಗುತ್ತದೆ. ಖಾಸಗಿ ಶಾಲೆಗಳು ತಮ್ಮದೇ ಆದ ರೀತಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡಲು ಕೊಡುಗೆ ನೀಡುತ್ತಿರುವುದು ನಿರ್ವಿವಾದ ಸಂಗತಿ. ಅದಕ್ಕೆ ಪೂರಕವಾಗಿ ಅವರ ನೈಜ ಸಮಸ್ಯೆಗಳಿಗೆ ಸರ್ಕಾರವು ಪರಿಹಾರವನ್ನು ತ್ವರಿತಗತಿಯಲ್ಲಿ ಹುಡುಕಬೇಕಿದೆ.

ಆದರೆ ಸ್ವಾತಂತ್ರ್ಯ ದಿನೋತ್ಸವದಂದು ಪ್ರತಿಭಟನೆಯ ದಿನವನ್ನಾಗಿ ಆಚರಿಸಲು ಆಯ್ದುಕೊಂಡಿರುವುದು ಯಾರು ಒಪ್ಪಲಾಗದ ಸಂಗತಿ. ಸ್ವಾತಂತ್ರ್ಯ ದಿನ ವನ್ನು ಸಂಭ್ರಮದಿಂದ ಆಚರಿಸುತ್ತಾ, ಮಕ್ಕಳಲ್ಲಿ-ಯುವ ಜನಾಂಗದಲ್ಲಿ ನಮ್ಮ ದೇಶದ ಕುರಿತು ಹೆಮ್ಮೆ, ಅಭಿಮಾನ, ಉತ್ಸಾಹ, ಆದರ್ಶಗಳನ್ನು ತುಂಬಬೇಕಾದ ಶಿಕ್ಷಣ ಸಂಸ್ಥೆಗಳೇ ಸ್ವಾತಂತ್ರ್ಯ ದಿನವನ್ನು ಪ್ರತಿಭಟನಾ ದಿನವನ್ನಾಗಿ ಆಚರಿಸಲು ಹೊರಟಿರುವುದು ತೀರಾ ದುರದೃಷ್ಟಕರವಾದ ಸಂಗತಿ. ಇದು ಸಮಾಜಕ್ಕೆ ಒಟ್ಟು ತಪ್ಪು ಸಂದೇಶವನ್ನು ಹಾಗೂ ನಕರಾತ್ಮಕ ಭಾವನೆಯನ್ನು ಹರಡುತ್ತದೆ. ವಿದ್ಯಾರ್ಥಿಗಳಲ್ಲಿ, ಪೋಷಕರಲ್ಲಿ ಒಂದು ರೀತಿಯ ನಿರಾಶೆಯನ್ನು, ದೇಶದ ಕುರಿತು ಸಿನಿಕತನವನ್ನು ಉಂಟುಮಾಡುತ್ತದೆ.

**ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ:** ಈಗಾಗಲೇ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಕುಸಿಯುತ್ತಿರುವ ಮೌಲ್ಯಗಳ ಬಗ್ಗೆ ಎಲ್ಲರೂ ಚಿಂತಿತರಾಗಿದ್ದಾರೆ. ಈ ಸಮಯದಲ್ಲಿ ಸ್ವಾತಂತ್ರ್ಯ ದಿನದಂದು ಪ್ರತಿಭಟಿಸುವ ಪ್ರವೃತ್ತಿ ಮುಂದಿನ ಪೀಳಿಗೆಯ ಮೇಲೆ ಕೆಟ್ಟ ಪರಿಣಾಮವನ್ನು ಬೀರುವುದು ಖಚಿತ. ಸ್ವಾತಂತ್ರ್ಯ ದಿನದಂದೇ ಪ್ರತಿಭಟನೆಯನ್ನು ಹಮ್ಮಿಕೊಳ್ಳುವುದರಿಂದ ಯಾವುದೇ ಉದ್ದೇಶ ಸಾಧನೆಯಾಗುವುದಿಲ್ಲ. ಅದರ ಬದಲು ಈ ಶಾಲೆಗಳ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತದೆ. ಆದರಿಂದ ಪ್ರತಿಭಟನೆಗೆ ಕರೆ ಕೊಟ್ಟಿರುವ ಸಂಘಟನೆಗಳ ಪ್ರಮುಖರಿಗೆಲ್ಲ ಹಾಗೂ ಖಾಸಗಿ ಶಿಕ್ಷಕರಲ್ಲಿ ನನ್ನದೊಂದು ಕಳಕಳಿಯ ಮನವಿ ಮಾಡಿದ್ದಾರೆ.

ಆಗಸ್ಟ್ 15ರಂದು ಹಮ್ಮಿಕೊಳ್ಳಲು ಉದ್ದೇಶಿಸಿರುವ ಈ ಪ್ರತಿಭಟನೆಯನ್ನು ದಯವಿಟ್ಟು ಕೈ ಬಿಡಿ. ಸಂಭ್ರಮದಿಂದ ಮತ್ತು ಹೆಮ್ಮೆಯಿಂದ ಸ್ವಾತಂತ್ರ್ಯ ದಿನವನ್ನು ಆಚರಿಸಿ, ನಮ್ಮ ಮಕ್ಕಳನ್ನು ಪ್ರತಿಭಾವಂತ ನಾಗರಿಕರನ್ನಾಗಿ ಮಾಡುವ ಕಡೆ ಹೆಜ್ಜೆ ಇಡೋಣ. ನಿಮ್ಮ ಎಲ್ಲಾ ಮನವಿಗಳ ಕುರಿತ ಹೋರಾಟಕ್ಕೆ ಬೇರೊಂದು ದಿನವನ್ನು ನಿಗದಿ ಮಾಡಿ. ಯಾವುದೇ ಕಾರಣಕ್ಕೂ ನಮ್ಮ ಹೆಮ್ಮೆಯ ದೇಶಕ್ಕೆ ಸ್ವಾತಂತ್ರ್ಯ ಬಂದ ದಿನವನ್ನು ಕರಾಳ ದಿನವನ್ನಾಗಿ ಪ್ರತಿಭಟನಾ ದಿನವನ್ನಾಗಿ ಆಚರಿಸಬೇಡಿ ಎಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

## ನೋಟಿಸ್ ಸಲ್ಲಿಸುವ ಸಾಧ್ಯತೆ

ಪ್ರತಿಪಕ್ಷಗಳು ಸದನವನ್ನು ನಿಯಮಗಳು ಮತ್ತು ಸಂಪ್ರದಾಯಗಳ ಮೂಲಕ ನಡೆಸಬೇಕೆಂದು ಬಯಸುತ್ತವೆ ಮತ್ತು ಸದಸ್ಯರ ವಿರುದ್ಧ ವೈಯಕ್ತಿಕ ಟೀಕೆಗಳು ಸ್ವೀಕಾರಾರ್ಹವಲ್ಲ ಎಂದು ಮೂಲಗಳು ತಿಳಿಸಿವೆ.

### ಮೊದಲನೇ ಪುಟದಿಂದ...

ಇಡೀ ವಿರೋಧ ಪಕ್ಷದ ವಿರುದ್ಧ ಅಧ್ಯಕ್ಷರು ''ಪಕ್ಷಪಾತ'' ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿ ಜಗದೀಪ್ ಧಂಖರ್ ಮತ್ತು ಇಂಡಿಯಾ ಬ್ಲಾಕ್ ಪಕ್ಷಗಳು ಇಂದು ಮತ್ತೊಮ್ಮೆ ಕಿತ್ತಾಡಿಕೊಂಡವು.

ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾತನಾಡಲು ಅವಕಾಶವಿಲ್ಲ. ಆಗಾಗ ಅಡ್ಡಿಪಡಿಸಲಾಗುತ್ತದೆ ಮತ್ತು ಅವರ ಮೈಕ್ ಗಳನ್ನು ಆಗಾಗ ಆಫ್ ಮಾಡಲಾಗುತ್ತದೆ ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಉಪ ನಾಯಕ ಪ್ರಮೋದ್ ತಿವಾರಿ ಹೇಳಿದ್ದಾರೆ.

## ನಟಿ ಜಾಕ್ವೆಲಿನ್ ಗೆಳೆಯ ಸುಕೇಶ್

ಪ್ರಸ್ತುತ ರಾಷ್ಟ್ರ ರಾಜಧಾನಿಯ ಮಂಡೋಲಿ ಜೈಲಿನಲ್ಲಿರುವ ಚಂದ್ರಶೇಖರ್ ಕೇರಳವು ಏನಾಗುತ್ತಿದೆ ಎಂಬುದನ್ನು ನೋಡಲು ನನಗೆ ತುಂಬಾ ನೋವಾಗಿದೆ. ಇದೀಗ ಅಲ್ಲಿ ಜನರಿಗೆ ನಮ್ಮ ಸಹಾಯದ ಅಗತ್ಯ ಇದೆ. ಅಗತ್ಯವಿರುವ ಈ ಸಮಯದಲ್ಲಿ ಬೆಂಬಲ ನೀಡಲು ಬಯಸುತ್ತೇನೆ ಎಂದು ಕೇರಳ ಸಿಎಂಗೆ ಬರೆದ ಪತ್ರದಲ್ಲಿ ಬರೆದಿದ್ದಾರೆ ಎಂದು ಅವರ ಪರ ವಕೀಲ ಅನಂತ್ ಮಲಿಕ್ ಹೇಳಿದ್ದಾರೆ.

ಸಂತ್ರಸ್ತರಿಗೆ 15 ಕೋಟಿ ಸಹಾಯವನ್ನು ಸ್ವೀಕರಿಸಿ: ಸುಕೇಶ್

ಕೇರಳದ ಮುಖ್ಯಮಂತ್ರಿಗಳೇ ನಮ್ಮ ಪ್ರತಿಷ್ಠಾನದಿಂದ ಪರಿಹಾರ ನಿಧಿಗೆ 15 ಕೋಟಿ ರೂಪಾಯಿಗಳನ್ನು ಸ್ವೀಕರಿಸಲು ನಾನು ಈ ಮೂಲಕ ವಿನಂತಿಸುತ್ತಿದ್ದೇನೆ. ಸಂಕಷ್ಟ ಪರಿಹಾರ ನಿಧಿಯನ್ನು ಇದನ್ನು ಬಳಸಿಕೊಳ್ಳಿ. ವಯನಾಡ್ ಪರ ನಾನು ನಿಲ್ಲುತ್ತೇನೆ. ಸಂತ್ರಸ್ತರಿಗೆ ತಕ್ಷಣ 300 ಮನೆಗಳನ್ನು ನಿರ್ಮಿಸಲು ಹೆಚ್ಚಿನ ಸಹಾಯವನ್ನು ಮಾಡುತ್ತೇನೆ ಎಂದು ಹೇಳಿದ್ದಾರೆ.

ಇದು ಸುಕೇಶ್ ಚಂದ್ರಶೇಖರ್ ಅವರು ಕಾನೂನು ಬದ್ಧ ಖಾತೆಯಿಂದ ನೀಡಲಾಗುವುದು. ರಾಜ್ಯ ಸರ್ಕಾರವು ಈ ಪ್ರಸ್ತಾಪವನ್ನು ಸ್ವೀಕರಿಸಲು ಮತ್ತು ಭೂಕುಸಿತ ದುರಂತದಲ್ಲಿ ಸಂತ್ರಸ್ತರ ಕಲ್ಯಾಣ ಮತ್ತು ಪುನರ್ವಸತಿಗೆ ಬಳಸಿಕೊಳ್ಳುವಂತೆ ವಿನಂತಿಸಿದರು ಎಂದು ಸುಕೇಶ್ ಚಂದ್ರಶೇಖರ್ ಹೇಳಿದ್ದಾರೆ.

ಚಂದ್ರಶೇಖರ್ ಅವರ ಪತ್ರಕ್ಕೆ ಕೇರಳ ಸರ್ಕಾರ ಇನ್ನೂ ಪ್ರತಿಕ್ರಿಯೆ ನೀಡಿಲ್ಲ. ಆರೋಪಿತ ಹಾಗೂ ಅಕ್ರಮ ಹಣ ಸಂಗ್ರಹ ಪ್ರಕರಣದಲ್ಲಿ ಜೈಲಿನಲ್ಲಿದ್ದಾರೆ. ಆ ಕಾರಣ ಕೇರಳ ಸರ್ಕಾರ ಕಾನೂನು ಬದ್ಧವಾಗಿ ಹೆಜ್ಜೆ ಇಡಲು ಮುಂದಾಗಿದೆ. ಇನ್ನು ಸ್ಥಳೀಯ ಆಡಳಿತವು ಬುಧವಾರ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ, ಒಂದು ವಾರದ ಹಿಂದೆ ಈ ಉತ್ತರ ಕೇರಳ ಜಿಲ್ಲೆಯಲ್ಲಿ ಸಂಭವಿಸಿದ ಭಾರೀ ಭೂಕುಸಿತದ ನಂತರ 138 ಜನರು ಕಾಣೆಯಾಗಿದ್ದಾರೆ ಎಂದು ಹೇಳಿದೆ.

## ಉಪಮುಖ್ಯಮಂತ್ರಿ ಎಂದು ಕರೆದ ಸಚಿವರು

ಈ ಮೂಲಕ ಉದಯನಿಧಿ ಅವರನ್ನು ಶೀಘ್ರದಲ್ಲೇ ಉಪಮುಖ್ಯಮಂತ್ರಿಯಾಗಿ ಉನ್ನತೀಕರಿಸುವ ಸಾಧ್ಯತೆ ಇದೆ ಎಂಬ ಸ್ಪಷ್ಟ ಸೂಚನೆ ಸಿಕ್ಕಿದೆ.

ಮುಖ್ಯಮಂತ್ರಿ ಸ್ಟಾಲಿನ್ ಅಮೆರಿಕ ಪ್ರವಾಸ ಕೈಗೊಳ್ಳುವ ಮುನ್ನ ಅವರ ಪುತ್ರ ಉದಯನಿಧಿ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಲಾಗುವುದು ಎಂದು ಐಎಎನ್‌ಎಸ್ ಈ ಹಿಂದೆ ವರದಿ ಮಾಡಿತ್ತು. ಸ್ಟಾಲಿನ್ ಅವರು ಆಗಸ್ಟ್ 22ರಂದು ತಮ್ಮ ಯುಎಸ್ ಪ್ರವಾಸವನ್ನು ಪ್ರಾರಂಭಿಸುತ್ತಾರೆ.

ಉದಯನಿಧಿ ಅವರ ಬಗ್ಗೆ ಸ್ಟಾಲಿನ್ ಬಳಿ ಕೇಳಿದಾಗ ಸ್ಟಾಲಿನ್ ಅವರು ಮಾಧ್ಯಮ ಪ್ರತಿನಿಧಿಗಳಿಗೆ ತಮ್ಮ ಮಗನನ್ನು ಉಪಮುಖ್ಯಮಂತ್ರಿ ಮಾಡುವ ಸಮಯ ಪಕ್ವವಾಗಿಲ್ಲ ಎಂದು ಹೇಳಿದ್ದರು.

2026ರಲ್ಲಿ ನಡೆಯಲಿರುವ ತಮಿಳುನಾಡು ವಿಧಾನಸಭಾ ಚುನಾವಣೆಗೆ ಎರಡು ವರ್ಷಗಳಿಗಿಂತ ಕಡಿಮೆ ಸಮಯ ಉಳಿದಿರುವಾಗ, ಉದಯನಿಧಿ ಅವರನ್ನು ಉಪಮುಖ್ಯಮಂತ್ರಿಯಾಗಿ ಆಯ್ಕೆ ಮಾಡುವ ಬಗ್ಗೆ ಚರ್ಚೆ ಹೆಚ್ಚಾಗಿದೆ.

## ತುಕ್ಕು ಹಿಡಿದ ಪೈಪ್!

ಕೇಂದ್ರ ಸರ್ಕಾರದ ಕನಸಿನ ಯೋಜನೆ ಗುತ್ತಿಗೆದಾರರು, ಅಧಿಕಾರಿಗಳು ಸೇರಿ ಹಳ್ಳಹಿಡಿಸಿದ್ದಾರೆ. ಯೋಜನೆಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದ್ದು ತನಿಖೆ ಮಾಡಬೇಕು ಅಂತ ಒತ್ತಾಯಿಸಿದ್ದಾರೆ.

ಯೋಜನೆ ಹದಗೆಟ್ರು, ಗುತ್ತಿಗೆದಾರರಿಗೆ ಅಧಿಕಾರಿಗಳು ಈಗಾಗಲೇ ಎಲ್ಲ ಹಣ ಪಾವತಿ ಮಾಡಿದ್ದಾರೆ. ಗದಗ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ನಿತ್ಯವೂ ಜೆಜೆಎಂ ಯೋಜನೆ ವಿರುದ್ಧ ದೂರು ಬಂದ್ರೂ, ಅಧಿಕಾರಿಗಳು ಮಾತ್ರ ಕ್ಯಾರೇ ಎನ್ನುತ್ತಿಲ್ಲ. ಈ ಹಿಂದಿನ ಬಿಜೆಪಿ ಸರ್ಕಾರವೂ ಕೂಡ ಮೌನವಾಗಿತ್ತು. ಪೈಪ್ ನೆಲದಲ್ಲಿ ಕನಿಷ್ಠ ಮೂರು ಫೂಟ್ ಅಗೆದು ಹಾಕಬೇಕು ಅಂತ ಯೋಜನೆಯಲ್ಲಿದೆ. ಆದ್ರೆ, ಗುತ್ತಿಗೆದಾರರು 1 ಫೂಟ್ ಒಂದೂವರೆ ಫೂಟ್ ಅಗೆದು ಬೇಕಾಬಿಟ್ಟಿ ಪೈಪ್ ಹಾಕಿ ಕಾಮಗಾರಿ ಮುಗಿಸಿದ್ದಾರಂತೆ. ಪೈಪ್ ಗಳು ಸಂಪೂರ್ಣ ಕಳಪೆ ಹಾಕಿದ್ದರಿಂದ ಮುರಿದು ಹೋಗುತ್ತಿವೆ. ಇನ್ನೂ ಕೇಂದ್ರ ಸರ್ಕಾರದ ಯೋಜನೆ ಬಗ್ಗೆ ಬಿಜೆಪಿ ಶಾಸಕ ಸಿ ಸಿ ಪಾಟೀಲರು ಕ್ಯಾರೇ ಎನ್ನುತ್ತಿಲ್ಲ ಅಂತ ಜನ್ರು ಕಿಡಿಕಾರಿದ್ದಾರೆ.

ಗುತ್ತಿಗೆದಾರರು ಜನ್ರಿಗೆ ನೀರು ತಲುಪಿದ್ರೆನೂ ಬಿಟ್ರೆನೂ ನಾವು ಮಾಡಿದ್ದೇ ಕಾಮಗಾರಿ ಅಂತ ಬೇಕಾಬಿಟ್ಟಿ ಮಾಡಿ ಹೋಗಿದ್ದಾರೆ. ಅಷ್ಟೇ ಅಲ್ಲ ಗ್ರಾಮಗಳಲ್ಲಿ ಮಾಡಿದ್ದ ಸಿಮೆಂಟ್ ಕಾಂಕ್ರಿಟ್ ರಸ್ತೆಗಳು ಸಂಪೂರ್ಣ ಹಾಳು ಮಾಡಿದ್ದಾರೆ. ಜೆಜೆಎಂ ಯೋಜನೆ ಬಂತು ನಮ್ಮ ಮನೆಗೆ ಮನೆಗೆ ನೀರು ಬರುತ್ತೆ ಅಂದ್ಕೊಂಡ ಜನ್ರು ಭ್ರಮನಿರಸಗೊಂಡಿದ್ದಾರೆ. ಇನ್ನಾದ್ರೂ ಕ್ಷೇತ್ರದ ಸಂಸದರು, ಶಾಸಕರು, ಸಚಿವರು, ಜಿಲ್ಲಾಡಳಿತ ಜೆಜೆಎಂ ಯೋಜನೆ ಕಾಮಗಾರಿ ಮಾಡಿದ ಗುತ್ತಿಗೆದಾರರು, ಅಧಿಕಾರಿಗಳಿಗೆ ಚಾಟಿ ಬೀಸುವ ಮೂಲಕ ಯೋಜನೆಯಿಂದ ಜನ್ರಿಗೆ ಆದ ಹಿಂಸೆಯಿಂದ ಮುಕ್ತಿ ನೀಡಬೇಕಿದೆ.

## ಪರಿಹಾರ

ಬಳಿಕ 18 ಲಕ್ಷ ರೂ. ಪರಿಹಾರದ ಚೆಕ್ ವನ್ನು ತಂದೆ ಸಣ್ಣಯಲ್ಲಪ್ಪ, ತಾಯಿ ಬಸವ್ವ ಹೆಸರಿನಲ್ಲಿ ಪರಿಹಾರದ ಚೆಕ್ ಅನ್ನು ಸ್ನೇಹಂ ಟೇಪಿಂಗ್ ಕಾರ್ಖಾನೆ ವಿತರಣೆ ಮಾಡಿದೆ.

ಮನೆಯ ಜವಾಬ್ದಾರಿಯನ್ನ ತನ್ನ ಮೇಲೆ ಹೊತ್ತು ಅಕ್ಕನ ಮದುವೆ ಮಾಡಿ ಇನ್ನಿಬ್ಬರ ಸಹೋದರಿಯರ ಓದಿನ ಜವಾಬ್ದಾರಿಯನ್ನೂ ಸಹ ತಾನೇ ತಡಗೆದುಕೊಂಡು ಕೆಲಸಕ್ಕೆ ಸೇರಿದ್ದ. ಮಂಗಳವಾರ ಸಂಜೆ ಶಾರ್ಟ್ ಸರ್ಕಿಟ್ ನಿಂದ ಹೊತ್ತಿಕೊಂಡ ಬೆಂಕಿಯಲ್ಲಿ ಸಜೀವವಾಗಿ ಯಲ್ಲಪ್ಪ ಬೆಂದು ಹೋಗಿದ್ದ. ಬೆಂಕಿಯ ಕೆನ್ನಾಲಿಗೆಗೆ ಯಲ್ಲಪ್ಪನ ದೇಹ ಸಂಪೂರ್ಣ ಸುಟ್ಟು ಕರಕಲಾಗಿ ಕೇವಲ ಮೂಳೆಗಳು ಮಾತ್ರ ಉಳಿದ್ದಿದ್ದವು.

ಲಿಫ್ಟ್‌ನ ಒಳಭಾಗದಲ್ಲಿ ಸಿಲುಕಿದ್ದ ಯಲ್ಲಪ್ಪ ಅಕ್ಷರಶಃ ಇನ್ನಿಲ್ಲದ ಸ್ಥಿತಿ ತಲುಪಿದ್ದ. ಕಾರ್ಯಾಚರಣೆ ನಡೆಸಿ ಶವದ ಅವಶೇಷ ಹೊರ ತೆಗೆದ ಅಧಿಕಾರಿಗಳು ಮಡಿಕೆಯಲ್ಲಿ ಹಾಕಿ ಯಲ್ಲಪ್ಪನ ಮೃತದೇಹದ ಅವಶೇಷಗಳನ್ನು ನೀಡಿದ್ದರು. ಸದ್ಯ ಈ ವಿಚಾರ ಜಿಲ್ಲೆ ಹಾಗೂ ಸಮಾಜಿಕ ಜಾಲತಾಣಗಳಲ್ಲಿ ಚರ್ಚಾ ವಿಷಯವಾಗಿದೆ. ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರೊ ಯಲ್ಲಪ್ಪನ ತಂದೆ ಜಿಲ್ಲಾಡಳಿತ ಹಾಗೂ ಕಾರ್ಖಾನೆ ಮೇಲೆ ಅಸಮಾಧಾನ ಹೊರ ಹಾಕಿದ್ದರು. ಘಟನೆ ಸಂಬಂಧ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿದೆ.

## ಬಂಧನ

ಮೀನುಗಾರರನ್ನು ಲಂಕಾ ನೌಕಾಪಡೆ ಬಂಧಿಸಿದೆ. ನಂತರ ಕಲ್ಪಿಟಿಯ ಮೀನುಗಾರಿಕಾ ಅಧಿಕಾರಿಗಳಿಗೆ ಹಸ್ತಾಂತರಿಸಲಾಯಿತು. ಈ ಹಿಂದೆ ಬಂಧಿತರಾಗಿದ್ದ 13 ಮೀನುಗಾರರನ್ನು ಬಿಡುಗಡೆ ಮಾಡುವಂತೆ ಶ್ರೀಲಂಕಾ ನ್ಯಾಯಾಲಯ ಆದೇಶ ನೀಡಿದ ಹಿನ್ನೆಲೆಯಲ್ಲಿ ಈ ಬಂಧನ ನಡೆದಿದೆ.

ಬಂಧನವನ್ನು ಖಂಡಿಸಿರುವ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ, ಪದೇ ಪದೇ ಮೀನುಗಾರರ ಬಂಧನಕ್ಕೆ ಶಾಶ್ವತ ಪರಿಹಾರವನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಕಿಡಿಕಾರಿದ್ದಾರೆ. ಈ ವಿಚಾರದಲ್ಲಿ ಕೇಂದ್ರದ ಮೇಲೆ ಒತ್ತಡ ಹೇರದ ಡಿಎಂಕೆ ಸರ್ಕಾರವನ್ನು ಅವರು ತರಾಟೆಗೆ ತೆಗೆದುಕೊಂಡರು.

''ಮೀನುಗಾರರು ಮತ್ತು ಅವರ ವಸ್ತುಗಳನ್ನು ಬಿಡುಗಡೆ ಮಾಡಲು ಕೇಂದ್ರವು ಕ್ರಮಗಳನ್ನು ತೆಗೆದುಕೊಳ್ಳುವಂತೆ ನಾನು ಒತ್ತಾಯಿಸುತ್ತೇನೆ. ಚುನಾವಣಾ ಸಮಯದಲ್ಲಿ ಕಚ್ಚತೀವು (ಲಂಕಾಗೆ ಬಿಟ್ಟುಕೊಟ್ಟ) ದ್ವೀಪದ ಬಗ್ಗೆ ಮಾತನಾಡಬೇಡಿ. ತಮಿಳುನಾಡು ಮೀನುಗಾರರು ಸಹ ಭಾರತೀಯರು ಎಂಬುದನ್ನು ನೆನಪಿನಲ್ಲಿಡಿ'' ಎಂದು ಪಳನಿಸ್ವಾಮಿ ಪತ್ರದಲ್ಲಿ ಹೇಳಿದ್ದಾರೆ.

## ಮಳೆಯೇ ಇಲ್ಲದೇ ಬೆಳೆ ಉಳಸಿಕೊಳ್ಳಲು ಟ್ಯಾಂಕರ್ ನೀರಿಗೆ ಮೊರೆ ಹೋದ ರೈತರು



**ಕೊಪ್ಪಳ:** ಕೊಪ್ಪಳದಲ್ಲಿ ಕಳೆದ ವರ್ಷ ಬೇಸಿಗೆಯಲ್ಲಿ ಬೆಳೆ ಉಳಸಿಕೊಳ್ಳಲು ರೈತರು ಟ್ಯಾಂಕರ್ ನೀರಿನ ಮೊರೆ ಹೋಗಿದ್ದರು. ಆದರೆ ಮಳೆಗಾಲದಲ್ಲಿ ಈ ಬಾರಿ ನೀರಿನ ಸಮಸ್ಯೆಯಾಗುವುದಿಲ್ಲ ಉತ್ತಮ ಮಳೆ ಬರುತ್ತೆ ಅಂತ ಅಂದುಕೊಂಡಿದ್ದ ರೈತರಿಗೆ ಶಾಕ್ ಆಗಿದೆ. ಮಳೆಗಾದಲ್ಲಿ ಕೂಡ ರೈತರು ತಮ್ಮ ಬೆಳೆ ಉಳಸಿಕೊಳ್ಳಲು ಟ್ಯಾಂಕರ್ ನೀರಿನ ಮೊರೆ ಹೋಗುವಂತಹ ಸ್ಥಿತಿ ನಿರ್ಮಾಣವಾಗಿದೆ. ಮಳೆ ಕೊರತೆಯಿಂದ ಒಂದಡೆ ಬೆಳೆ ಒಣಗುತ್ತಿದ್ದರೆ, ರೈತರು ಬೆಳೆ ಉಳಸಿಕೊಳ್ಳಲು ಪರದಾಡುತ್ತಿದ್ದಾರೆ.

ಹೌದು ರಾಜ್ಯದ ಮಲೆನಾಡು, ಕರಾವಳಿ, ಕಿತ್ತೂರು ಕರ್ನಾಟಕ ಭಾಗದ ಅನೇಕ ಜಿಲ್ಲೆಗಳಲ್ಲಿ ವರುಣದೇವ ಕಳೆದ ಕೆಲ ದಿನಗಳಿಂದ ಅಬ್ಬರಿಸಿ ಬೊಬ್ಬೆರೆಯುತ್ತಿದ್ದಾನೆ. ನಿರಂತರ ಮಳೆಯಿಂದ ಅನೇಕ ಅನಾಹುತಗಳು ನಡೆಯುತ್ತಿವೆ. ಯಾವಾಗ ಮಳೆ ನಿಲ್ಲುತ್ತೋ ಅಂತ ಅನೇಕ ಜಿಲ್ಲೆಯ ಜನರು ಕಾಯುತ್ತಿದ್ದಾರೆ. ಆದರೆ ನಮ್ಮದೇ ರಾಜ್ಯದ ಕೊಪ್ಪಳ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಮಳೆಯ ಕೊರತೆ ಕಾಡುತ್ತಿದ್ದು, ರೈತರು ಉತ್ತಮ ಮಳೆಗಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಮಳೆಯ ಕೊರತೆ ಹೆಚ್ಚಾಗಿದ್ದು, ಮಳೆಯನ್ನೇ ನಂಬಿ ಕೃಷಿ ಮಾಡುತ್ತಿರುವ ರೈತರ ಆತಂಕ ಹೆಚ್ಚಾಗುತ್ತಿದೆ. ಜಿಲ್ಲೆಯಲ್ಲಿ ಜುಲೈ ತಿಂಗಳಲ್ಲಿ 62 ಮಿಲಿ ಮೀಟರನಷ್ಟು ವಾಡಿಕೆಯ ಮಳೆಯಾಗಬೇಕಿತ್ತು. ಆದರೆ ಜಿಲ್ಲೆಯಲ್ಲಿ ಆಗಿದ್ದು ಕೇವಲ 46 ಮಿಲಿ ಮೀಟರ ಮಾತ್ರ. ಅಂದ್ರೆ ಶೇಕಡಾ 25 ರಷ್ಟು ಮಳೆ ಕೊರತೆಯಾಗಿದೆ.

ಆಗಸ್ಟ್ ಮೊದಲ ವಾರದಲ್ಲೂ ಕೂಡ ನಿರೀಕ್ಷಿತ ಮಳೆಯಾಗಿಲ್ಲ. ಅದರಲ್ಲೂ ಜಿಲ್ಲೆಯ ಕುಕನೂರು, ಕಾರಟಗಿ, ಗಂಗಾವತಿ, ಕೊಪ್ಪಳ ತಾಲೂಕಿನಲ್ಲಿ



ಸರಿಸುಮಾರು ಶೇಕಡಾ ಐವತ್ತಕ್ಕೂ ಹೆಚ್ಚು ಮಳೆ ಕೊರತೆಯಾಗಿದೆ. ಜಿಲ್ಲೆಯಲ್ಲಿ ಆಗಿರುವ 46 ಮಿಲಿ ಮೀಟರ ಮಳೆ ಪೈಕಿ ಹೆಚ್ಚಿನ ಮಳೆಯಾಗಿದ್ದು ಕುಷ್ಟಗಿ ಮತ್ತು ಯಲಬುರ್ಗಾ ತಾಲೂಕಿನಲ್ಲಿ ಮಾತ್ರ. ಉಳಿದ ತಾಲೂಕಿನಲ್ಲಿ ತೀವ್ರ ಮಳೆ ಕೊರತೆಯಾಗಿದೆ.

ಜೂನ್ ನಲ್ಲಿ ಬಿದ್ದಿದ್ದ ಉತ್ತಮ ಮಳೆಯಿಂದ ರೈತರು ಸಂತಸಗೊಂಡು ಸಾವಿರಾರು ರೂಪಾಯಿ ಖರ್ಚು ಮಾಡಿ ಮೆಕ್ಕಜೋಳ ಸೇರಿದಂತೆ ಅನೇಕ ಬೆಳೆಗಳನ್ನು ಬೆಳದಿದ್ದರು. ಆದರೆ ಜುಲೈ ತಿಂಗಳಲ್ಲಿ ತೀವ್ರ ಮಳೆ ಕೊರತೆಯಾಗಿದ್ದರಿಂದ ಬೆಳೆಗಳು ಒಣಗುತ್ತಿವೆ. ಕೊಪ್ಪಳ ತಾಲೂಕಿನ ಬೆಟಗೇರಿ ಸೇರಿದಂತೆ ಅನೇಕ ಕಡೆ ರೈತರು ತಮ್ಮ ಬೆಳೆಗಳನ್ನು ಉಳಸಿಕೊಳ್ಳಲು ಇದೀಗ ಟ್ಯಾಂಕರ್ ನೀರಿನ ಮೊರೆ ಹೋಗಿದ್ದಾರೆ.

ಮಳೆ ಆಶ್ರಿತ ಬೆಳೆಯಾಗಿ ಜಿಲ್ಲೆಯ ಬಹುತೇಕ ರೈತರು ಮೆಕ್ಕಜೋಳ, ಹೆಸರು, ತೊಗರಿ ಸೇರಿದಂತೆ ಅನೇಕ ಬೆಳೆಗಳನ್ನು ಬೆಳದಿದ್ದಾರೆ. ಸದ್ಯ ಬಿಸಿಲು ಕಡಿಮೆ ಇರೋದರಿಂದ ಮತ್ತು ಆಗಾಗ ಆಗುತ್ತಿರುವ ತುಂತುರ ಮಳೆಗೆ ಬೆಳೆಗಳು ಜೀವವನ್ನು ಹಿಡಿದುಕೊಂಡಿವೆ. ಆದರೆ ಸರಿಯಾಗಿ ಮಳೆಯಾಗದೇ ಇದ್ರೆ ತೇವಾಂಶ ಕಡಿಮೆಯಾಗಿ, ಇಳುವರಿ ಬರೋದಿಲ್ಲಾ ಅಂತಿದ್ದಾರೆ ರೈತರು.



ದುರಾಡಳಿತಕ್ಕೆ ಮೂಕ ಸಾಕ್ಷಿಯಾಗಿ ಯಥಾ ಸ್ಥಿತಿಯಲ್ಲಿದೆ ಅವ್ಯವಸ್ಥೆ

# ಮುಖ್ಯಮಂತ್ರಿ ಬಂದು ತಿಂಗಳಾದರೂ ನಿರ್ಮಾಣವಾಗದ ರಸ್ತೆ

**ಚಾಮರಾಜನಗರ:** ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಅಧಿಕಾರದ ಆಸೆಗೆ ಜೋತು ಬೀಳದೆ ತಿಂಗಳಿಗೊಮ್ಮೆಯಂತೆ ಶಾಪಗ್ರಸ್ತ ಚಾಮರಾಜನಗರಕ್ಕೆ ಛಲ ಬಿಡದ ತ್ರಿವಿಕ್ರಮನಂತೆ ಪ್ರವಾಸ ಮಾಡುತ್ತಿದ್ದರು ಸಹ ಜಿಲ್ಲೆಯ ಸ್ಥಳೀಯ ಆಡಳಿತ ಮಾತ್ರ ಗಾಢ ನಿದ್ರೆಗೆ ತಲುಪಿದಂತಿದೆ.

ಕಳೆದ ತಿಂಗಳಷ್ಟೆ ಸ್ಥಳೀಯ ಸಂಸದ ಸುನೀಲ್ ಬೋಸ್ ರವರ ಲೋಕಸಭಾ ಚುನಾವಣಾ ವಿಜಯದ ಅಭಿನಂದನಾ ಸಭೆಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಚಾಮರಾಜನಗರ ಪಟ್ಟಣದ ಜಿಲ್ಲಾ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾಂಗ್ರೆಸ್ ಕಾರ್ಯಕರ್ತರ ಹಾಗು ಜಿಲ್ಲೆಯ ಜನತೆಯ ಹರ್ಷೋದ್ಘಾರದಿ ಸಂತಸದಿ ಅದ್ದೂರಿ ಜನೋತ್ಸಾಹದಿ ಮರಳಿದ್ದರು.

ಕಾರ್ಯಕ್ರಮಕ್ಕೆ ಕಾಂಗ್ರೆಸ್ನ ಸಚಿವ ಬಣದ ಅತಿರತ ಮಹಾರಥರ ಆಗಮನ ಮತ್ತಷ್ಟು ಜನಸಂಭ್ರಮವನ್ನು ಮಗದಷ್ಟು ಕಳೆಗಟ್ಟುವಂತೆ ಮಾಡಿತ್ತು. ಸ್ಥಳೀಯ ಸಂಸ್ಥೆಯ



ಸಮರೋಪಾದಿಯ ಶ್ರಮ , ಆಡಳಿತಾಧಿಕಾರಿಯಿಂದ ಹಿಡಿದು ಪ್ರತಿ ಪೌರಕಾರ್ಮಿಕರ ಪರಿಶ್ರಮ ಜಿಲ್ಲಾ ಕ್ರೀಡಾಂಗಣದ ಆಜುಬಾಜಿನ ಪ್ರದೇಶ ಅಚ್ಚುಕಟ್ಟಾಗಿತ್ತು. ಇದರ ನಡುವೆ ಜಿಲ್ಲಾ ಪೋಲೀಸ್ ಭವನದ ಬಳಿಯ ಮಹದೇಶ್ವರ ಬಡಾವಣೆಯ ಮುಖ್ಯ ರಸ್ತೆಯಿಂದ ಹಳೆಯ ರಿಂಗ್ ರೋಡ್ ರಸ್ತೆಯ ಸೇರುವ 200 ಮೀಟರ್ ರಸ್ತೆ ಡಾಂಬರೀಕರಣಕ್ಕೆ ಸಜ್ಜಾಗುತ್ತಿತ್ತು. ಅದಾವ ಶಕ್ತಿಗೆ ಅಥವಾ ಒತ್ತಡಕ್ಕೆ ಸಿಲುಕಿತೋ ಸ್ಥಳೀಯ ಆಡಳಿತ ನಗರಸಭೆ ತಿಳಿಯುತ್ತಿಲ್ಲ ಇಂದಿಗೆ ಒಂದು ತಿಂಗಳಾದರೂ ಸಹ ಡಾಂಬರು ಕಾಣದೆ ಹಳೆಯ ಮೂಲ ಸ್ಥಿತಿಗೆ ಮರಳಿದ ರಸ್ತೆ ದುರಾಡಳಿತಕ್ಕೆ ಮೂಕ ಸಾಕ್ಷಿಯಾಗಿ ಯಥಾ ಸ್ಥಿತಿಯಲ್ಲಿ ವ್ಯವಸ್ಥೆಯನ್ನು ಅಣಕಿಸುತ್ತಾ ನಿಂತಿದೆ.

ಜಿಲ್ಲಾ ಕೇಂದ್ರಕ್ಕೆ ಆಡಳಿತ ಸರ್ಕಾರದ ಮುಖ್ಯಮಂತ್ರಿಗಳು , ಸಚಿವರು , ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಬಂದಾಗ ಮಾತ್ರ ಪುಟಿದೆದ್ದು ಸ್ವಚ್ಚತಾ ಕಾರ್ಯಗಳು ಹಾಗೂ ರಸ್ತೆ ರಿಪೇರಿ ಮಾಡುವ ನಮ್ಮೂರಿನ ನಗರಸಭೆ ಉಳಿದ ಸಮಯದಲ್ಲಿ ಕುಂಭಕರ್ಣ ನಿದ್ದೆಗೆ ಜಾರಿದಂತಿರುವುದು ನಗರಸಭೆಯ ಆಡಳಿತ ವೈಖರಿಗೆ ಕನ್ನಡಿ ಹಿಡಿದಂತಿದೆ.

ಶ್ರೀ ವೀರಭದ್ರೇಶ್ವರ ದೇವಾಲಯದ ಎಡಭಾಗದಿಂದ ಕ್ರೀಡಾಂಗಣದ ಎದುರಿನ ರಸ್ತೆಯ ಮೂಲಕ ಸಂಚಾರಿ ಪೋಲಿಸ್ ಠಾಣೆಯ ಮುಂಭಾಗದಿಂದ ಮಹದೇಶ್ವರ ಬಡಾವಣೆ ಕಡೆಗೆ ತೆರಳುವ ಮುಖ್ಯ ರಸ್ತೆ ಹದಗೆಟ್ಟಿದೆ ಅಲ್ಲದೆ ರಾತ್ರಿ ವೇಳೆ ಬೀದಿ ದೀಪಗಳೂ ಸಹ ಕಾರ್ಯ ನಿರ್ವಹಿಸದೆ ಅಲ್ಲೊಂದು ಇಲ್ಲೊಂದು ಎಂಬಂತೆ ಇದ್ದು ಗಾಡಾಂಧಕಾರದಲ್ಲಿ ಮುಳುಗಿದೆ.

ಅಭಿವೃದ್ಧಿಯ ಹರಿಕಾರ , ದೀನದಲಿತರ ಅಹಿಂದ ನಾಯಕ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯರವರೆ ನಿಮ್ಮ ಆಗಮನದಿಂದಾದರು ಈ ರಸ್ತೆಗೆ ಡಾಂಬರು ಕಾಣಲಿ ಹಾಗು ರಾತ್ರಿ ಸಂಚಾರಕ್ಕೆ ಸುಗಮವಾಗುವಂತೆ ಬೀದಿದೀಪ ವ್ಯವಸ್ಥೆಯಾಗಲಿ ನಿಮ್ಮ ಆಗಮನ ಚಾಮರಾನಗರದಂತಹ ಶಾಪಗ್ರಸ್ತ ಜಿಲ್ಲಾ ಕೇಂದ್ರಕ್ಕೆ ಅಭಿವೃದ್ಧಿಯ ನಾಂದಿಯಾಗಲಿ, ಸ್ಥಳೀಯ ಆಡಳಿತ ಚುರುಕಾಗುವಂತಹ ದಕ್ಷ ಆಡಳಿತ ನಿಮ್ಮದಾಗಿರಲಿ ...... ಎಂದು ಆಶಿಸೋಣವೆ....?.

ಇಂಧನ ಇಲಾಖೆಯ ವಿಷಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿಕೆ

# ವಿದ್ಯುತ್ ಸಮಸ್ಯೆ ಪರಿಹರಿಸಲಿದೆ ಕುಸುಮ ಸೌರ ವಿದ್ಯುತ್

**ಚಿಕ್ಕಬಳ್ಳಾಪುರ:** ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ''ಕುಸುಮ ಸೌರ ವಿದ್ಯುತ್ ಬಿ ಮತ್ತು ಸಿ ಯೋಜನೆ''ಯ ಅನುಷ್ಠಾನವು ನಮ್ಮ ರಾಜ್ಯದ ರೈತರ ವಿದ್ಯುತ್ ಬೇಡಿಕೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ''ಇಂಧನ ಇಲಾಖೆಯ ವಿಷಯಗಳ ಪ್ರಗತಿ ಪರಿಶೀಲನಾ ಸಭೆ''ಯಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದು ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಕಳೆದ ವರ್ಷ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಎದುರಾಗಿದ್ದರಿಂದ ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿಸಿ ವಿದ್ಯುತ್ ಪೂರೈಕೆ ಮಾಡುವಂತಹ ಪರಿಸ್ಥಿತಿ ಉಂಟಾಗಿತ್ತು, ಅಲ್ಲದೆ ಉತ್ತರ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳಿಂದ ವಿದ್ಯುತ್ ಶಕ್ತಿಯನ್ನು ಬೇಸಿಗೆಯಲ್ಲಿ ಸಾಲವಾಗಿ ಪಡೆದು ಮರು ದಿನಗಳಲ್ಲಿ ವಾಪಸ್ಸು ಮಾಡುವ ಒಪ್ಪಂದದ ಮೇರೆಗೆ ವಿದ್ಯುತ್ ಪಡೆಯಲಾಗಿತ್ತು. ಅಂತಹ ಸಂಕಷ್ಟದ ಪರಿಸ್ಥಿತಿಯನ್ನು ಸರ್ಕಾರ ಸಮರ್ಥವಾಗಿ ಎದುರಿಸಿ ರೈತರಿಗೆ, ನಾಗರಿಕರಿಗೆ, ಕೈಗಾರಿಕೆಗಳಿಗೆ ವಿದ್ಯುತ್ ಪೂರೈಸುವ ಕಾರ್ಯವನ್ನು ಮಾಡಲಾಗಿದೆ. ಪ್ರಸ್ತುತ ವರುಣನ ಕೃಪೆಯಿಂದ ಹಾಗೂ ಸರ್ಕಾರ ಕೈಗೊಂಡ ಕೆಲವು ಮುನ್ನೆಚ್ಚರಿಕೆ ಕ್ರಮಗಳಿಂದ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಾಗಿ ಬೇರೆ ರಾಜ್ಯಗಳಿಗೆ ಪೂರೈಸುವ ಸ್ಥಿತಿಗೆ ತಲುಪಿದ್ದೇವೆ. ಸಾಲವಾಗಿ ಪಡೆದಿದ್ದ ವಿದ್ಯುತ್ ನ್ನು ಮರು ಪೂರೈಸುತ್ತಿದ್ದೇವೆ. ಜಲ ವಿದ್ಯುತ್, ಪವನ ಶಕ್ತಿ ಹಾಗೂ ಸೌರಶಕ್ತಿ ಸೇರಿದಂತೆ ಇತರ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಯುಕ್ತ ಕ್ರಮಗಳನ್ನು ಹೀಗೆಯೇ ಮುಂದುವರೆಸಿದರೆ ರಾಜ್ಯವು ವಿದ್ಯುತ್ ಉತ್ಪಾದನೆಯಲ್ಲಿ ಮೊದಲನೆ ಸ್ಥಾನಕ್ಕೆ ಬರಲಿದೆ. ಆ ನಿಟ್ಟಿನಲ್ಲಿ ನಮ್ಮ ಸರ್ಕಾರ ಕುಸುಮ ಸೌರ ವಿದ್ಯುತ್ ಯೋಜನೆಯನ್ನು ರಾಜ್ಯದಾದ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮುಂದಾಗಿ ಸಹಾಯಧನವನ್ನು ಹೆಚ್ಚಿಸಿದೆ. ಪ್ರಸ್ತುತ ರಾಜ್ಯ ಸರ್ಕಾರ ಶೇ. 50 ರಷ್ಟು ಸಹಾಯಧನ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರ ಶೇ. 30 ರಷ್ಟು ಸಹಾಯಧನ ನೀಡುತ್ತಿದ್ದು, ಪ್ರಸ್ತುತ



ರಾಜ್ಯದಲ್ಲಿ ಒಟ್ಟು ಶೇ. 80 ರಷ್ಟು ಸಹಾಯಧನವನ್ನು ಕುಸುಮ ಯೋಜನೆಯಡಿ ರೈತರ ನೀರಾವರಿ ಉದ್ದೇಶಗಳಿಗೆ ನೀಡಲು ಮುಂದಾಗಿದೆ. ಈ ಯೋಜನೆಯು ಅನುಷ್ಠಾನಗೊಂಡಲ್ಲಿ ರೈತರ ವಿದ್ಯುತ್ ಬೇಡಿಕೆಯ ಎಲ್ಲ ಸಮಸ್ಯೆಗಳು ಪರಿಹಾರವಾಗಲಿದೆ. ಜೊತೆಗೆ ಮುಂದಿನ ದಿನಗಳಲ್ಲಿ ವಿದ್ಯುತ್ ಕೊರತೆಯ ಸಂಕಷ್ಟಕ್ಕೆ ರಾಜ್ಯ ಸಿಲುಕದಂತೆ ಕಾಪಾಡಬಹುದಾಗಿದೆ. ಆದ್ದರಿಂದ ರೈತರು ಆನ್ ಲೈನ್ ಮೂಲಕ ಈ ಯೋಜನೆಯಡಿ ಅರ್ಜಿ ಹಾಕಿಕೊಳ್ಳಲು ಮನವಿ ಮಾಡಿದರು.

ಕುಸುಮ ಸೌರ ವಿದ್ಯುತ್ ಯೋಜನೆಯಡಿ ನೋಂದಾಯಿತ ರೈತರಿಗೆ ಕೊಳವೆ ಬಾವಿ ಮತ್ತು ನೀರು ಇದ್ದಲ್ಲಿ ಸೌರ ವಿದ್ಯುತ್ ಪಂಪ್ ಸೆಟ್ ಮತ್ತು ಪ್ಯಾನಲ್ ಬೋರ್ಡ್ ಸಹಿತ ಇತರ ಪರಿಕರಗಳನ್ನು ಸರ್ಕಾರ ನೀಡಲಿದೆ. ಅದಕ್ಕಾಗಿ ಅರ್ಹ ಹಾಗೂ ಮಾನ್ಯತೆ ಪಡೆದ ಗುತ್ತಿಗೆದಾರರನ್ನು ಗುರ್ತಿಸಲಾಗಿದೆ. ಜೊತೆಗೆ ಸ್ಥಳೀಯವಾಗಿ 4-5 ಮೆಗಾವ್ಯಾಟ್ ಸೌರ ವಿದ್ಯುತ್ ಉತ್ಪಾದಿಸಲು ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು 20-30 ಎಕರೆ ಜಾಗವನ್ನು ತಾಲ್ಲೂಕುವಾರು ನೀಡುವಂತೆ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರಿಗೆ, ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ಅದರಂತೆ ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ 871 ಎಕರೆ ಜಾಗವನ್ನು ಗುರ್ತಿಸಿ ನೀಡುವಂತೆ ತಿಳಿಸಲಾಗಿದೆ. ಈ ಪೈಕಿ ಈಗಾಗಲೇ 240 ಎಕರೆ ಜಾಗವನ್ನು ನೀಡಲಾಗಿದೆ. ಈ ಜಾಗದಲ್ಲಿ ಮೊದಲನೆ ಹಂತದಲ್ಲಿ 18 ಉಪ ಕೇಂದ್ರಗಳಿಂದ 137 ಮೆಗಾವ್ಯಾಟ್ ಹಾಗೂ 2ನೇ ಹಂತದಲ್ಲಿ 6 ಉಪಕೇಂದ್ರಗಳಿಂದ 37 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಿ ಜಿಲ್ಲೆಯಲ್ಲಿ ಒಟ್ಟು 174 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುವುದು. ಈ ರೀತಿ ಉತ್ಪಾದನೆಯಾದ ವಿದ್ಯುತ್ ನ್ನು ವಿದ್ಯುತ್ ಉಪ ಕೇಂದ್ರದಿಂದ 500 ಮೀಟರ್ ಅಂತರದ ಸ್ಥಳೀಯ ರೈತರಿಗೆ, ಸರ್ಕಾರಿ ಶಾಲೆ, ಅಂಗನವಾಡಿಗಳು ಹಾಗೂ ಇತರ ಸರ್ಕಾರಿ ಕಚೇರಿಗಳಿಗೆ ವಿದ್ಯುತ್ ಅನ್ನು ಪೂರೈಸಲಾಗುವುದು. ಉಳಿದ ವಿದ್ಯುತ್ ಅನ್ನು ಗಿಡ್ ಗಳ ಮೂಲಕ ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳುವ ಗುರಿ ಹೊಂದಲಾಗಿದೆ ಎಂದು ಸವಿಸ್ತಾರವಾಗಿ ಮಾಹಿತಿ ನೀಡಿದರು.

ದಿಬ್ಬೂರು ಮತ್ತು ಕೇತೇನಹಳ್ಳಿ ಮಾರ್ಗದಲ್ಲಿ ವಿದ್ಯುತ್ ವ್ಯತ್ಯಯದ ಸಮಸ್ಯೆಯು ಹೆಚ್ಚಿರುವುದು ಗಮನಕ್ಕೆ ಬಂದಿದೆ. ಈ ತಿಂಗಳ 31ನೇ ತಾರೀಖಿನ ಒಳಗಾಗಿ ಆ ಸಮಸ್ಯೆಯನ್ನು ಪರಿಹರಿಸಿ ನಿರಂತರವಾಗಿ ವಿದ್ಯುತ್ ಪೂರೈಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಜೊತೆಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇಂಧನ ಇಲಾಖೆಯ ವೃತ್ತ ಕಚೇರಿಯನ್ನು ತೆರೆಯುವಂತೆ ಹಾಗೂ ಗೌರಿಬಿದನೂರಿನಲ್ಲಿ ವಿಭಾಗೀಯ ಕಚೇರಿಯನ್ನು ಮತ್ತು 220 ಕೆ.ವಿ. ಸಾಮರ್ತ್ಯದ ವಿದ್ಯುತ್ ಉಪಕೇಂದ್ರ ತೆರೆಯಲು ಸ್ಥಳೀಯ ಜನಪ್ರತಿನಿಧಿಗಳು, ಸಚಿವರು, ಶಾಸಕರು ಮನವಿ ಮಾಡಿದ್ದಾರೆ. ಆ ಎಲ್ಲಾ ಮನವಿಗಳನ್ನು ಪರಿಶೀಲಿಸಿ ಸೂಕ್ತ ಕ್ರಮವಹಿಸುವುದಾಗಿ ಇಂಧನ ಸಚಿವರು ಭರವಸೆ ನೀಡಿದರು.

ಕಬ್ಬಿಣದ ವಿದ್ಯುತ್ ಕಂಬಗಳನ್ನು, ಹಾಳಾದ ವಿದ್ಯುತ್ ಕಂಬಗಳನ್ನು ತೆರವುಗೊಳಿಸಬೇಕು. ಆ ಕಂಬಗಳನ್ನು ಸೂಕ್ತ ವಿಲೇವಾರಿ ಮಾಡಿ ಹಣವನ್ನು ಸರ್ಕಾರಕ್ಕೆ ಜಮೆ ಮಾಡಬೇಕು. ವಿದ್ಯುತ್ ಪರಿವರ್ತಕಗಳು ಸುಟ್ಟು ಹೋದರೆ ಅಥವಾ ದುರಸ್ತಿಗೆ ಬಂದಿದ್ದರೆ ನಗರ ಪ್ರದೇಶಗಳಲ್ಲಿ 24 ಗಂಟೆಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ 48 ತಾಸುಗಳ ಒಳಗೆ ಬದಲಾಯಿಸಬೇಕು. ಒಟ್ಟಾರೆ 72 ಗಂಟೆಯ ಒಳಗೆ ವಿದ್ಯುತ್ ಪೂರೈಕೆ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಸಚಿವರು ತಿಳಿಸಿದರು. ಉನ್ನತ ಶಿಕ್ಷಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಆದ ಡಾ. ಎಂ.ಸಿ ಸುಧಾಕರ್, ಚಿಕ್ಕಬಳ್ಳಾಪುರ ಶಾಸಕ ಪಿ.ಇ ಪ್ರದೀಪ್ ಈಶ್ವರ್, ಗೌರಿಬಿದನೂರು ಶಾಸಕ ಕೆ.ಹೆಚ್ ಪುಟ್ಟಸ್ವಾಮಿ ಗೌಡ, ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕ.ವಿ.ಪ್ರ.ನಿ.ನಿಗಮದ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ಮಹಾಂತೇಶ್ ಬಿಳಗಿ, ಬೆ.ವಿ.ಕಂ (ತಾಂತ್ರಿಕ) ನಿರ್ದೇಶಕ ಹೆಚ್. ಜೆ. ರಮೇಶ್, ಜಿಲ್ಲಾಧಿಕಾರಿ ಪಿ.ಎನ್ ರವೀಂದ್ರ, ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಜಿ.ಟಿ.ನಿಟ್ಟಾಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಬಿ.ಆರ್ ರಮೇಶ್, ಅಪರ ಜಿಲ್ಲಾಧಿಕಾರಿ ಡಾ. ಎನ್. ಭಾಸ್ಕರ್, ಉಪವಿಭಾಗಾಧಿಕಾರಿ ಅಪೂರ್ವ ಬಿದರಿ, ಬೆಂಗಳೂರಿನ ಮುಖ್ಯ ಇಂಜಿನಿಯರ್ ಕೆ.ವಿ ಗೋವಿಂದಪ್ಪ, ತಾಲ್ಲೂಕು ತಹಸೀಲ್ದಾರರು, ಬೆಸ್ಕಾಂ ಅಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



**ಮಂಡ್ಯ ತಾಲೂಕಿನ ಕೆರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದೇಗೌಡನ ದೊಡ್ಡಿ ಮತ್ತು ಕೆರಗೋಡು ಗ್ರಾಮದಲ್ಲಿ 1 ಕೋಟಿ 50 ಲಕ್ಷ ರೂ ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಶಾಸಕ ಪಿ. ರವಿಕುಮಾರ್ ಗೌಡ ಭೂಮಿ ಪೂಜೆ ನೆರವೇರಿಸಿದರು. ಮನ್ಮೂಲ್ ನಿರ್ದೇಶಕ ಯು ಸಿ ಶಿವಕುಮಾರ್ ಗ್ರಾಮ ಪಂಚಾಯಿತಿ ಅಧ್ಯಕ್ಷ ನವೀನ್ ಕುಮಾರ್ ಗ್ರಾಮ ಪಂಚಾಯತಿ ಸದಸ್ಯ ವಸಂತಮ್ಮ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಪ್ರಶಾಂತ ಬಾಬು ಪಿಡಿಒ ಸುನಿಲ್ ಕುಮಾರ್ ಮುಖಂಡರಾದ ಶ್ರೀಕಾಂತ್ ರಮೇಶ್ ಭಾಗವಹಿಸಿದ್ದರು.**

## ಭರಚ್ಚುಕ್ಕಿ ಜಲಪಾತೋತ್ಸವಕ್ಕೆ ಜಿಲ್ಲಾಡಳಿತ ಸಿದ್ಧತೆ

**ಚಾಮರಾಜನಗರ :** ನೆರೆಯ ಕೇರಳ ರಾಜ್ಯದ ವಯನಾಡಿನಲ್ಲಿ ಸಂಭವಿಸಿದ ಗುಡ್ಡ ಕುಸಿತದಿಂದ ನೂರಾರು ಮಂದಿ ಪ್ರಾಣ ಕಳೆದುಕೊಂಡಿರುವ ಸಂಗತಿ ಇನ್ನೂ ಜನ ಮನದಲ್ಲಿ ಮಾಸಿಲ್ಲ, ಇದರ ನಡುವೆ ಚಾಮರಾಜನಗರ ಜಿಲ್ಲಾಡಳಿತ ಜಿಲ್ಲೆಯ ಭರಚುಕ್ಕಿ ಜಲಪಾತದ ಬಳಿ ಜಲಪಾತೋತ್ಸವಕ್ಕೆ ಸಿದ್ದತೆ ಮಾಡಿಕೊಂಡಿದೆ. ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಸಮೀಪದ ಶಿವನ ಸಮುದ್ರ ಮಾರಮ್ಮ ದೇವಾಲಯದ ಬಳಿ ಇರುವ ಭರಚುಕ್ಕಿ ಜಲಪಾತ ಕರ್ನಾಟಕದ ನಯಾಗರ ಎಂದು ಪರಿಸರ ಪ್ರೇಮಿಗಳು ಕರೆಯಲ್ಪಡುವರು. ಕಾವೇರಿ ಕಣಿವೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾದರೆ ಈ ಜಲಪಾತಕ್ಕೆ ಜೀವಕಳೆ ಬರಲಿದೆ. ಶ್ರೀ ಮಲೆ ಮಹದೇಶ್ವರ ವನ್ಯಜೀವಿಧಾಮದ ವ್ಯಾಪ್ತಿಗೆ ಬರಲಿರುವ ಭರಚುಕ್ಕಿ ಜಲಪಾತವು ನೋಡುಗರ ಕಣ್ಮನ ಸೆಳೆಯಲಿದೆ. ಈ ಹಿಂದೆ ಸಚಿವರಾಗಿದ್ದ ದಿ. ಹೆಚ್.ಎಸ್. ಮಹದೇವಪ್ರಸಾದ್ ರವರು ಅದ್ದೂರಿಯಾಗಿ ಜಲಪಾತೋತ್ಸವವನ್ನು ಹಮ್ಮಿಕೊಂಡು ಹೆಸರುವಾಸಿಯಾಗಿತ್ತು. ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿ ಕಾವೇರಿ ಒಡಲು ಭರ್ತಿಯಾದ ಬಳಿಕವೇ ಈ ಜಲಪಾತಕ್ಕೆ ಹರಿಯುವ ನೀರು ಹೆಚ್ಚಾಗಲಿದೆ. ಈ ಭಾರಿ ನಿರೀಕ್ಷೆಗೂ ಮೀರಿ ಮಳೆಯಾಗಿದ್ದರಿಂದ ಕಾವೇರಿ ಕಪಿಲೆ ತುಂಬಿ ಹರಿಯಿತು. ಅದರಲ್ಲೀ ಭರಚುಕ್ಕಿ ಜಲಪಾತದಲ್ಲಿ ಹೆಚ್ಚುವರಿ ನೀರು ಹಾಲ್ನೊರೆಯಂತೆ ಧುಮ್ಮಕ್ಕುತ್ತಿತ್ತು. ಭರಚುಕ್ಕಿ ಜಲಪಾತದ ಬಳಿಯೇ ಇದೆ ಮತ್ತೊಂದು ಜಲಪಾತ ಅದುವೇ ಗಗನಚುಕ್ಕಿ. ಶಿವನಸಮುದ್ರ ಮಾರಮ್ಮ ದೇವಾಲಯ ಬಳಿಯೇ ಇರುವ ದರ್ಗಾದ ಬಳಿ ಈ ಜಲಪಾತವು ಇದ್ದು, ಭೌತಿಕವಾಗಿ ಇದು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿಗೆ ಸೇರಿದೆ. ಆದರೂ ಅವಳಿ ಜಲಪಾತ ನೋಡುವುದೇ ಭಾಗ್ಯ. ಚಾಮರಾಜನಗರ ಜಿಲ್ಲೆಯನ್ನು ಪ್ರವಾಸೋದ್ಯಮಕ್ಕೆ ಸೆಳೆಯುವ ದಿಸೆಯಲ್ಲಿ ಜಿಲ್ಲಾಡಳಿತವು ಆಗಸ್ಟ್ 10 ರಂದು ಭರಚ್ಚುಕ್ಕಿ ಜಲಪಾತೋತ್ಸವವನ್ನು ಹಮ್ಮಿಕೊಂಡಿದ್ದು, ಅದಕ್ಕಾಗಿ ವೇದಿಕೆಯನ್ನು ಸಿದ್ದತೆ ಮಾಡಿಕೊಳ್ಳುತ್ತಿದೆ. ನಾಡಿನ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಜಲಪಾತೋತ್ಸವಕ್ಕೆ ಚಾಲನೆ ನೀಡಿ ಪ್ರವಾಸೋದ್ಯಮಕ್ಕೆ ಚಾಲನೆ ನೀಡಲಿರುವರು.

# ಪ್ರಾಥಮಿಕ ಶಿಕ್ಷಕರ ಪ್ರತಿಭಟನೆ

## ಆ.12ರಂದು ಬೆಂಗಳೂರುಚಲೋ ರಾಜ್ಯಮಟ್ಟದ ಹೋರಾಟ

**ಚಾಮರಾಜನಗರ :** 2017 ರ ಹೊಸ ವೃಂದ ಹಾಗೂ ನೇಮಕಾತಿ ನಿಯಮಗಳ ತಿದ್ದುಪಡಿ ಸೇರಿದಂತೆ ವಿವಿಧ ಹಕ್ಕೊತ್ತಾಯಗಳ ಈಡೇರಿಕೆಗೆ ಆಗ್ರಹಿಸಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಜಿಲ್ಲಾಘಟಕದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಸಮಾವೇಶಗೊಂಡ ಶಿಕ್ಷಕರು ತಮ್ಮ ಹಕ್ಕೋತ್ತಾಯಈಡೇರಿಕೆಗೆ ಆಗ್ರಹಿಸಿದರು.

ಪ್ರತಿಭಟನಾಸ್ಥಳಕ್ಕೆ ಆಗಮಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಾಮಚಂದ್ರರಾಜೇಅರಸ್ ಹಾಗೂ ಜಿಲ್ಲಾಧಿಕಾರಿಕಚೇರಿಯ ಶಿರಸ್ತೇದಾರ್ ಅನೂಷ್ಅವರ ಮೂಲಕ ಜಿಲ್ಲಾಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ ಮಾತನಾಡಿ, 2016 ಕ್ಕಿಂತ ಮೊದಲು ನೇಮಕಾತಿಯಾದವರಿಗೆ ಪೂರ್ವಾನ್ವಯಗೊಳಿಸಬಾರದು, ಪ್ರಾಥಮಿಕ ಶಾಲಾ ಸೇವಾನಿರತ ಶಿಕ್ಷಕರಿಗಾಗಿರುವ ಅನ್ಯಾಯವನ್ನು ಸರಿಪಡಿಸಬೇಕು, ಪದವಿ ಪೂರೈಸಿದ ಶಿಕ್ಷಕರನ್ನು ಸೇವಾ ಜೇ?ಠತೆಯೊಂದಿಗೆ ಪದವೀಧರ ಶಿಕ್ಷಕರೆಂದು ಪದನಾಮೀಕರಿಸಬೇಕು. ಮುಖ್ಯ ಶಿಕ್ಷಕರ ಹುದ್ದೆಗೆ ಸೇವಾಜೇಷ್ಠತೆಯ ಮೇಲೆ ಬಡ್ತಿ ನೀಡಬೇಕು ಎಂಬ ವಿವಿಧ ಹಕ್ಕೋತ್ತಾಯಈಡೇರಿಸಬೇಕುಎಂದು ಆಗ್ರಹಿಸಿ ಆ.12 ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ 'ಬೆಂಗಳೂರುಚಲೋ' ಹೋರಾಟ ಹಮ್ಮಿಕೊಳ್ಳಲಾಗಿದೆ.ಜಿಲ್ಲೆಯ 5 ತಾಲೂಕಿನ ಪ್ರಾಥಮಿಕ ಶಾಲಾಶಿಕ್ಷಕರು ಬೆಂಗಳೂರುಚಲೋ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಜಿಲ್ಲಾಧ್ಯಕ್ಷ ಕೆ.ಎಸ್. ಮಾದಪ್ಪ,ಜಿಲ್ಲಾ ಪ್ರಧಾನ ಕಾರ್ಯದಶಿ ಮಹದೇವಸ್ವಾಮಿ, ಚಾಮರಾಜನಗರತಾಲ್ಲೂಕುಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಕಾರ್ಯದರ್ಶಿ ಎನ್.ಸುಧಾ,

ಗುಂಡ್ಲುಪೇಟೆತಾಲೂಕುಘಟಕದಅಧ್ಯಕ್ಷ ಶಿವಪ್ರಸಾದ್,

ಕಾರ್ಯದರ್ಶಿ ಚಿನ್ನಸ್ವಾಮಿ, ಯಳಂದೂರುಘಟಕದ ಅಧ್ಯಕ್ಷ ಸೋಮಣ್ಣ, ಹನೂರುಘಟಕದಕೃಷ್ಣೇಗೌಡ, ಕಾರ್ಯದರ್ಶಿ ನಾಗಸುಂದರ್, ಕೊಳ್ಳೇಗಾಲಘಟಕದ ಶ್ರೀಧರ್, ಕಾರ್ಯದರ್ಶಿ ನಂದೀಶ್, ಕಾಯ , ಪದಾಧಿಕಾರಿಗಳಾದ ಬುಕಾನಿ, ಸಲೀನಾ, ಗೀತಾ, ಶಶಿಕಲಾ,ಮಂಜುಳ, ಮಹೇಶ್,ಡಿ.ಎನ್ಭರತ್ ಭೂಷಣ್,ಮಹದೇವಸ್ವಾಮಿ, ದಿನೇಶ್, ರಾಚಯ್ಯ, ಎಂ.ಡಿ.ಮಹದೇವಯ್ಯ,ಮುರುಗೇಶ್ಕುಮಾರ್,ರಾಜುಎಸ್ ಜಿ,ಮಹದೇವಸ್ವಾಮಿ, ಸವಿತಾರಾಣಿ,ಪುಟ್ಟಮಾದಮ್ಮ, ಸುಧಾ, ನಟರಾಜು, ಬಿ.ಕೃ?ಣ್ಣಮೂರ್ತಿಸಿ,ಕೆವಾಸು, ಸಿ.ಮಹದೇವಸ್ವಾಮಿ. ಸುಶೀಲ, ನೇತ್ರಾವತಿ, ಸಿ.ಕೆ.ಶಿವಕುಮಾರ್, ಎಂ.ಶಿವಕುಮಾರ್, ಶ್ಯಾಮಸುಂದರಿ, .ಮಹದೇವಮೂರ್ತಿ,ಪಿ, ಮಲ್ಲಿಕಾರ್ಜುನ್, ಸಿದ್ದಲಿಂಗಮೂರ್ತಿ, ಸಿ.ಕೆ.ವಾಸು, ವಿವಿಧ ಪ್ರೌಡಶಾಲೆ ಹಾಗೂ ಪ್ರಾಥಮಿಕ ಶಾಲಾಶಿಕ್ಷಕರು ಹಾಜರಿದ್ದರು.



# ಕ್ರೀಡಾಕೂಟದಲ್ಲಿ ಸಾಧನೆ

**ಚಾಮರಾಜನಗರ:** ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಆಗಸ್ಟ್ 3, 4 ಮತ್ತು 5 ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ ಚಾಮರಾಜನಗರ ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ವೆಂಕಟಯ್ಯನಛತ್ರ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿ ಹೆಚ್ಚಿನ ಸಂಖ್ಯೆಯ ಪ್ರಶಸ್ತಿಗಳನ್ನು ಬಾಚಿಕೊಂಡಿದ್ದಾರೆ.

ಈ ಸಂಬಂಧ ವೆಂಕಟಯ್ಯನಛತ್ರ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಎಲ್ಲಾ ವಿಜಯಶಾಲಿ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಮಲ್ಲೇಶ ಅವರು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗಳಿಸಿರುವ ವಿದ್ಯಾರ್ಥಿಗಳು ವಿಶೇಷ ಸಾಧನೆ ಮಾಡಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷದ ಪ್ರಾರಂಭದಿಂದಲೂ ಸಮರ್ಪಕ ತಯಾರಿ ನಡೆಸಿದ್ದರ ಫಲವಾಗಿ ವಿದ್ಯಾರ್ಥಿಗಳಿಗೆ ಈ ಗೌರವ ಒಲಿದು ಬಂದಿದೆ ಎಂದರು. ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ನೀಡಿದ ಭೂಗೋಳಶಾಸ್ತ್ರ ಉಪನ್ಯಾಸಕರಾದ ಮಹಾಂತೇಶ ಕುರುಬರ ಅವರ ಪ್ರೋತ್ಸಾಹ ಮತ್ತು ಶ್ರಮವನ್ನು ವಿಶೇಷವಾಗಿ ಪ್ರಶಂಶಿಸಿದ ಮಲ್ಲೇಶ್ ಅವರು ಮುಂದಿನ ದಿನಗಳಲ್ಲಿ ಜಿಲ್ಲಾ ಮಟ್ಟದ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚಿನ ಸಾಧನೆ ಮೂಡಿ ಬರಲಿ. ವಿದ್ಯಾರ್ಥಿಗಳಿಗೆ ಈ ಕ್ರೀಡಾ ಪ್ರೀತಿಯನ್ನು ಕಾಪಾಡಿಕೊಳ್ಳುವಂತೆ ಕರೆ ನೀಡಿದರು. ಉಪನ್ಯಾಸಕರಾದ ಮಲ್ಲೇಶ, ಪ್ರಶಾಂತ, ಮಹೇಶ್, ಪೂರ್ಣಿಮ, ಅನಿತ, ಗೋವಿಂದ, ಶೀಲಾವತಿ, ಮಹಾಂತೇಶ ಕುರುಬರ ಹಾಗೂ ಅತಿಥಿ ಉಪನ್ಯಾಸಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಕಾಲೇಜಿನ ವಿಜೇತ ವಿದ್ಯಾರ್ಥಿಗಳ ವಿವರ:** ಪುಟ್ಟಲಕ್ಷ್ಮೀ 100 ಮೀ ಪ್ರಥಮ, 200 ಮೀ ಪ್ರಥಮ, ತ್ರಿಪಲ್ ಜಂಪ್ ಪ್ರಥಮ ಸ್ಥಾನ, ಬಾಲಕಿಯರ ವಿಭಾಗದ ವೈಯಕ್ತಿಕ ಚಾಂಪಿಯನ್, ಪ್ರಶಸ್ತಿಯನ್ನು ಕೂಡ ಗಳಿಸಿ ಕ್ರೀಡಾಕೂಟದ ವೇಗದ ಓಟ ಗಾರ್ತಿಯಾಗಿ ಹೊರಹೊಮ್ಮಿದ್ದಾಳೆ. ನಾಗರತ್ನ ಉದ್ದಜಿಗಿತ ಪ್ರಥಮ, ಯೋಗೇಶ್. ಎನ್ 3000 ಮೀ ಪ್ರಥಮ, ಗುಡ್ಡಗಾಡು ಓಟ ದ್ವಿತೀಯ, ರಾಜೇಶ್ವರಿ ವೇಗ ನಡಿಗೆ 3ನೇ ಸ್ಥಾನ, ಕಿರಣ್ ವಿ 800 ಮೀ ಪ್ರಥಮ, ಗೌರಮ್ಮ 800 ಮೀ ದ್ವಿತೀಯ, 400 ಮೀ ತೃತೀಯ, ಗುಡ್ಡಗಾಡು ಓಟ 6ನೇ ಸ್ಥಾನ, ರಾಧಿಕ 3000 ಮೀ ದ್ವಿತೀಯ, ಗಂಗಮ್ಮ 400 ಮೀ ತೃತೀಯ, ಗುಡ್ಡಗಾಡು ಓಟ 4ನೇ ಸ್ಥಾನ, ನದಿಯ 1500 ಮೀ ದ್ವಿತೀಯ, 3000 ಮೀ ತೃತಿಯ, ಗುಡ್ಡಗಾಡು ಓಟ 5ನೇ ಸ್ಥಾನ, ತೇಜಸ್ ಜಿ ವೇಗ ನಡಿಗೆ ದ್ವಿತೀಯ, ಯೋಗೇಶ್ 1500 ಮೀ ತೃತೀಯ, ಬಾಲಕಿಯರ ವಿಭಾಗದಲ್ಲಿ 400 ಮೀ ರಿಲೆ ಪ್ರಥಮ, ಬಾಲಕಿಯರ 100 ಮೀ ರಿಲೇ ತೃತೀಯ, ಬಾಲಕಿಯರ ಖೋ-ಖೋ ಪ್ರಥಮ ಸ್ಥಾನ, ಬಾಲಕರ ಖೋ-ಖೋ ದ್ವಿತೀಯ ಸ್ಥಾನ ಪಡೆದಿದ್ದು ಒಟ್ಟಾರೆ 16 ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## ಬಗರ್ ಹುಕುಂ ಸಾಗುವಳಿ: ಹಕ್ಕುಪತ್ರ ನೀಡಲು ಆಗ್ರಹ

**ಹುಳಿಯಾರು:** ಬಗರ್ ಹುಕುಂ ಸಭೆ ನಡೆಸಿ ಸಾಗುವಳಿ ಮಾಡುತ್ತಿರುವ ಭೂ ರಹಿತ ರೈತರಿಗೆ ಭೂಮಿ ಮಂಜೂರು ಮಾಡಿಕೊಡುವಂತೆ ರೈತ ಸಂಘದ ರಾಜ್ಯಾಧ್ಯಕ್ಷ ಹೊಸಹಳ್ಳಿ ಚಂದ್ರಣ್ಣ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು ನಮೂನೆ 57 ರಡಿ ಅರ್ಜಿ ಹಾಕಿದ, ಅಥವಾ ಹಾಕದೇ ಹಲವಾರು ವರ್ಷಗಳಿಂದ ಸರ್ಕಾರಿ ಭೂಮಿಗಳಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ರೈತರಿಗೆ ಹಕ್ಕು ಪತ್ರಗಳ ಅವಶ್ಯಕತೆ ಇದೆ. ಹಕ್ಕು ಪತ್ರ ಇಲ್ಲದಿರುವುದರಿಂದ ಕೃಷಿ ಸಮ್ಮಾನ ಸೇರಿದಂತೆ ಸರ್ಕಾರಿ ಯೋಜನೆಗಳ ಸೌಲಭ್ಯದಿಂದ ಹಾಗೂ ಕೃಷಿ, ತೋಟಗಾರಿಕಾ ಮತ್ತು ರೇಷ್ಮೆ ಇಲಾಖೆಯ ಸಹಾಯಧನದ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ ಎಂದು ಸಮಸ್ಯೆ ವಿವರಿಸಿದ್ದಾರೆ. ಸರ್ಕಾರ ಈಗಾಗಲೇ ಬಗರ್ ಹುಕುಂ ಸಮಿತಿಗೆ ಸದಸ್ಯರನ್ನು ನೇಮಿಸಿದ್ದು ತಹಸೀಲ್ದಾರ್ ಅವರು ತಕ್ಷಣ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಅರ್ಹ ಸಾಗುವಳಿದಾರರಿಗೆ ಭೂಮಿ ಮಂಜೂರು ಮಾಡಿ ಸರ್ಕಾರದ ಸಾಲಸೌಲಭ್ಯ ಪಡದು ರೈತರು ಮತ್ತೊಷ್ಟು ಆರ್ಥಿಕ ಸಬಲರಾಗುವಂತೆ ಮಾಡಬೇಕಿದೆ ಎಂದು ಚಂದ್ರಣ್ಣ ತಿಳಿಸಿದ್ದಾರೆ.

## ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಗೆ ಅರ್ಜಿ ಆಹ್ವಾನ

**ರಾಮನಗರ:** ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದಲ್ಲಿ ಒದಗಿಸಲು ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಬಲಪಡಿಸಲು ಹಾಗೂ ಕೃಷಿ ಯಂತ್ರಧಾರೆ ಕೇಂದ್ರಗಳೊಂದಿಗೆ ಇತರೆ ಸಂಘಸಂಸ್ಥೆಗಳು (ಎಫ್‌ಪಿಒ) ಹಾಗೂ ವೈಯಕ್ತಿಕ ಫಲಾನುಭವಿಗಳಿಗೂ ಸಹ ಹೈಟೆಕ್ ಹಾರ್ವೆಸ್ಟರ್ ಹಬ್ ಸ್ಥಾಪಿಸಲು ಅವಕಾಶ ನೀಡಲಾಗಿದೆ. ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಬೆಳೆಯ ವಿಧ ಮತ್ತು ಕಟಾವು ಅವಧಿಯ ಆಧಾರದ ಮೇಲೆ ಕಾರಿಡಾರ್ ಮಾದರಿಯಲ್ಲಿ ಸ್ಥಾಪಿಸಲಾಗುವುದು. ಈ ಹಬ್‌ಗಳನ್ನು ಅನುಷ್ಠಾನ ಮಾಡಲು ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳು, ಸೇವಾಧಾರ ಸಂಸ್ಥೆಗಳು, ವೈಯಕ್ತಿಕ ಫಲಾನುಭವಿಗಳು ಹಾಗೂ ನೋಂದಾಯಿತ ಸಂಘಸಂಸ್ಥೆಗಳು ಭಾಗವಹಿಸಬಹುದಾಗಿದೆ. ಸಾಮಾನ್ಯ ವರ್ಗದ ರೈತರಿಗೆ ಗರಿಷ್ಠ ಶೇ. 50 ರಂತೆ ಪ.ಜಾತಿ/ಪ.ಪಂಗಡದ ರೈತರಿಗೆ ಗರಿಷ್ಠ ಶೇ. 70 ರಷ್ಟು ಸಹಾಯಧನ ನೀಡಲಾಗುವುದು. ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು. ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ ಫಲಾನುಭವಿಗಳಿಗೆ ಅಗತ್ಯವಿರುವ ಆಯ್ಕೆ ಮಾಡಿದ ಯಂತ್ರೋಪಕರಣಗಳಿಗೆ ಅನುಮೋದನೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಆ.31 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಹತ್ತಿರದ ರೈತ ಸಂಪರ್ಕ ಕೇಂದ್ರ/ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿನ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪದಾಧಿಕಾರಿಗಳ ಆಯ್ಕೆ

**ಮೈಸೂರು:** ನಗರದ ಇನ್ನರ್ ವಿಲ್ ಕ್ಲಬ್ ಆಫ್ ಮೈಸೂರು ಗೋಲ್ಡ್ ಡಿಸ್ಟ್ 318ರ ನೂತನ ಅಧ್ಯಕ್ಷರಾಗಿ ಶ್ರೀಮತಿ ಪ್ರೇಮಾ ರವಿ ಹಾಗೂ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನಗರದ ಲೇ ರುಚಿ ಹೋಟೆಲ್ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಸ್ಥಾಪಕ ಅಧಿಕಾರಿ ಹಾಗೂ ಹಿಂದಿನ ಜಿಲ್ಲಾಧ್ಯಕ್ಷರು ಆದ ಅನುರಾಧಾ ನಾಥಕುಮಾರ್ ಅವರು 2024-25ನೇ ಸಾಲಿನ ನೂತನ ಜಿಲ್ಲಾಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಅಧಿಕಾರಿ ಹಸ್ತಾಂತರ ಮಾಡಿದರು. ಇನ್ನರ್ ವಿಲ್ ಕ್ಲಬ್ ಆಫ್ ಮೈಸೂರು ಗೋಲ್ಡ್ ಸಂಸ್ಥೆಯು ಕಳೆದ 6 ವರ್ಷಗಳಿಂದ ಕಾರ್ಯನಿರ್ವಹಿಸಿಕೊಂಡು ಬಂದಿದ್ದು, ಹಲವು ಸಮಾಜಸೇವೆಗಳಲ್ಲಿ ತೊಡಗಿಸಿಕೊಳ್ಳುತ್ತಾ ಬಂದಿದ್ದು, ಇದೇ ರೀತಿ ಮುಂದುವರೆದು ನೂತನ ಆಯ್ಕೆಯಾದ ಅಧ್ಯಕ್ಷರು, ಪದಾಧಿಕಾರಿಗಳಿಂದ ಶ್ರೀಲಂಕಾದಲ್ಲಿ ಭಾಗವಹಿಸುತ್ತಿರುವ ಕ್ರೀಡಾಪಟುಗಳಿಗೆ ಟಿ-ಶರ್ಟ್ ನೀಡಲಾಗಿದೆ. ಅದೇ ರೀತಿ ಅಂಗವಿಕಲರಿಗೆ ವೀಲ್ ಚೇರ್, ಚಿಗುರು ಆಶ್ರಮಕ್ಕೆ ಅಕ್ಕಿ ಹಿಟ್ಟು ರುಬ್ಬುವ ಯಂತ್ರ ಕೊಡುಗೆಯಾಗಿ ನೀಡಲಾಯಿತು. ತದನಂತರ ಸಂಘದ ಸದಸ್ಯರಾಗಿ 10 ಮಂದಿಯನ್ನು ಸಂಘಕ್ಕೆ ಸೇರ್ಪಡೆಗೊಂಡರು. ಇದೇ ಸಂದರ್ಭದಲ್ಲಿ ಕಾರ್ಯದರ್ಶಿ ಶ್ರೀಮತಿ ಅಂಶು ಅಗರವಾಲ್, ಮಾಜಿ ಅಧ್ಯಕ್ಷರು ಉಮಾ ಅನಿಲ್, ಹಾಗೂ ಮಾಜಿ ಕಾರ್ಯದರ್ಶಿ ವಿಜಯಲಕ್ಷ್ಮಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಪ್ರವಾಸಿ ಮಾರ್ಗದರ್ಶಿ ಹುದ್ದೆ

**ಮೈಸೂರು:** ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಹಾಗೂ ಪ್ರಚಾರಪಡಿಸುವ ಉದ್ದೇಶದಿಂದ ಜಿಲ್ಲೆ ಹಾಗೂ ತಾಲೂಕುಗಳಲ್ಲಿರುವ ಪ್ರವಾಸಿ ತಾಣಗಳ ಐತಿಹಾಸಿಕ, ಧಾರ್ಮಿಕ, ಪಾರಂಪರಿಕ, ಸಾಂಸ್ಕೃತಿಕ ಹಾಗೂ ಜಾನಪದ ಕಲಾ ವೈವಿಧ್ಯತೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ದೇಶ, ವಿದೇಶ ಪ್ರವಾಸಿಗರಿಗೆ ಪರಿಚಯಿಸಲು ಹಾಗೂ ಒಂದು ರಾಜ್ಯ-ಹಲವು ಜಗತ್ತುಗಳು ಎಂಬ ಪ್ರವಾಸೋದ್ಯಮವನ್ನು ಉತ್ತೇಜಿಸಲು ಅನುಭವ ಇರುವ ಪ್ರವಾಸಿ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸಲು ಅರ್ಹ ವ್ಯಕ್ತಿಗಳಿಂದ ಅಜ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 30 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ ಹಾಗೂ ದೂ.ಸಂ:0821-2422096 ಅಥವಾ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದ್ದಾರೆ.

## ಅಪರಿಚಿತ ವ್ಯಕ್ತಿಯ ಶವ ಪತ್ತೆ

**ಮೈಸೂರು:** ನಂಜನಗೂಡು ಪಟ್ಟಣದ ಹೆಜ್ಜಿಗೆ ಸೇತುವೆ ಬಳಿ ಸುಮಾರು 35 ರಿಂದ 40 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ವ್ಯಕ್ತಿ ದುಂಡು ಮುಖ, ಸಾಧಾರಣ ಮೈ ಕಟ್ಟು, ಟೀ ಶರ್ಟ್ ಮತ್ತು ಜೀನ್ಸ್ ಪ್ಯಾಂಟ್‌ನ್ನು ಧರಿಸಿರುತ್ತಾರೆ. ಕಿವಿಯಲ್ಲಿ ಓಲೆ, ಕೈಗೆ ಕಪ್ಪು ಮತ್ತು ಕೆಂಪು ದಾರ ಕಟ್ಟಿದ್ದು, ಕೈ ಗೆ ಬಿಳಿ ಬಣ್ಣದ ಚೈನ್ ಧರಿಸಿರುತ್ತಾರೆ. ಮೃತ ವ್ಯಕ್ತಿಯ ವಾರಸುದಾರರು ಇದ್ದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಸಂಪರ್ಕಿಸಬಹುದು ಎಂದು ಪಿಎಸ್‌ಐ ಭಾರತಿ ತಿಳಿಸಿದ್ದಾರೆ.


**ಪುರಸಭೆ ಕಾರ್ಯಾಲಯ, ಚಂದಾಪುರ**
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ- 560081
Email: ka.chandapura.tmc@gmail.com Phone No: 080-27832411
ಸಂಖ್ಯೆ: ಚಂ.ಪು.ಕಾ/ತಾ.ಶಾ/ಕೆಪಿಪಿಪಿ/ಟೆಂ/02/2024-25 ದಿನಾಂಕ: 08.08.2024

**ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳನ್ವಯ 2000ರ ಪ್ರಕಾರ ಸ್ಟಾಂಡರ್ಡ್ ಡಾಕ್ಯೂಮೆಂಟ್ ನಿಯಮಗಳನ್ವಯ, 2024-25ನೇ ಎಸ್.ಎಫ್.ಸಿ ಮುಕ್ತ ನಿಧಿ, 15ನೇ ಹಣಕಾಸು ನಿಧಿ, ಪುರಸಭಾ ನಿಧಿಯಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇಲಾಖಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್ ವಿವರಗಳನ್ನು ಪಡೆದು ಭಾಗವಹಿಸಬಹುದು. **(All Technical General Conditions & other Conditions as Per Bid Document).**

| ಕ್ರ. ಸಂ | ಇಂಡೆಂಟ್ ಸಂಖ್ಯೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | DMA/2024-25/WS/WORK_INDENT25477 | 4.80 |
| 2 | DMA/2024-25/OW/WORK_INDENT25523 | 1.92 |
| 3 | DMA/2024-25/WS/WORK_INDENT25478 (Reserve For SC) | 1.39 |
| 4 | DMA/2024-25/OW/WORK_INDENT25475 | 19.08 |
| | 15ನೇ ಹಣಕಾಸು ನಿಧಿ 2024-25 | |
| 1 | DMA/2024-25/WS/WORK_INDENT25481 | 13.90 |
| 2 | DMA/2024-25/WS/WORK_INDENT25483 (Reserve For SC) | 23.00 |
| 3 | DMA/2024-25/RD/WORK_INDENT25533 | 19.20 |
| 4 | DMA/2024-25/OW/WORK_INDENT25608 | 30.00 |
| | ಪುರಸಭಾ ನಿಧಿ 2024-25 (24.10%, 7.25%) | |
| 1 | DMA/2024-25/OW/WORK_INDENT25610 | 3.94 |
| 2 | DMA/2024-25/OW/WORK_INDENT25612 | 1.59 |
| 3 | DMA/2024-25/WS/WORK_INDENT25615 (Reserve For ST) | 2.08 |
| | ಎಸ್.ಎಫ್.ಸಿ ಮುಕ್ತ ನಿಧಿ 2023-24 | |
| 1 | DMA/2024-25/WS/WORK_INDENT25620 | 13.00 |
| | ಎಸ್.ಎಫ್.ಸಿ ಮುಕ್ತ ನಿಧಿ 2019-20 (ಎಸ್‌ಸಿಎಸ್‌ಪಿ) | |
| 1 | DMA/2024-25/RD/WORK_INDENT25617 (Reserve For SC) | 10.27 |

**ವೇಳಾಪಟ್ಟಿ:** 1) ಕೆಪಿಪಿಪಿ ಪೋರ್ಟಲ್ ಮೂಲಕ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ 17.08.2024 ಸಂಜೆ 5.00 ಗಂಟೆವರೆಗೆ. 2) ಸ್ವೀಕೃತವಾದ ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 19.08.2024 ರಂದು ಬೆಳಿಗ್ಗೆ 11.00 ಗಂಟೆ, 3) ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ಕಿರಿಯ ಅಭಿಯಂತರರಿಂದ ಅಥವಾ ದೂರವಾಣಿ ಸಂಖ್ಯೆ:080-27832411 ರಲ್ಲಿ ಮಾಹಿತಿ ಪಡೆಯಬಹುದು.

ಸಹಿ/-
ಆಡಳಿತಾಧಿಕಾರಿ
ಪುರಸಭೆ ಚಂದಾಪುರ ಹಾಗೂ ಉಪವಿಭಾಗಾಧಿಕಾರಿಗಳು,
ಬೆಂಗಳೂರು ದಕ್ಷಿಣ ಉಪ ವಿಭಾಗ

ಸಹಿ/-
ಮುಖ್ಯಾಧಿಕಾರಿ
ಪುರಸಭೆ ಚಂದಾಪುರ

ವಾಸಾಸಂಇ/ವಾ.ಪ್ರ/1375/ಶಿರಡಿ ಸಾಯಿ/2024-25

# ಶಿಕ್ಷಕರಿಗೆ ಸವಲತ್ತು ದೊರಕಿಸುವುದು ಸರ್ಕಾರದ ಕರ್ತವ್ಯ

**ಕೆ.ಆರ್.ಪೇಟೆ:** ಸಮಾಜದ ಎಲ್ಲಾ ವರ್ಗದ ಜನರನ್ನು ಸುಶಿಕ್ಷಿತರನ್ನಾಗಿ ಮಾಡಲು ತಮ್ಮ ಬದುಕನ್ನು ಸವೆಸುವ ಶಿಕ್ಷಕರಿಗೆ ಸರ್ಕಾರದ ಎಲ್ಲಾ ಸವಲತ್ತುಗಳು ಸಿಗುವಂತೆ ನೋಡಿಕೊಳ್ಳಬೇಕಾದುದು ಸರ್ಕಾರಗಳ ಕರ್ತವ್ಯ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಈ ಕುರಿತು ಪಟ್ಟಣದ ತಮ್ಮ ನಿವಾಸದಲ್ಲಿ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು ನೀಡಿದ ಮನವಿಯನ್ನು ಸ್ವೀಕರಿಸಿ ಮಾತನಾಡಿದರು.

ಈ ಹಿಂದೆ 1-7 ನೇತರಗತಿಯ ಎಲ್ಲಾ ಶಾಲೆಗಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರೇ ಪಾಠ ಬೋಧನೆ ಮಾಡುತ್ತಿದ್ದರು. ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಮಕ್ಕಳಲ್ಲಿ ಕೌಶಲ್ಯಾಧಾರಿತ ಮತ್ತು ಗ್ರಾಮೀಣ ಸೊಗಡಿನ ಅನುಭವವನ್ನು ತಮ್ಮ ಪಾಠಬೋಧನೆಗಳಲ್ಲಿ ಅಳವಡಿಸಿಕೊಂಡು ಮಕ್ಕಳನ್ನು ಶೈಕ್ಷಣಿಕವಾಗಿ ತಯಾರು ಮಾಡಲಾಗುತ್ತಿತ್ತು. ಆದರೆ 2017ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸುಗಳಿಗೆ ಅನುಕೂಲವಾಗುವಂತೆ ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮೆಯನ್ನು ಬದಲಿಸಿ ಹೊಸ ವೃಂದ ಹಾಗೂ ವೃಂದ ಬಲವನ್ನು ನಿರ್ಧರಿಸುವ ವಿಶ್ವೇ



ರಾಜ್ಯ ಪತ್ರವನ್ನು ಜಾರಿಗೆ ತರಲಾಗಿರುವುದು ನನ್ನ ಗಮನಕ್ಕೆ ಬಂದಿದೆ. ಇದು ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮಾಡಿರುವ ಘೋರ ಅನ್ಯಾಯವಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಪೈಕಿ ಪದವಿ ಹಾಗೂ ಸ್ನಾತಕೋತರ ಮತ್ತು ಬಿಎಡ್ ವ್ಯಾಸಂಗ ಮಾಡಿರುವ ಸಾವಿರಾರು ಶಿಕ್ಷಕರುಗಳು ಈ ನಿರ್ಧಾರದಿಂದ ಆತಂಕಗೊಂಡಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರು ಬಡ್ತಿಯನ್ನು ಹೊಂದದೆ ಕೇವಲ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಬೇಕಾದ ಅನಿವಾರ್ಯತೆ ಎದುರಾಗಿದೆ. ಅಲ್ಲದೇ 30-35 ವರ್ಷಗಳಿಗೂ ಹೆಚ್ಚಿನ ಸೇವೆ ಸಲ್ಲಿಸಿದ್ದರೂ ಅವರಿಗೆ ಒಂದೇ ಒಂದು ಮುಂಬಡ್ತಿಯನ್ನೂ ಸಹ ನೀಡದೇ ನಿವೃತ್ತರಾಗುವ ಸನ್ನಿವೇಶ ನಿರ್ಮಾಣವಾಗಿದೆ. ಆದ್ದರಿಂದ 2017ರಲ್ಲಿ ಜಾರಿಗೆ ತರಲಾಗಿರುವ ಶಿಕ್ಷಕರಿಗೆ ಮರಣ ಶಾಸನವಾಗಿರುವ ಈ ನಿರ್ಧಾರವನ್ನು ಕೈ ಬಿಡಬೇಕು. ರಾಜ್ಯದಲ್ಲಿ ಸುಮಾರು 80,000 ಅಧಿಕ ಶಿಕ್ಷಕರು ಪದವಿ ಬಿಎಡ್ ಹಾಗೂ ಸ್ನಾತಕೋತ್ತರ ಪದವಿಯನ್ನು ಹೊಂದಿರುವವರಿಗೆ ಬಡ್ತಿ ನೀಡುವ ಮೂಲಕ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು ಎಂಬ ನಿಲುವಿಗೆ ನನ್ನ ಬೆಂಬಲವೂ ಇದ್ದು ಕೂಡಲೇ ನಾನೂ ಸಹ ಶಿಕ್ಷಣ ಸಚಿವರಿಗೆ ಹಾಗೂ ಮುಖ್ಯಮಂತ್ರಿಯವರಿಗೆ ಪತ್ರ ಬರೆಯುತ್ತೇನೆ ಎಂದರು. ಮನವಿ ಸಲ್ಲಿಸುವ ಸಂದರ್ಭದಲ್ಲಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್, ಪ್ರಧಾನ ಕಾರ್ಯದರ್ಶಿ ಸಿ.ಟಿ.ಲಕ್ಷ್ಮಣಗೌಡ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಜಿ.ಎಸ್. ಮಂಜು, ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಆರ್.ಕೆ.ರಮೇಶ್, ಪಧವೀಧರ ಸಂಘದ ಜಿಲ್ಲಾ ಉಪಾಧ್ಯಕ್ಷ ಮಂಜೇಗೌಡ, ತಾಲ್ಲೂಕು ಕಸಾಪ ಅಧ್ಯಕ್ಷ ಪೂರ್ಣಚಂದ್ರತೇಜಸ್ವಿ, ಸೇರಿದಂತೆ ಶಿಕ್ಷಕರಾದ ಕಿರಣ್‌ಕುಮಾರ್, ಕಟ್ಟೆಮಹೇಶ್, ರಂಗಸ್ವಾಮಿ, ಎ.ಹೆಚ್.ಯೋಗೇಶ್, ರವಿಕುಮಾರ್, ಸಿ.ಎಸ್.ಅಶೋಕ್, ಆರ್.ಬಿ.ಚಂದ್ರು, ಆರ್.ಕೆ.ಮಹೇಶ, ಶಂಕರೇಗೌಡ ಸೇರಿದಂತೆ ನೂರಾರು ಶಿಕ್ಷಕರು ಹಾಜರಿದ್ದರು.

# ಸುತ್ತೂರು ಶಾಲೆಯಲ್ಲಿದ್ದಾರೆ ಇಪ್ಪತ್ತಮೂರು ಅವಳಿ ಮಕ್ಕಳು

**ನಂಜನಗೂಡು:** ಈ ಶಾಲೆಯ ಬೃಹತ್ ಕಟ್ಟಡವನ್ನು ಉದ್ಘಾಟಿಸಿದವರು ರಾಷ್ಟ್ರಪತಿಗಳು. ಇದರ ಹೆಣ್ಣು ಮಕ್ಕಳ ದ್ಯಾರ್ಥಿ ನಿಲಯವನ್ನು ಉದ್ಘಾಟಿಸಿದವರು ಮಾಜಿ ರಾಷ್ಟ್ರಪತಿಗಳು. ಇಲ್ಲಿ ಕಲಿಯುತ್ತಿದ್ದಾರೆ ಒಂದರಿಂದ 10 ನೆಯ ತರಗತಿಗಳವರೆಗೆ ಕರ್ನಾಟಕ ರಾಜ್ಯದ ನಾಲ್ಕು ಸಾರ ಮಕ್ಕಳೊಂದಿಗೆ ಈಶಾನ್ಯ ಭಾರತದ ರಾಜ್ಯಗಳಾದ ಮೇಘಾಲಯ, ಮಣಿಪುರ, ಅರುಣಾಚಲಪ್ರದೇಶ, ಎಜೋರಾಂ, ಅಷ್ಟೇ ಅಲ್ಲದೆ ಒರಿಸ್ಸಾ, ಜಾರ್ಖಂಡ್, ಬಿಹಾರ, ತೆಲಂಗಾಣ, ಆಂಧ್ರಪ್ರದೇಶ, ತುಳುನಾಡು, ಮಹಾರಾಷ್ಟ್ರ ಮೊದಲಾದ ರಾಜ್ಯಗಳ ಮುನ್ನೂರಕ್ಕೂ ಹೆಚ್ಚು ಮಕ್ಕಳು. ಯಾವುದೇ ಜಾತಿ, ಮತ, ಭೇದ ಭಾವಗಳಿಲ್ಲದೆ ಶಿಕ್ಷಣ ವಂಚಿತ ಮಕ್ಕಳನ್ನು ಮೈಸೂರು ಜಿಲ್ಲೆಯ ಸುತ್ತೂರಿನ ಸುಂದರ ಪರಿಸರದಲ್ಲಿ ತಮ್ಮ ಮಮತೆಯ ಮಡಿಲಿನಲ್ಲಿ ಸಾಕಿ ಸಲಹುತ್ತಿರುವವರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು. ಸುತ್ತೂರು ಮಠದ ಈ ವಸತಿ ಶಾಲೆಯಲ್ಲಿ ಕಲಿತ ಅದೆ?ಷ್ಟೋ ಮಕ್ಕಳು ಈಗ ಸೇನೆಗೆ ಸೇರಿ ದೇಶ ಸೇವೆಯಲ್ಲಿ ನಿರತರಾಗಿದ್ದಾರೆ. ಅದೆ?ಷ್ಟೋ ಮಂದಿ ಧ ಉನ್ನತ ಹುದ್ದೆಗಳನ್ನು ಅಲಂಕರಿಸಿ ತಮ್ಮ ಜೀವನದ ಹಾದಿಯನ್ನು ಸುಗಮಗೊಳಿಸಿಕೊಂಡಿದ್ದಾರೆ. ತಾವು ಕಲಿತ ಶಾಲೆಗೆ ಆಗಾಗ ಬಂದು, ಗುರು ರಿಯರನ್ನು ಕಂಡು ಗೌರಸುತ್ತಿದ್ದಾರೆ. ಪ್ರತಿ ವರ್ಷ ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಗೆ ಪ್ರವೇಶ ಬಯಸಿ ಬರುವ ದ್ಯಾರ್ಥಿಗಳು ಹಾಗೂ ಪೋ?ಕರಿಗೆ ಒಂದು ಸಂದರ್ಶನ ಏರ್ಪಡಿಸಲಾಗುತ್ತದೆ. ಈ ಬಾರಿ ಆಯ್ಕೆಯಾಗಿ, ಶಾಲೆಯಲ್ಲಿ ಕಲಿಯುತ್ತಿರುವ ದ್ಯಾರ್ಥಿಗಳಲ್ಲಿ 23 ಜೋಡಿ ಅವಳಿ ಮಕ್ಕಳಿದ್ದಾರೆ. ಅವರಲ್ಲಿ ಬೆಳಗಾಯ ಪಂಕಜ್ ಮತ್ತು ಪವನ್ ಜೋಡಿ, ಒಂದನೇ ತರಗತಿಯಲ್ಲಿ ಕಲಿಯುತ್ತಿದ್ದಾರೆ. ಮಂಡ್ಯದ ಪ್ರತೀಕ್ ಮತ್ತು ಪ್ರಕುಲ್ ಎರಡನೇ ತರಗತಿಯಲ್ಲಿದ್ದಾರೆ. ಧಾರವಾಡದ ಧ್ಯಾನ್ ಮತ್ತು ಧ್ರುವ ಮೂರನೇ ತರಗತಿಯಲ್ಲಿದ್ದಾರೆ. ಐದನೇ ತರಗತಿಯಲ್ಲಿ ಪೂರ್ಣಕ ಮತ್ತು ಸಾತ್ವಿಕ, 7ನೇ ತರಗತಿಯಲ್ಲಿ ಕೋಲಾರ ಜಿಲ್ಲೆಯ ಸಾಯಿ ದರ್ಶನ್ ಮತ್ತು ಪ್ರೀತಮ್. ಚಾಮರಾಜನಗರದ ಆರ್ ಪ್ರತೀಕ್ ಮತ್ತು ಆರ್ ಪ್ರಜಿತ್, ಮಂಡ್ಯದ ಯೋಗ ಪ್ರಭ ಮತ್ತು ಯೋಗ ಪ್ರಿಯ, ಮೈಸೂರಿನ ಸಾನಿಕ ಮತ್ತು ಭೂಮಿಕಾ, ಬಾಗಲಕೋಟೆಯ ಸ್ಮೃ ಮತ್ತು ಸ್ನೇಹ, 8ನೇ ತರಗತಿಯಲ್ಲಿ ಚಿತ್ರದುರ್ಗದ ಪಾರ್ವತಿ ಮತ್ತು ಪ್ರಕೃತಿ, ದಾವಣಗೆರೆಯ ಗಂಗಾಧರ ಮತ್ತು ಗಿರಿಧರ, ಬೆಂಗಳೂರಿನ ಇಂಚರ ಮತ್ತು ಯುವರಾಜ, ಮೈಸೂರಿನ ಶೀಲಾ ಮತ್ತು ಶಿಲ್ಪ, ಅಲ್ಲದೆ ಮೇಘಾಲಯದ ಅವಳಿಗಳಾದ ವಾಂಕಿ ಸಿಲೆಟ್ ಮತ್ತು ಶಿಲಾಂಗ್ ಸಿಲೆಟ್ ಅವರು 7ನೇ ತರಗತಿಯಲ್ಲಿ ವ್ಯಾಸಂಗ ನಿರತರಾಗಿದ್ದಾರೆ. ಈ ಅವಳಿಗಳಲ್ಲಿ ಬಹುತೇಕ ಹೆಣ್ಣು ಮಕ್ಕಳಿದ್ದಾರೆ. ಅಂತೆಯೇ ಹೆಣ್ಣುಗಂಡು ಅವಳಿ ಇಬ್ಬರು ಇದ್ದಾರೆ. ಇವರ ಆಸಕ್ತಿ, ಅಧ್ಯಯನದ ಕುರಿತು ಕೆಲವು ಶಿಕ್ಷಕರು ಗಮನಿಸುತ್ತಿದ್ದಾರೆ. ಮಾರ್ಗದರ್ಶನ ಮತ್ತು ತರಬೇತಿಗಳನ್ನು ನೀಡುವುದರ ಮೂಲಕ ಸಂಸ್ಥೆಯ ಉದಾತ್ತ ಉದ್ದೇಶಗಳನ್ನು ಸಾಕಾರಗೊಳಿಸಲು ಮುಂದಾಗಿದ್ದಾರೆ. ಸುತ್ತೂರು ಮಠದ ಜೆಎಸ್‌ಎಸ್ ವಸತಿ ಶಾಲೆಯಲ್ಲಿ ಕರ್ನಾಟಕ ಅಷ್ಟೇ ಅಲ್ಲದೇ ಭಾರತದ ಧ ರಾಜ್ಯಗಳ 4000ಕ್ಕೂ ಹೆಚ್ಚು ದ್ಯಾರ್ಥಿಗಳು ದ್ಯಾಭ್ಯಾಸ ಮಾಡುತ್ತಿದ್ದು, 23 ಜೋಡಿ ಅವಳಿ ಮಕ್ಕಳು ಇರುವುದು ಶೇಷ.



# ಕೆಸರು ಗದ್ದೆಯಲ್ಲಿ ಕ್ರೀಡಾಕೂಟ

## ಕ್ರೀಡಾಕೂಟದಲ್ಲಿ ಬೇಗೂರು ಗಾಮಸ್ಥರು ಹಾಗೂ ಚೆಣ್ಣರ ಸಂಭ್ರಮ

**ಗೋಣಿಕೊಪ್ಪಲು:** ಪೊನ್ನಂಪೇಟೆ ತಾಲ್ಲೂಕಿನ ಬೇಗೂರು ಗ್ರಾಮದ ಪಟ್ಟಕೇರಿ ಅಂಬಲ ಒಕ್ಕೂಟದ ವತಿಯಿಂದ ಬೇಗೂರಿನ ಬೆಂಜಂಡ ಪ್ರೇಮ ಶಂಕರು ಅವರ ಗದ್ದೆಯಲ್ಲಿ 8ನೇ ವರ್ಷದ ಬೇಗೂರು ಗ್ರಾಮ ಮಟ್ಟದ ಕೆಸರುಗದ್ದೆ ಕ್ರೀಡಾಕೂಟ ಆಯೋಜಿಸಲಾಗಿತ್ತು. ಬೇಗೂರು ಗಾಮಸ್ಥರು ಹಾಗೂ ಚಿಣ್ಣರು ಕ್ರೀಡಾಕೂಟದಲ್ಲಿ ಭಾಗವಹಿಸಿ ಸಂಭ್ರಮಿಸಿದರು.

ಕೊಡವಾಮೆರ ಕೊಂಡಾಟ ಸಂಘಟನೆ ಅಧ್ಯಕ್ಷ ಚಾಮೆರ ದಿನೇಶ್ ಬೆಳ್ಯಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕೊಡವ ಜನಾಂಗವು ಈ ಮಣ್ಣಿನ ಮೂಲದಿಂದ ಬೆಳೆದು ಬಂದಿದೆ. ಭೂಮಿಯೇ ನಮ್ಮ ಎಲ್ಲಾ ಸಂಸ್ಕೃತಿ ಮತ್ತು ಬದುಕಿನ ಮೂಲ. ಅದೇ ರೀತಿ ಒಂದು ಜಾನಾಂಗದ ಹೆಗ್ಗುರುತೇ ಆ ಜನಾಂಗದ ಭಾಷೆ. ಭಾಷೆ ಮತ್ತು ಮಣ್ಣಿನ ಮೂಲತನ ಉಳಿದರೆ ಮಾತ್ರ, ಕೊಡವಾಮೆ ಬೆಳೆಯಲಿದೆ. ಕೊಡವರ ಹುಟ್ಟಿನಿಂದ ಸಾವಿನ ವರೆಗೆ, ಪ್ರತೀ ಹಬ್ಬ ಮತ್ತು ಸಂಪ್ರದಾಯ ಆಚರಣೆಗಳು ಭೂಮಿ ಮತ್ತು ಗದ್ದೆಯ ಸುತ್ತಲೇ ನಿಂತಿದೆ. ಪ್ರತಿಯೊಂದು ಆಚರಣೆಗಳೂ ಕೂಡ ಕೃಷಿ ಆಧಾರಿತವಾಗಿಯೇ ಇದೆ ಎಂದರು.

ಪೊನ್ನಂಪೇಟೆ ಅರಣ್ಯ ಮಹಾ ವಿದ್ಯಾಲಯದ ಪ್ರಾಧ್ಯಾಪಕ ಡಾ. ಜಡೇಗೌಡ ಮಾತನಾಡಿ, ಕೊಡಗಿನ, ಅದರಲ್ಲೂ ಕೊಡವ ಸಂಪ್ರದಾಯ ಅತ್ಯಂತ ಶ್ರೀಮಂತವಾಗಿದ್ದು, ಇಲ್ಲಿನ ಪ್ರಾಕೃತಿಕ ಹಿನ್ನೆಲೆ ಅತ್ಯಂತ ಸೊಬಗಿನಿಂದ ಕೂಡಿದೆ. ಇಂದಿಗೂ ಆಚರಿಸುತ್ತಾ ಬರುತ್ತಿರುವ ಹಿರಿಯರ ರೂಢಿ ಸಂಪ್ರದಾಯಗಳನ್ನು ಮುಂದಿನ ಪೀಳಿಗೆಯೂ ಪಾಲಿಸುವಂತೆ ಪ್ರೇರೇಪಿಸಬೇಕಿದೆ ಎಂದರು.

ಬೇಗೂರಿನ ಗ್ರಾಮಸ್ಥರು ಅನೇಕ ಸವಾಲುಗಳ ನಡುವೆಯೂ ಭತ್ತದ ಕೃಷಿಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಬೇಗೂರು ಗ್ರಾಮದ ಪ್ರಗತಿಪರ ಕೃಷಿಕರಾದ ಕೇಚಿಟ್ಟಿರ ಪೊನ್ನಪ್ಪ ಅವರನ್ನ ಒಕ್ಕೂಟದ ವತಿಯಿಂದ ಸನ್ಮಾನಿಸಲಾಯಿತು.



ಕೆಸರು ಗದ್ದೆ ಫುಟ್ಬಾಲ್ನಲ್ಲಿ ಮಂಜು ನೇತೃತ್ವದ ತಂಡ ಪ್ರಥಮ, ಪೊನ್ನಪ್ಪ ನೇತೃತ್ವದ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು. ಹಗ್ಗ ಜಗ್ಗಾಟ ಸ್ಪರ್ಧೆ ಪುರುಷರ ವಿಭಾಗದಲ್ಲಿ ಮಹಾವಿಷ್ಣು ತಂಡ ಪ್ರಥಮ, ಕಾರಿಯಪ್ಪ ನೇತೃತ್ವದ ತಂಡ ದ್ವಿತೀಯ ಸ್ಥಾನ ಪಡೆಯಿತು. ಮಹಿಳೆಯರ ವಿಭಾಗದಲ್ಲಿ ರಮ್ಯ ನೇತೃತ್ವದ ತಂಡ ಪ್ರಥಮ ಸ್ಥಾನ, ರಶ್ಮಿ ನೇತೃತ್ವದ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು. ಕೆಸರುಗದ್ದೆ ಓಟದ ಸ್ಪರ್ಧೆ ಪುರುಷರ ವಿಭಾಗದಲ್ಲಿ ಮಲ್ಲತಡ ಪೊನ್ನಪ್ಪ ಪ್ರಥಮ, ಮತ್ರಂಡ ಕಿರಣ್ ದ್ವಿತೀಯ, ಮಹಿಳೆಯರ ವಿಭಾಗದಲ್ಲಿ ಜಶ್ಮಿ ಪ್ರಥಮ, ಕಾವ್ಯ ದ್ವಿತೀಯ ಸ್ಥಾನ ಪಡೆದರು.ಪೈರು ಕೀಳುವ ಸ್ಪರ್ಧೆಯಲ್ಲಿ ಕೇಚೆಟ್ಟಿರ ಅಂಬಿಕ ಪ್ರಥಮ, ಮತ್ರಂಡ ಪಾರ್ವತಿ ದ್ವಿತೀಯ, ವಿಷದ ಚೆಂಡು ಸ್ಪರ್ಧೆ ಪುರುಷರ ವಿಭಾಗದಲ್ಲಿ ವೀಟು ಉತ್ತಪ್ಪ ಪ್ರಥಮ, ಚಂಗಪ್ಪ ದ್ವಿತೀಯ, ಮಹಿಳೆಯರ ವಿಭಾಗದಲ್ಲಿ ಚೈತ್ರ ಪ್ರಥಮ, ದಿವ್ಯ ದ್ವಿತೀಯ ಸ್ಥಾನ ಪಡೆದು ಕೊಂಡರು. ಮಕ್ಕಳ ಓಟದಲ್ಲಿ ಬಾಲಕರ ವಿಭಾಗದಲ್ಲಿ ಎಂ.ವೈ. ಚಂಗಪ್ಪ ಪ್ರಥಮ, ಬಿ.ಬಿ. ಶಿವಂ ದ್ವಿತೀಯ, ಬಾಲಕಿಯರ ವಿಭಾಗದಲ್ಲಿ ದಿಶಾ ಬೋಜಮ್ಮ ಪ್ರಥಮ, ಯಶಿಕ ದೇಚಮ್ಮ ದ್ವಿತೀಯ ಸ್ಥಾನ ಪಡೆದುಕೊಂಡರು. ಗಿರಿಜನರ ಓಟದ ಸ್ಪರ್ಧೆಯಲ್ಲಿ ಮಂಜು ಪ್ರಥಮ, ಅನಿಲ್ ದ್ವಿತೀಯ ಸ್ಥಾನ, ಶಾಲಾ ಬಾಲಕಿಯರ ಓಟದಲ್ಲಿ ನವ್ಯ ಮುತ್ತಮ್ಮ ಪ್ರಥಮ, ಸೀತ ದ್ವಿತೀಯ ಸ್ಥಾನ ಗಳಿಸಿದರು.

ಬೇಗೂರು ಪಟ್ಟಕೇರಿ ಅಂಬಲ ಒಕ್ಕೂಟದ ಸದಸ್ಯರಿಗಾಗಿ ನಡೆದ ವಿಷದ ಚೆಂಡು ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಅರ್ಜುನ್ ಪ್ರಥಮ, ಬಿಪಿನ್ ದ್ವಿತೀಯ, ಮಹಿಳೆಯರ ವಿಭಾಗದಲ್ಲಿ ರಮ್ಯ ಪ್ರಥಮ, ಡೀನ ದ್ವಿತೀಯ, ಒಕ್ಕೂಟದ ಪುರುಷರ ಓಟದಲ್ಲಿ ಮಲ್ಲತಡ ಉತ್ತಪ್ಪ ಪ್ರಥಮ, ಬೈರಂಡ ಮುತ್ತಣ್ಣ ದ್ವಿತೀಯ ಸ್ಥಾನ ಪಡೆದುಕೊಂಡರು.

ಒಕ್ಕೂಟದ ಬಾಲಕರ ಓಟದಲ್ಲಿ ಲೂಥನ್ ಸೋಮಯ್ಯ ಪ್ರಥಮ, ಬೋಪಣ್ಣ ದ್ವಿತೀಯ, ಒಕ್ಕೂಟದ ಬಾಲಕಿಯರ ಓಟದಲ್ಲಿ ಗಾನವಿ ದೇಚಮ್ಮ ಪ್ರಥಮ, ನಿಹಾರಿಕಾ ದ್ವಿತೀಯ ಸ್ಥಾನ ಪಡೆದುಕೊಂಡರು.

ಬೇಗೂರು ಪಟ್ಟಗೇರಿ ಅಂಬಲ ಒಕ್ಕೂಟದ ಅಧ್ಯಕ್ಷ ಮತ್ರಂಡ ರಾಜ ಮುತ್ತಪ್ಪ, ಕಾರ್ಯದರ್ಶಿ ಚೋಡುಮಾಡ ಅಪ್ಪು ಸುಬ್ಬಯ್ಯ, ಉಪಾಧ್ಯಕ್ಷ ಕೇಚೆಟ್ಟಿರ ಶರಣು ತಮ್ಮಯ್ಯ, ಸಹ ಕಾರ್ಯದರ್ಶಿ ಮತ್ರತಡ ವೀಟು ಉತ್ತಪ್ಪ, ಸಲಹೆಗಾರರಾದ ಮತ್ರತಡ ಗಣೇಶ್, ಹಿರಿಯರಾದ ಮತ್ರಂಡ ಬೋಸು, ಸದಸ್ಯರಾದ ಮತ್ರಂಡ ಗಣೇಶ್, ಅರಮಣಮಾಡ ವಿಜಯ್, ಬೆಂಜಾಂಡ ಗಾಂಧಿ, ಮತ್ರಂಡ ಬೋಪಣ್ಣ, ಬೆಂಜಾಂಡ ರಾಮು, ಚೋಡುಮಾಡ ನಿರನ್, ಬೈರಂಡ ಪೂಣಚ್ಚ, ಒಕ್ಕೂಟದ ಸದಸ್ಯರು, ಬೇಗೂರು ಗ್ರಾಮಸ್ಥರು ಇದ್ದರು.

# ರಸ್ತೆಗಳ ಗುಂಡಿ ಮುಚ್ಚಲು ಶಾಸಕರ ಸೂಚನೆ

**ಕೆ.ಆರ್.ನಗರ:** ಮಳೆ ಹಾನಿಯಿಂದ ಗುಂಡಿ ಬಿದ್ದು ಹಾಳಾಗಿರುವ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕು ವ್ಯಾಪ್ತಿಯ ಲೋಕೋಪಯೋಗಿ ಇಲಾಖೆಗೆ ಒಳಪಡುವ ರಸ್ತೆಗಳ ಗುಂಡಿ ಮುಚ್ಚಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಪಟ್ಟಣದಿಂದ ಹುಣಸೂರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿ ಬಿದ್ದಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕರ ದೂರಿನ ಮೇರೆಗೆ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿ ಮಾತನಾಡಿದ ಅವರು ತುರ್ತು ಕಾಮಗಾರಿ ಮಾಡಿ ಜನ ಮತ್ತು ವಾಹನ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕೆಂದು ಸೂಚಿಸಿದರು. ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಕ್ಷೇತ್ರದ ವಿವಿದ ರಸ್ತೆಗಳ ಅಭಿವೃದ್ಧಿ ಮತ್ತು ಕ್ರೀಡಾಂಗಣದ ಕಾಮಗಾರಿಗೆ 25 ಕೋಟಿ ಹಣ ಬಿಡುಗಡೆಯಾಗಿದ್ದು ಶೀಘ್ರದಲ್ಲಿಯೇ ಕಾಮಗಾರಿ ಆರಂಭಿಸಲಾಗುತ್ತದೆ ಎಂದು ತಿಳಿಸಿದರು.

ಪುರಸಭೆ ವೃತ್ತದಿಂದ ಮಧುವನಹಳ್ಳಿ ಮಾರ್ಗವಾಗಿ ಬ್ಯಾಡರಹಳ್ಳಿ ಮಳಲಿ ಹೊಸಕೋಟೆ ಸಂಪರ್ಕ ರಸ್ತೆಗೆ 22 ಕೋಟಿ, ಭೇರ್ಯ ಮುಖ್ಯ ರಸ್ತೆಯಿಂದ ಬಟಿಗನಹಳ್ಳಿ-ಮಿರ್ಲೆ ಸಂಪರ್ಕ ರಸ್ತೆಗೆ 3 ಕೋಟಿ, ಮಾಯಗೌಡನಹಳ್ಳಿಯಿಂದ-ಹೊಸಕೋಟೆ ಸಂಪರ್ಕ ರಸ್ತೆಗೆ 5 ಕೋಟಿ, ಸಾಲಿಗ್ರಾಮ- ಹಳ್ಳಿಮೈಸೂರು ಮುಖ್ಯ ರಸ್ತೆಯಿಂದ ತಂದ್ರೆಕೊಪ್ಪಲು ರಸ್ತೆಗೆ 3 ಕೋಟಿ, ಕೆ.ಆರ್.ನಗರ



ರಾಮನಾಥಪುರ ರಸ್ತೆಯಿಂದ ಸಿದ್ದನಕೊಪ್ಪಲು ರಸ್ತೆ ಅಭಿವೃದ್ದಿಗೆ 1.5 ಕೋಟಿ ಹಣ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಇದರ ಜತೆಗೆ ಕೆಸ್ತೂರು ಗೇಟ್ ಬಳಿ ಇರುವ ಕಾವೇರಿ ನದಿಯ ಏತ ನೀರಾವರಿ ಯೋಜನೆಯ ಕಾಮಗಾರಿಗೆ 60 ಕೋಟಿ ಹಣ ಮೀಸಲಿರಿಸಿದ್ದು ಅದಕ್ಕೆ ಈಗಾಗಲೇ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು ಶೀಘ್ರದಲ್ಲಿಯೆ ಟೆಂಡರ್ ಕರೆದು ಕಾಮಗಾರಿ ಆರಂಭಿಸಲಾಗುತ್ತದೆ ಎಂದು ಹೇಳಿದರು. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖಾ ಅಧಿಕಾರಿಗಳು ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹಾಜರಿದ್ದರು.

# ದುರಂತದಿಂದ ಮಾನವ ಪಾಠ ಕಲಿಯಬೇಕಿದೆ

**ಹುಣಸೂರು:** ಪ್ರಕೃತಿ ವಿಕೋಪಕ್ಕೆ ಕಾರಣ ಮನುಷ್ಯರೇ ಹೊರತು ಬೇರಾರು ಅಲ್ಲ. ಪ್ರಕೃತಿ ಭಾಗವಾಗಿ ಬದುಕಬೇಕಾದ ನಾವು ಎಲ್ಲವು ನನ್ನದೇ ಎಂಬ ನಾನತ್ವ ನಮ್ಮನ್ನು ಜಲಪ್ರಳಯದಂತ ಅವಘಡಕ್ಕೆ ನೂಕಿದೆ ಎಂದು ರೋಟರಿ ಕ್ಲಬ್ ಅಧ್ಯಕ್ಷ ಕೆ.ಪಿ. ಪ್ರಸನ್ನ ವಿಷಾದಿಸಿದರು.

ನಗರದ ಸಂವಿಧಾನ ವೃತ್ತದಲ್ಲಿ ರೋಟರಿ ಕ್ಲಬ್ ಮತ್ತು ನಗರದ ಟ್ಯಾಲೆಂಟ್ ವಿದ್ಯಾಸಂಸ್ಥೆ ಹಾಗೂ ಎನ್‌ಎಸ್‌ಎಸ್ ಸಹಯೋಗದಲ್ಲಿ ಶಾಲಾ ಮಕ್ಕಳ ಜತೆ ಮೇಣದ ಬತ್ತಿ ಹಿಡಿದು ಬಜಾರ್ ರಸ್ತೆ, ಜೆ.ಎಲ್.ಬಿ. ಸಿಲ್ವರ್ ಜುಬ್ಲಿ ರಸ್ತೆ ಮೂಲಕ ಸಂವಿಧಾನ ಸರ್ಕಲ್ ನಲ್ಲಿ ಅಂತ್ಯಮಾಡಲಾಯಿತು. ನಂತರ ಮಾತನಾಡಿದ ಅವರು, ಇತ್ತೀಚೆಗೆ ಪಕ್ಕದ ಕೇರಳದ ವಯನಾಡು ಭಾಗದಲ್ಲಿ ಮಳೆಯ ಆರ್ಭಟಕ್ಕೆ ಮಾನವ ಕುಲ ನಲುಗಿಹೋಗಿದ್ದು, ಅದಕ್ಕೆ ನಾವೇ ನೇರ ಹೊಣೆಯಾಗಿದ್ದೇವೆ ಎಂದರು.

ಕಾಡು ಮೇಡುಗಳ ಅಗೆದು ಕಾಂಕ್ರೀಟ್ ಕಟ್ಟಡವ ನಿರ್ಮಿಸಿ, ಸಹಜ ಪ್ರಕೃತಿ ಸೌಂದರ್ಯಕ್ಕೆ ಧಕ್ಕೆ ಬರುವಂತೆ ಮಾಡಿ, ಮನುಷ್ಯ ಅತಿ ಆಸೆಗೆ ಬಿದ್ದ ಕಾರಣ ಇಂದು ತಲಾಂತರದಿಂದ ಇದ್ದ ಬೆಟ್ಟ, ಗುಡ್ಡಗಳು, ದಿಢೀರ್ ಭೂಕುಸಿತ ಕಾಣಲು ನಮ್ಮ ದುರಾಸೆಯೇ ಕಾರಣವೆಂದು ಬೇಸರ ವ್ಯಕ್ತಪಡಿಸಿದರು.

ಟ್ಯಾಲೆಂಟ್ ವಿದ್ಯಾಸಂಸ್ಥೆಯ ಮುಖ್ಯಸ್ಥ ನವೀನ್ ರೈ ಮಾತನಾಡಿ, ಇನ್ನು ಮುಂದೆಯಾದರೂ ನಾವುಗಳು ಪ್ರಕೃತಿಯ ಒಡಲಿಗೆ ಮಾಡುತ್ತಿರುವ ದ್ರೋಹದ ಬಗ್ಗೆ ಎಚ್ಚತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆಗೆ ದೊಡ್ಡ ಗಂಡಾಂತರ ಕಾದಿದೆ ಎಂದರು.

ರೋಟರಿ ಕಾರ್ಯದರ್ಶಿ ಹೆಚ್.ಆರ್.ಕೃಷ್ಣಕುಮಾರ್



ಮಾತನಾಡಿ, ಇಂತಹ ದುರಂತಗಳಿಂದ ನಾವು ಪಾಠ ಕಲಿಯಬೇಕು. ಆದರೆ ನಾವುಗಳು ಕ್ಷಣಾರ್ಧದಲ್ಲಿ ಮರೆತು, ನಮ್ಮ ಹಳೇ ಚಾಳಿ ಶುರುಮಾಡುವುದರಿಂದ ಪ್ರತಿವರುಷ ಪ್ರಕೃತಿ ನಮಗೆ ಒಂದೊಂದು ಪಾಠ ಕಲಿಸುತ್ತಿದೆ. ಇದಕ್ಕೆ ಮಕ್ಕಳು ಮರಿ ಎನ್ನದೆ ಬಲಿಯಾಗುತ್ತಿರುವುದು ನೋವಿನ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಸಹಾಯಕ ಗವರ್ನರ್ ಆನಂದ್ ಆರ್. ವಲಯ ಸೇನಾನಿ ಪಾಂಡುಕುಮಾರ್, ಪಿ. ಹಿರಿಯ ರೋಟರಿ ಸದಸ್ಯರಾದ ರಾಜಶೇಖರ್, ಡಾ.ವೃಷಬೇಂದ್ರಸ್ವಾಮಿ, ಹೋಟೆಲ್ ಮಂಜಣ್ಣ, ಶ್ಯಾಮ್, ಬಿ.ಆರ್.ಸಿ. ಸಂತೋಷ್ ಕುಮಾರ್, ಮತ್ತು ತಾಲೂಕು ಕಸಾಪ ಅಧ್ಯಕ್ಷ ಹೆಚ್.ಕೆ. ಮಹದೇವ್, ಪ್ರಾಂಶುಪಾಲರು ಮಂಜುನಾಥ್ ಎಂ.ಟಿ. ಟ್ಯಾಲೆಂಟ್ ವಿದ್ಯಾ ಸಂಸ್ಥೆಯ ನಿರ್ದೇಶಕರು ಎನ್ ಆರ್ ಮಂಜುನಾಥ್ ಇಂಟರಾಕ್ಟ್ ಕ್ಲಬ್ ಸಂಚಾಲಕ ಮಂಜುನಾಥ ಡಿಎನ್‌ಎಸ್‌ಎಸ್ ಸಂಚಾಲಕರು ಜಗದೀಶ್, ಶಿಕ್ಷಕರಾದ ಲೋಹಿತ್, ವಾಣಿಶ್ರೀ, ವಿಂದ್ಯಾ, ಫರ್ಹೀನ್ ತಾಜ್, ಚೈತ್ರ ಇದ್ದರು.

## ವಿಶ್ವ ಆದಿವಾಸಿ ದಿನಾಚರಣೆ

ಹೆಚ್.ಡಿ.ಕೋಟೆ: ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ವತಿಯಿಂದ 30ನೇ ವರ್ಷದ ವಿಶ್ವ ಆದಿವಾಸಿ ದಿನಾಚರಣೆ ಆಗಸ್ಟ್ 9 ರಂದು ದಾವಣಗೆರೆಯಲ್ಲಿ ನಡೆಯಲಿದೆ ಎಂದು ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಜಿಲ್ಲಾ ಅಧ್ಯಕ್ಷ ಜಿ.ಸ್ವಾಮಿ ತಿಳಿಸಿದರು. ಪಟ್ಟಣದ ಪತ್ರಕರ್ತರ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. 30ನೇ ವರ್ಷದ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮವು ದಾವಣಗೆರೆ ನಗರದ ಬಂಬೂ ಬಜಾರ್ ಮಲ್ಲಿಕಾರ್ಜುನ ಕಲ್ಯಾಣ ಮಂಟಪದಲ್ಲಿ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ ಆದುದರಿಂದ ತಾಲೂಕು ಹಾಗೂ ಜಿಲ್ಲೆಯ ಎಲ್ಲಾ ಆದಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಈ ಕಾರ್ಯಕ್ರಮದಲ್ಲಿ ರಾಯಚೂರು ದೇವದುರ್ಗ ತಾಲೂಕಿನ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರು ಪೀಠ ಶ್ರೀ ಸಿದ್ದರಾಮ ಸ್ವಾಮಿ, ಚಿತ್ರದುರ್ಗದ ಮೇದಾರ ಕೇತೇಶ್ವರ ಗುರುಪೀಠದ ಪೀಠಾಧಿಪತಿ ಶ್ರೀ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿಗಳು, ಸಾನಿಧ್ಯ ವಹಿಸಲಿದ್ದು, ಗಡಿ ಮತ್ತು ಭೂ ವಿಜ್ಞಾನ ಹಾಗು ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದೆ ಡಾ:ಪ್ರಭ ಮಲ್ಲಿಕಾರ್ಜುನ್, ವಿಧಾನಪರಿಷತ್ ಸದಸ್ಯ ಶಾಂತರಾಮ ಸಿದ್ದಿ, ಭಾಗವಹಿಸಲಿದ್ದಾರೆ. ಜೇನು ಕುರುಬ, ಯರವ, ಸೋಲಿಗ, ಕಾಡು ಕುರುಬ, ಸೇರಿದಂತೆ ಆದಿವಾಸಿಗಳ ಮನೆ ನಿರ್ಮಾಣಕ್ಕೆ ಕೇರಳ ಮಾದರಿಯಲ್ಲಿ 7 ಲಕ್ಷ ಅನುದಾನ ನೀಡಬೇಕು, ಆಶ್ರಮ ಶಾಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಬೇಕು, ಆಶ್ರಮ ಶಾಲೆಯಲ್ಲಿ ವಾಲ್ಮೀಕಿ ಪದವನ್ನು ಆದಿವಾಸಿ ಆಶ್ರಮ ಶಾಲೆ ಎಂದು ನವೀಕರಿಸಬೇಕು, ಆದಿವಾಸಿ ಯುವಕ ಯುವತಿಯರಿಗೆ ಉದ್ಯೋಗ ಕಲ್ಪಿಸುವಲ್ಲಿ ಉದ್ಯೋಗ ಕಲ್ಪಿಸುವಲ್ಲಿ ವಿಶೇಷ ಯೋಜನೆಯನ್ನು ರೂಪಿಸಬೇಕು, ಅರಣ್ಯ ಹಕ್ಕು ಕಾಯ್ದೆಗಳನ್ನು ಯಥಾವತ್ತಾಗಿ ಜಾರಿಗೊಳಿಸಬೇಕು ಹಾಗೆ ಮುಜಫರ್ ಅಶಾದಿ ವರದಿಯನ್ನು ರಾಜ್ಯ ಸರ್ಕಾರ ಜಾರಿಗೆ ತರಬೇಕು ಆದಿವಾಸಿಗಳ ಮೂಲಭೂತ ಸೌಕರ್ಯಗಳಿಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಪಿ ಎಚ್ ಡಿ ಪದವಿ ಪಡೆದಿರುವ ಮೂಲ ಆದಿವಾಸಿ 24 ಮಂದಿ ಪದವೀಧರರನ್ನು ಆದಿವಾಸಿ ಸಿರಿ ಪ್ರಶಸ್ತಿ ನೀಡಲಾಗುವುದು, ಪದ್ಮಶ್ರೀ ಪುರಸ್ಕೃತ ಮೊತ್ತ ಹಾಡಿಯ ಸೋಮಣ್ಣ, ವಕೀಲ ಡಾ: ಜೆ. ಎಸ್. ಮಧು ಕುಮಾರ್, ಹಂಪಿ ವಿಶ್ವವಿದ್ಯಾನಿಲಯದ ಬುಡಕಟ್ಟು ಸಂಶೋಧನಾ ಮುಖ್ಯಸ್ಥೆ ಡಾ. ಕೆ.ಎನ್. ಮೇಸ್ತ್ರಿ ಇವರುಗಳನ್ನು ಅಭಿನಂದಿಸಲಾಗುವುದು ಎಂದರು. ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ತಿನ ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವರಾಜು, ತಾಲೂಕು ಅಧ್ಯಕ್ಷ ಕಾಳಪ್ಪ, ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ನಿಂಗಮ್ಮ, ನಿರ್ದೇಶಕ ಬಸವರಾಜು ಇನ್ನು ಮುಂತಾದವರು ಹಾಜರಿದ್ದರು.

## ಉದ್ಯಮಶೀಲತಾ ತಿಳಿವಳಿಕೆ ಶಿಬಿರ

**ಮಂಡ್ಯ:** ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು ಹಾಗೂ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್), ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ ಇವರ ಸಂಯುಕ್ತ ಆಶ್ರಯದಲ್ಲಿ, ಮಂಡ್ಯ ಜಿಲ್ಲೆಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಬಯಸುವವರಿಗೆ ಒಂದು ದಿನದ ಉದ್ಯಮಶೀಲತಾ ತಿಳುವಳಿಕೆ ಶಿಬಿರವನ್ನು ಆಗಸ್ಟ್ 12 ರಂದು ಹರ್ಡೀಕರ್ ಭವನ, ಸುಭಾಷ ನಗರ, ಮಂಡ್ಯ ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಕಾರ್ಯಕ್ರಮದಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಬಯಸುವ ಆಸಕ್ತರಿಗೆ ಪ್ರೇರಣೆ, ಸ್ವಂತ ಉದ್ಯಮ ಸ್ಥಾಪನೆಗಾಗಿ ಸರ್ಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ದೊರೆಯುವ ನೆರವು/ಪ್ರೋತ್ಸಾಹ, ಯೋಜನೆಗಳ ಆಯ್ಕೆ, ಮುಂದೆ ಕೈಗೊಳ್ಳಲಾಗುವ ಉದ್ಯಮಶೀಲತಾಭಿವೃದ್ಧಿ ತರಬೇತಿ ಬಗ್ಗೆ ಮಾಹಿತಿ ಹಾಗೂ ಇತರೆ ಕೈಗಾರಿಕಾ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುವುದು. ಆಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಲು ಕೋರಲಾಗಿದೆ. ಭಾಗವಹಿಸುವವರು ಕನಿಷ್ಠ 18 ವರ್ಷ ಮೇಲ್ಪಟ್ಟ ವಯಸ್ಸಿನವರಾಗಿರಬೇಕು ಹಾಗೂ ಓದಲು/ ಬರೆಯಲು ಬರುತ್ತಿರಬೇಕು. ಮಾಹಿತಿಗಾಗಿ ಸಿಡಾಕ್, ಮಂಡ್ಯ ದೂ. ಸಂ. 9008194396/ 7760145784 ಸಂಪರ್ಕಿಸಿ.

## 20ಕ್ಕೆ ದೇವರಾಜ ಅರಸು ಜಯಂತಿ

**ತಿ.ನರಸೀಪುರ:** ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಶ್ರಯದಲ್ಲಿ ದಿನಾಂಕ ಆ, 20 ರಂದು ಮಾಜಿ ಮುಖ್ಯ ಮಂತ್ರಿ ಡಿ.ದೇವರಾಜ ಅರಸು ರವರ 109 ನೇ ಜನ್ಮ ದಿನಾಚರಣೆಯನ್ನು ತಾ.ಪಂ. ಸಭಾಂಗಣದಲ್ಲಿ ಆಚರಣೆ ಮಾಡಲು ತೀರ್ಮಾನಿಸಲಾಯಿತು. ತಾ.ಪಂ.ಸಭಾಂಗಣದಲ್ಲಿ ತಾಲ್ಲೂಕು ದಂಡಾಧಿಕಾರಿ ಸುರೇಶಾಚಾರ್ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜು ಅರಸು ಜನ್ಮ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಎಲ್ಲಾ ಮುಖಂಡರ ಸಲಹೆ ಪಡೆದ ತಹಶೀಲ್ದಾರ್ ರವರು ಸರ್ಕಾರದ ನಿರ್ದೇಶನದಂತೆ ಆ.20 ಕ್ಕೆ ಡಿ.ದೇವರಾಜ ಅರಸು ಜನ್ಮ ದಿನಾಚರಣೆ ಆಚರಣೆ ಮಾಡಲು ತೀರ್ಮಾನ ಕೈಗೊಂಡರು. ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿ ನಿಲಯದಲ್ಲಿದ್ದು ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆ ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ತಲಾ ಮೂರು ವಿದ್ಯಾರ್ಥಿಗಳನ್ನು ಗೌರವಿಸಲಾಗುವುದು ಹಾಗೂ ವಿದ್ಯಾರ್ಥಿ ನಿಲಯಗಳ ನಿಲಯಾರ್ಥಿಗಳಿಗೆ ಪ್ರಬಂಧ ಭಾಷಣ. ರಸ ಪ್ರಶ್ನೆ, ಕ್ರೀಡಾಸ್ಪರ್ಧೆಯನ್ನು ಏರ್ಪಡಿಸ ಲಾಗುವುದು ಅದರಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನವನ್ನು ನೀಡಲಾಗುತ್ತದೆ ಎಂದು ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿ ರಾಜಣ್ಣ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ತಾ.ಪಂ.ಇಒ ಕೃಷ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ, ಪುರಸಭಾ ಮುಖ್ಯಾಧಿಕಾರಿ ವಸಂತ ಕುಮಾರಿ, ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.



# ಕಾಮಗಾರಿಗಳಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ

**ಮಾಲೂರು :** ಗ್ರಾಮ ಪಂಚಾಯಿತಿಯಲ್ಲಿ ನಡೆದಿರುವ ಕಾಮಗಾರಿಗಳಲ್ಲಿ ಬ್ರಹ್ಮಾಂಡ ಭ್ರ?ಷ್ಟಾಚಾರ ನಡೆದಿದೆ ಎಂಬ ಆರೋಪದಲ್ಲಿಯಾವುದೇ ಹುರುಳಿಲ್ಲ ಇದು ಸತ್ಯಕ್ಕೆದೂರವಾಗಿದೆಎಂದುಗ್ರಾಮ ಪಂಚಾಯಿತಿಅಧ್ಯಕ್ಷ ವಿನಯ್‌ಗೌಡ ತಿಳಿಸಿದ್ದಾರೆ.

ತಾಲೂಕಿನ ನೊಸಗೆರೆಗ್ರಾಮ ಪಂಚಾಯಿತಿ ಸಭಾಭವನದಲ್ಲಿ ಬುಧವಾರ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು. ನೊಸುಗೆರೆಗ್ರಾಮ ಪಂಚಾಯಿತಿಯಲ್ಲಿಒಟ್ಟು 18 ಮಂದಿ ಗ್ರಾಪಂ ಸದಸ್ಯರಿದ್ದುಚುನಾವಣೆಯ ಸಮಯದಲ್ಲಿ ಮಾತ್ರರಾಜಕೀಯ ಪಕ್ಷಗಳು ವಿನಹ ಹೊರತಾಗಿ ಉಳಿದೆಲ್ಲ ಸಮದಲ್ಲಿ ಹಿರಿಯರ ಮಾರ್ಗದರ್ಶನ ಪಡೆದುಅವರ ಸಲಹೆ ಯಂತೆಎಲ್ಲಾ ಸದಸ್ಯರು ಪಕ್ಷಾತೀತವಾಗಿ ಒ ಗ್ಗಟ್ಟಿನಿಂದ ತಮ್ಮ ವ್ಯಾಪ್ತಿಗೆ ಬರುವಗ್ರಾಮ ಗಳ ಅಭಿವೃದ್ಧಿ ಸೇವೆ ಮಾಡುತಿದ್ದೇವೆ. ನಮ್ಮ ಪಂಚಾಯತಿಲ್ಲಿ ಸದಸ್ಯ ಬಿ ಎನ್ ಪ್ರಶಾಂತ್ ಇತ್ತೀಚೆಗೆ ಕೆಲವು ಪತ್ರಿಕೆಗಳಿಗೆ ಹೇಳಿಕೆ ನೀಡಿ ನೊಸಗೆರೆಗ್ರಾಮ ಪಂಚಾಯಿತಿಯ ಕಾಮಗಾರಿಗಳಲ್ಲಿ ಬ್ರಹ್ಮಾಂಡ ಭ್ರ?ಷ್ಟಾಚಾರ ನಡೆದಿದೆಎಂದುಆರೋಪ ಮಾಡಿ



ಪಂಚಾಯತಿಗೆ ಕಳಂಕ ತಂದಿರುವುದುಅವರಿಗೆ ಶೋಭೆತರವಂತದಲ್ಲಏನಾದರೂಆರೀತಿ ನಡೆದಿದ್ದರೆ ಪಂಚಾಯತಿಯಲ್ಲಿ ಕೂತು ಚರ್ಚಿಸಬಹುದಿತ್ತು. ಪಿ ಡಿ ಒ ಸುರೇಶ್ ಬಾಬು ನಮ್ಮಗ್ರಾಮ ಪಂಚಾಯತಿಗೆ ಬಂದಾಗನಿಂದ ಸಾರ್ವಜನಿಕರುಗ್ರಾ. ಪಂ ಸದಸ್ಯರು ಸಿಬ್ಬಂದಿ ಯಾರ ಬಳಿಯೂ ಆತ್ಮವಿಶ್ವಾಸದಿಂದ ಇದ್ದಾರೆ ತಾರತಮ್ಯ ಮಾಡದೆಎಲ್ಲಾ ಸದಸ್ಯರನ್ನುಒಟ್ಟಿಗೆತೆಗೆದುಕೊಂಡು ಪಂಚಾಯತಿಗೆ ವ್ಯಾಪ್ತಿಗೆ ಬರುವಎಲ್ಲಾ ಗ್ರಾಮಗಳ ಅಭಿವೃದ್ಧಿಗೆಒತ್ತುಕೊಡುತ್ತಿದ್ದಾರೆ. ಸದಸ್ಯರಾದ ಪ್ರಶಾಂತ್‌ರವರು ಹತಾಷೆ ಮನೋಭಾವದಿಂದ ಪಿ ಡಿ ಒ ಮೇಲೆ ಆರೋಪ ಮಾಡುತಿರುವುದರಲ್ಲಿ ಯಾವುದೇ ಸತ್ಯಾಂಶ ವಿಲ್ಲ ಎಂದರು. ಪ್ರತಿವರ್ಷ ನೊಸಗೆರೆಗ್ರಾಮ ಪಂಚಾಯತಿಯಒಟ್ಟುತೆರೆಗೆ ಬೇಡಿಕೆರೂ 4,78,32,274ಆಗಿದ್ದು ಪ್ರಸ್ತುತ ವರ್ಷರೂ 3,12,02,174 ಗಳ ಬೇಡಿಕೆಯಾಗಿದ್ದು ಹಿಂದಿನ ವರ್ಷದ ಬಾಕಿ ರೂ 1,66,30,200 ಗಳಾಗಿರುತ್ತದೆ. ಪ್ರಸ್ತುತಆರ್ಥಿಕ ವ?ರ್ಷರೂ 57,86,859ಗಳ ತೆರಿಗೆ ಸಂಗ್ರಹಣೆಯಾಗಿದೆ ಪ್ರತಿ ಹಳ್ಳಿಗೆ 2ಹೈಮಾಸ್ ಲೈಟ್ ಗಳು,ಸೇರಿದಂತೆ ಗ್ರಾಮಸ್ಥರಆದ್ಯತೆ ಮೇರಿಗೆ ಭೇಟಿ ನೀಡಿ ಸ್ಥಳೀಯವಾಗಿ ಪರಿಶೀಲನೆ ಮಾಡಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದರಲ್ಲಿ ನಮ್ಮ ಪಂಚಾಯತಿಅಭಿವೃದ್ಧಿಅಧಿಕಾರಿ, ಎಲ್ಲಾ ಸದಸ್ಯರು ಮುಂಚೂಣಿಯಲ್ಲಿದ್ದೇವೆಅಭಿವೃದ್ಧಿ ಕಾಮಗಾರಿಗಳು, ಶಿಕ್ಷಣ, ಶುದ್ಧಕುಡಿಯುವ, ಅರೋಗ್ಯ ನೈರ್ಮಲ್ಯ ಸೇರಿದಂತೆಅಲವರು ಸೌಕರ್ಯಗಳಿಗೆ ಜನವರಿ ಯಿಂದಜೂನ್‌ಅಂತ್ಯದವರಿಗೂರೂ 48 ಲಕ್ಷಖರ್ಚುಆಗಿದ್ದು,ಆದರಲ್ಲಿ ಮಾರ್ಚ್ ತಿಂಗಳಲ್ಲಿ ಸರ್ಕಾರದ ವಿವಿಧ ಹೆಡ್‌ಖಾತೆಗೆ ಸೆಸ್ 13.50 ಲಕ್ಷ ಸಂದಾಯ ವಾಗಿದೆಕಾಮಗಾರಿ ಗಳಿಗೆ ಹಂತ ಹಂತ ವಾಗಿ ಬಿಲ್ ಪಾವತಿಯಾಗಿದೆ ವಿನಹ ಒಂದೇಕಾಮಗಾರಿಗೆಎರಡು ಬಿಲ್ ಪಾವತಿಯಾಗಿಲ್ಲಏನಾದರೂ ವ್ಯತ್ಯಾಸದ ಬಗ್ಗೆ ಅವರ ಬಳಿ ಇದ್ರೆ ಸಭೆಯಲ್ಲಿ ಬಂದು ಕೂಲಂಕುಶವಾಗಿ ಚರ್ಚೆ ಮಾಡಲಿ ಅದನ್ನು ಬಿಟ್ಟು ಈ ರೀತಿ ಹೇಳಿಕೆಗಳು ಕೊಡುವುದು ಸಮಂಜಸವಲ್ಲ ಎಂದು ಹೇಳಿದರು.

ಉಪಾಧ್ಯಕ್ಷರಾದ ಸರಸ್ವತಿ, ಮಾಜಿಅಧ್ಯಕ್ಷ ಬ್ಯಾಲ ಹಳ್ಳಿ ಚಂದ್ರ ಶೇಖರ್‌ಗೌಡ ಸದಸ್ಯರಾದರಮೇಶ್, ನಾರಾಯಣಸ್ವಾಮಿ, ಲಕ್ಷ್ಮಿಕಾಂತ್,ಹರ್ಷಿತ ಬಾನು, ರೇಣುಕಮ್ಮ, ಜಯಶ್ರೀ, ಮುಖಂಡರಾದ ಮೋಹನ್, ನಾರಾಯಣಪ್ಪ, ಮುತ್ತಪ್ಪಇತರರುಇದ್ದರು.

# ಕ್ರೀಡಾಕೂಟದಲ್ಲಿ ವೆಂಕಟಯ್ಯನಛತ್ರ ಕಾಲೇಜಿನ ವಿದ್ಯಾರ್ಥಿಗಳ ಉತ್ತಮ ಸಾಧನೆ

**ಚಾಮರಾಜನಗರ:** ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಆಗಸ್ಟ್ 3, 4 ಮತ್ತು 5 ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ ಚಾಮರಾಜನಗರ ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ವೆಂಕಟಯ್ಯನಛತ್ರ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿ ಹೆಚ್ಚಿನ ಸಂಖ್ಯೆಯ ಪ್ರಶಸ್ತಿಗಳನ್ನು ಬಾಚಿಕೊಂಡಿದ್ದಾರೆ.

ಈ ಸಂಬಂಧ ವೆಂಕಟಯ್ಯನಛತ್ರ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಎಲ್ಲಾ ವಿಜಯಶಾಲಿ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಮಲ್ಲೇಶ ಅವರು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗಳಿಸಿರುವ ವಿದ್ಯಾರ್ಥಿಗಳು ವಿಶೇಷ ಸಾಧನೆ ಮಾಡಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷದ ಪ್ರಾರಂಭದಿಂದಲೂ ಸಮರ್ಪಕ ತಯಾರಿ ನಡೆಸಿದ್ದರ ಫಲವಾಗಿ ವಿದ್ಯಾರ್ಥಿಗಳಿಗೆ ಈ ಗೌರವ ಒಲಿದು ಬಂದಿದೆ ಎಂದರು.

ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ನೀಡಿದ ಭೂಗೋಳಶಾಸ್ತ್ರ ಉಪನ್ಯಾಸಕರಾದ ಮಹಾಂತೇಶ ಕುರುಬರ ಅವರ ಪ್ರೋತ್ಸಾಹ ಮತ್ತು ಶ್ರಮವನ್ನು ವಿಶೇಷವಾಗಿ ಪ್ರಶಂಸಿಸಿದ ಮಲ್ಲೇಶ್ ಅವರು ಮುಂದಿನ ದಿನಗಳಲ್ಲಿ ಜಿಲ್ಲಾ ಮಟ್ಟದ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚಿನ ಸಾಧನೆ ಮೂಡಿ ಬರಲಿ. ವಿದ್ಯಾರ್ಥಿಗಳಿಗೆ ಈ ಕ್ರೀಡಾ ಪ್ರೀತಿಯನ್ನು ಕಾಪಾಡಿಕೊಳ್ಳುವಂತೆ ಕರೆ ನೀಡಿದರು. ಉಪನ್ಯಾಸಕರಾದ ಮಲ್ಲೇಶ, ಪ್ರಶಾಂತ, ಮಹೇಶ್, ಪೂರ್ಣಿಮ, ಅನಿತ, ಗೋವಿಂದ, ಶೀಲಾವತಿ, ಮಹಾಂತೇಶ ಕುರುಬರ ಹಾಗೂ ಅತಿಥಿ ಉಪನ್ಯಾಸಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಾಲೇಜಿನ ವಿಜೇತ ವಿದ್ಯಾರ್ಥಿಗಳ ವಿವರ:- ಪುಟ್ಟಲಕ್ಷ್ಮೀ 100 ಮೀ ಪ್ರಥಮ, 200 ಮೀ ಪ್ರಥಮ, ತ್ರಿಪಲ್ ಜಂಪ್ ಪ್ರಥಮ ಸ್ಥಾನ, ಬಾಲಕಿಯರ ವಿಭಾಗದ ವೈಯಕ್ತಿಕ ಚಾಂಪಿಯನ್, ಪ್ರಶಸ್ತಿಯನ್ನು ಕೂಡ ಗಳಿಸಿ ಕ್ರೀಡಾಕೂಟದ ವೇಗದ ಓಟ ಗಾರ್ತಿಯಾಗಿ ಹೊರಹೊಮ್ಮಿದ್ದಾಳೆ.

ನಾಗರತ್ನ ಉದ್ದಜಿಗಿತ ಪ್ರಥಮ, ಯೋಗೇಶ್. ಎನ್ 3000 ಮೀ ಪ್ರಥಮ, ಗುಡ್ಡಗಾಡು ಓಟ ದ್ವಿತೀಯ, ರಾಜೇಶ್ವರಿ ವೇಗ ನಡಿಗೆ 3ನೇ ಸ್ಥಾನ, ಕಿರಣ್ ವಿ 800 ಮೀ ಪ್ರಥಮ, ಗೌರಮ್ಮ 800 ಮೀ ದ್ವಿತೀಯ, 400 ಮೀ ತೃತೀಯ, ಗುಡ್ಡಗಾಡು ಓಟ 6ನೇ ಸ್ಥಾನ, ರಾಧಿಕ 3000 ಮೀ ದ್ವಿತೀಯ, ಗಂಗಮ್ಮ 400 ಮೀ ತೃತೀಯ, ಗುಡ್ಡಗಾಡು ಓಟ 4ನೇ ಸ್ಥಾನ, ನದಿಯ 1500 ಮೀ ದ್ವಿತೀಯ, 3000 ಮೀ ತೃತಿಯ, ಗುಡ್ಡಗಾಡು ಓಟ 5ನೇ ಸ್ಥಾನ, ತೇಜಸ್ ಜಿ ವೇಗ ನಡಿಗೆ ದ್ವಿತೀಯ, ಯೋಗೇಶ್ 1500 ಮೀ ತೃತೀಯ, ಬಾಲಕಿಯರ ವಿಭಾಗದಲ್ಲಿ 400 ಮೀ ರಿಲೆ ಪ್ರಥಮ, ಬಾಲಕಿಯರ 100 ಮೀ ರಿಲೇ ತೃತೀಯ, ಬಾಲಕಿಯರ ಖೋ-ಖೋ ಪ್ರಥಮ ಸ್ಥಾನ, ಬಾಲಕರ ಖೋ-ಖೋ ದ್ವಿತೀಯ ಸ್ಥಾನ ಪಡೆದಿದ್ದು ಒಟ್ಟಾರೆ 16 ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸಂಜೆ ಟಿಪ್ಸ್

## ರಿಲಯನ್ಸ್ ಜುವೆಲ್ಸ್‌ನಿಂದ ಆಭಾರ್ ಸಂಗ್ರಹ ಬಿಡುಗಡೆ

ಭಾರತದ ಅತ್ಯಂತ ವಿಶ್ವಾಸಾರ್ಹ ಆಭರಣ ಬ್ರ್ಯಾಂಡ್‌ಗಳಲ್ಲಿ ಒಂದಾದ ರಿಲಯನ್ಸ್ ಜ್ಯುವೆಲ್ಸ್, ಆಭರಣಗಳ ಹೊಸ ಸಂಗ್ರಹ 'ಆಭಾರ್ ಬಿಡುಗಡೆ ಮಾಡಿದೆ. ಕಂಪನಿಯ 17 ನೇ ವರ್ಷದ ಸಂಭ್ರಮಕ್ಕಾಗಿ ಸಾಟಿಯಿಲ್ಲದ ಕರಕುಶಲತೆ ಮತ್ತು ದೋಷರಹಿತ ಸೇವೆಯೊಂದಿಗೆ ಗ್ರಾಹಕರನ್ನು ಸಂತೋಷಪಡಿಸಲು ಈ ಸಂಗ್ರಹ ಪರಿಚಯಿಸಲಾಗಿದೆ. ಈ ವರ್ಷದ ಆಭಾರ್‌ನ ಸಂಗ್ರಹವು ವಿಶೇಷ ಶ್ರೇಣಿಯ ಕಿವಿಯೋಲೆಗಳನ್ನು ಒಳಗೊಂಡಿದೆ. 'ನಿಮ್ಮ ಅಭಿರುಚಿಯನ್ನು ವ್ಯಕ್ತಪಡಿಸುವ ಕಿವಿಯೋಲೆಗಳು' ಎಂಬ ಅಭಿಯಾನ ಸಂದೇಶದ ಅಡಿಯಲ್ಲಿ ಅನಾವರಣಗೊಂಡ ಈ ವ್ಯಾಪಕ ಮತ್ತು ಬಹುಮುಖ ಆಭಾರ್ ಸಂಗ್ರಹವು ನಿಜವಾಗಿಯೂ ಎಲ್ಲರಿಗೂ ಏನನ್ನಾದರೂ ಹೊಂದಿದೆ. ಇದು ಪ್ರತಿ ವಯಸ್ಸಿನ-ಗುಂಪು, ಶೈಲಿ, ಮನಸ್ಥಿತಿ ಮತ್ತು ಸಂದರ್ಭಕ್ಕೆ ತಕ್ಕಂತೆ ವಿನ್ಯಾಸಗೊಳಿಸಲಾದ ಕಿವಿಯೋಲೆಗಳ ಸಂಗ್ರಹವನ್ನು ಪ್ರಸ್ತುತಪಡಿಸುತ್ತದೆ. ಫ್ಯಾಷನ್ ಪ್ರಿಯರ ವಿಶಿಷ್ಟ ಅಭಿರುಚಿ ಮತ್ತು ಆದ್ಯತೆಯನ್ನು ಪೂರೈಸುತ್ತದೆ. ಚಿನ್ನ, ವಜ್ರ ಮತ್ತು ಬೆಳ್ಳಿಯಲ್ಲಿ ರಚಿಸಲಾದ ಸಮಕಾಲೀನ ವಿನ್ಯಾಸಗಳ ವ್ಯಾಪಕ ಶ್ರೇಣಿಯಯನ್ನು ಒಳಗೊಂಡಿದೆ. ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ವೃತ್ತಿಪರರಿಗೆ ಸೂಕ್ತವಾದ ಕ್ಯಾಶುವಲ್ ಸ್ಟಡ್‌ಗಳು ಮತ್ತು ಹೂಪ್ ಗಳಿಂದ ಹಿಡಿದು ಸ್ತ್ರೀ ಶೈಲಿಯನ್ನು ಹೊರಸೂಸುವ ಸೊಗಸಾದ ಡ್ಯಾಂಗ್ಲರ್ಗಳು ಮತ್ತು ಹಬ್ಬದ ನೋಟವನ್ನು ನೀಡುವ ಸಾಂಪ್ರದಾಯಿಕ ಜುಮ್ಕಿಗಳು ಮತ್ತು ಜೆ-ಬಾಲಿ ವಿನ್ಯಾಸಗಳವರೆಗೆ, ಈ ಸಂಗ್ರಹವು ಪ್ರತಿ ಮಹಿಳೆಗೂ ಆಯಾ ಸಂದರ್ಭಕ್ಕೆ ಅನುಗುಣವಾಗಿ ವಿಶಿಷ್ಟ ಶೈಲಿಯನ್ನು ವ್ಯಕ್ತಪಡಿಸಲು ಅನುವುಮಾಡಿಕೊಡುತ್ತದೆ. ರಿಲಯನ್ಸ್ ಜ್ಯುವೆಲ್ಸ್ನ ಸಿಇಒ ಸುನಿಲ್ ನಾಯಕ್ ಮಾತನಾಡಿ, ನಾವು ರಿಲಯನ್ಸ್ ಜ್ಯುವೆಲ್ಸ್‌ನ 17ನೇ ವರ್ಷದ ಸಂಭ್ರಮವನ್ನು ಆಚರಿಸುತ್ತಿದ್ದು, ನಮ್ಮ ಗ್ರಾಹಕರ ಅಚಲ ಬೆಂಬಲ ಮತ್ತು ಪ್ರೀತಿಯಿಂದ ಪ್ರಭಾವಿತರಾಗಿದ್ದೇವೆ. ಆಭಾರ್ ಸಂಗ್ರಹದ ಪ್ರತಿಯೊಂದು ತುಣುಕನ್ನು ನಾವು ಗ್ರಾಹಕರೊಂದಿಗೆ ಹಂಚಿಕೊಳ್ಳುವ ಕೃತಜ್ಞತೆ ಮತ್ತು ಬಂಧದ ಶಕ್ತಿಯನ್ನು ಸಂಕೇತಿಸಲು ರಚಿಸಲಾಗಿದೆ. ಗ್ರಾಹಕರ ನಿರಂತರ ಬೆಂಬಲವು ಅವರ ಅಭಿರುಚಿಗಳನ್ನು ಪೂರೈಸಲು ನಮ್ಮನ್ನು ಉತ್ತೇಜಿಸುತ್ತದೆ ಎಂದರು.ಆಭಾರ್ ಸಂಗ್ರಹವು ಭಾರತದ 200 ಕ್ಕೂ ಹೆಚ್ಚು ನಗರಗಳಲ್ಲಿ 400 ಕ್ಕೂ ಹೆಚ್ಚು ಮಳಿಗೆಗಳಲ್ಲಿ ಲಭ್ಯವಿದೆ.

Reliance Jewels
BE THE MOMENT

## ಡ್ರೈ ಫ್ರೂಟ್ಸ್ ರೈಸ್ ಬಾತ್

ಪಾಕ ಶಾಲೆ



### ಬೇಕಿರುವ ಸಾಮಗ್ರಿ

2 ಕಪ್ ಅಕ್ಕಿ, 10 ಬಾದಾಮಿ, 10 ಗೋಡಂಬಿ, 10 ಒಣದ್ರಾಕ್ಷಿ , 2 ಚಮಚ ತುಪ್ಪ, ದಾಲ್ಚಿನ್ನಿ ಎಲೆ, ಕಾಳುಮೆಣಸು, ಚಕ್ಕೆ, ರುಚಿಗೆ ತಕ್ಕಷ್ಟು ಉಪ್ಪು.

### ಮಾಡುವ ವಿಧಾನ

ಬಾಣಲೆಗೆ ತುಪ್ಪ ಹಾಕಿ ತುಪ್ಪ ಕರಗುತಿದ್ದಂತೆ ದಾಲ್ಚಿನ್ನಿ, ಕಾಳು ಮೆಣಸು, ಬಾದಾಮಿ, ಗೋಡಂಬಿ, ದ್ರಾಕ್ಷಿ ಹಾಕಿ ಕೆಂಬಣ್ಣ ಬರುವವರೆಗೂ ಹುರಿಯಿರಿ. ಬಳಿಕ ಇದಕ್ಕೆ ಅಕ್ಕಿ ಸೇರಿಸಿ ಹುರಿಯಿರಿ. ನಂತರ ಇದಕ್ಕೆ ಉಪ್ಪು, ನೀರು ಸೇರಿಸಿ ಉರಿಯನ್ನು ಚಿಕ್ಕದಾಗಿಸಿ ಬಾಣಲೆಗೆ ಮುಚ್ಚಿ, ಹಬೆಯಲ್ಲಿ ಅನ್ನ ಉದುರು ಉದುರಾಗುವವರೆಗೂ ಬೇಯಿಸಿ. ಸಿದ್ದವಾದ ಇದನ್ನು ಸೌತೆಕಾಯಿ ರಾಯತದೊಂದಿಗೆ ಸವಿಯಬಹುದು.



## ಜೂನಿಯರ್ ಎನ್ ಟಿಆರ್ ಶಾಕಿಂಗ್ ಸೀಕ್ರೆಟ್ ರಿವೀಲ್

ರೇಣುದೇಸಾಯಿ ಅವರು ಕಾಸ್ಟ್ಯೂಮ್ ಡಿಸೈನರ್, ಮಾಡೆಲ್ ಮತ್ತು ನಟಿಯಾಗಿ ಉದ್ಯಮದಲ್ಲಿ ಉತ್ತಮ ಖ್ಯಾತಿಯನ್ನು ಗಳಿಸಿದ್ದಾರೆ. ಬದ್ರಿ, ಜಾನಿ ಮುಂತಾದ ತೆಲುಗು ಚಿತ್ರಗಳಲ್ಲಿ ನಟಿಸಿರುವುದು ಗೊತ್ತೇ ಇದೆ. ಆದರೆ, ಆ ಬಳಿಕ ಪವನ್ ತಾರಾಳನ್ನು ಮದುವೆಯಾಗಿ ವಿಚ್ಛೇದನದ ಬಳಿಕ ಮಕ್ಕಳೊಂದಿಗೆ ಬೇರೆಯಾಗಿದ್ದರು. ಇದಲ್ಲದೇ ಇತ್ತೀಚೆಗೆ ನಾವು ರೇಣುದೇಸಾಯಿ ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯವಾಗಿರುವುದನ್ನು ನೋಡುತ್ತೇವೆ.

ಮಕ್ಕಳಾದ ಅಕಿರಾ ಮತ್ತು ಆದ್ಯಾ ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ತಮ್ಮ ಅಭಿಮಾನಿಗಳೊಂದಿಗೆ ಫೋಟೋಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇತ್ತೀಚೆಗೆ ರೇಣುದೇಸಾಯಿ ಕುರಿತ ಸುದ್ದಿಯೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ನಟಿ ಟಾಲಿವುಡ್ ಹೀರೋ ಜೂನಿಯರ್ ಎನ್ ಟಿಆರ್ ಗೆ ವಿಡಿಯೋ ಕಾಲ್ ಮಾಡಿದ್ದಾರಂತೆ.. ಎನ್ಟಿಆರ್ ಅಭಿನಯದ ದೇವರ ಚಿತ್ರದ ರೊಮ್ಯಾಂಟಿಕ್ ಹಾಡು ಇತ್ತೀಚೆಗೆ ಬಿಡುಗಡೆಯಾಗಿದ್ದು ಆ ಹಾಡಿನ ಬಗ್ಗೆ ಮಾತನಾಡಿದ್ದು, ದೇವರಾ ಸಿನಿಮಾದ ಹಾಡುಗಳು ಮತ್ತು ಪೋಸ್ಟರ್ಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಮತ್ತು ಇದು ರೇಣು ದೇಸಾಯಿ ಅವರಿಗೆ ತುಂಬಾ ಸಂತೋಷವಾಗಿದೆ ಎಂದು ನಟಿ ಎನ್ಟಿಆರ್ ಜೊತೆಗಿನ ವೀಡಿಯೊ ಕಾಲ್ನಲ್ಲಿ ಹೇಳಿದ್ದಾರೆ. ಅಷ್ಟೇ ಅಲ್ಲ ಎನ್ಟಿಆರ್ ಮೊದಲ ಬಾರಿಗೆ ಅಂತಹ ರೊಮ್ಯಾಂಟಿಕ್ ಲುಕ್ನಲ್ಲಿ ಕಾಣಿಸಿಕೊಂಡಿದ್ದಾರೆ ಎಂದಿದ್ದಾರೆ...

ಈ ಹಿಂದೆಯೂ ಹಲವು ಸಂದರ್ಭಗಳಲ್ಲಿ ರೇಣುದೇಸಾಯಿ ಎನ್ಟಿಆರ್ ಬಗ್ಗೆ ಕಾಮೆಂಟ್ ಮಾಡಿದ್ದು ಗೊತ್ತೇ ಇದೆ. ಎನ್ಟೀರ್ ಆಗಾಗ ಅಕಿರಾ ಮತ್ತು ಆದ್ಯಾ ಅವರನ್ನು ಭೇಟಿಯಾಗಲು ಬರುತ್ತಿದ್ದರು.. ಸಿನಿಮಾಗಳಲ್ಲಿ ನಟಿಸುವಂತೆ ಹಲವು ಬಾರಿ ಪ್ರೇರೇಪಿಸಿದರು ಎಂದು ರೇಣು ದೇಸಾಯಿ ಹೇಳಿದ್ದಾರೆ. ಸದ್ಯ ರೇಣು ದೇಸಾಯಿ ಜೂನಿಯರ್ ಎನ್ ಟಿಆರ್ ಜೊತೆ ಆಡಿದ ಮಾತುಗಳು ವೈರಲ್ ಆಗುತ್ತಿವೆ.

## ಅತಿಯಾಗಿ ಬೆವರುವಿಕೆ ಅನಾರೋಗ್ಯಕ್ಕೆ ಕಾರಣ



ಬೆವರುವುದು ನೈಸರ್ಗಿಕ ಪ್ರಕ್ರಿಯೆ. ದೇಹದ ತಾಪಮಾನವನ್ನು ನಿಯಂತ್ರಿಸಲು ಮತ್ತು ಧೂಳು ಮತ್ತು ಕೊಳೆಯನ್ನು ತೆಗೆದುಹಾಕಲು ಬೆವರು ಉಪಯುಕ್ತವಾಗಿದೆ. ಆದಾಗ್ಯೂ, ಅತಿಯಾದ ಬೆವರುವಿಕೆಯು ಸಮಸ್ಯೆಯಾಗಿದೆ ಎಂದು ವೈದ್ಯರು ಹೇಳುತ್ತಾರೆ. ಈ ಸ್ಥಿತಿಯನ್ನು ಹೈಪರ್ ಹೈಡ್ರೋಸಿಸ್ ಎಂದು ಕರೆಯಲಾಗುತ್ತದೆ. ಅತಿಯಾದ ಬೆವರುವಿಕೆಯು ಮನುಷ್ಯನು ಅನಾರೋಗ್ಯದಿಂದ ಬಳಲುತ್ತಿದ್ದಾನೆ ಎಂದು ಸೂಚಿಸುತ್ತದೆ. ವಿಟಮಿನ್ ಡಿ ಕೊರತೆಯು ಅತಿಯಾದ ಬೆವರುವಿಕೆಗೆ ಕಾರಣವಾಗಬಹುದು ಎಂದು ವೈದ್ಯರು ಹೇಳುತ್ತಾರೆ. ಆರೋಗ್ಯವನ್ನು ಕಾಪಾಡಿಕೊಳ್ಳಲು ವಿಟಮಿನ್ ಡಿ ನಿರ್ಣಾಯಕವಾಗಿದೆ. ವಿಟಮಿನ್ ಡಿ ಬಲವಾದ ಮೂಳೆಗಳು ಮತ್ತು ಹಲ್ಲುಗಳಿಗೆ ಅಗತ್ಯವಾದ ಕ್ಯಾಲ್ಸಿಯಂ ಮತ್ತು ರಂಜಕವನ್ನು ಒದಗಿಸುತ್ತದೆ. ಪ್ರತಿರಕ್ಷಣಾ ವ್ಯವಸ್ಥೆ ಮತ್ತು ಹೃದಯರಕ್ತನಾಳದ ಆರೋಗ್ಯವನ್ನು ರಕ್ಷಿಸುತ್ತದೆ.

**ವಿಟಮಿನ್ ಡಿ ಕೊರತೆಗೆ ಕಾರಣಗಳು:** ಕಡಿಮೆ ಸೂರ್ಯನ ಬೆಳಕು ಇರುವ ಪ್ರದೇಶಗಳಲ್ಲಿ ವಾಸಿಸುವುದು, ಬಟ್ಟೆಗಳು ಅಥವಾ ಸನ್ಸ್ಕ್ರೀನ್ನೊಂದಿಗೆ ದೇಹವನ್ನು ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದನ್ನು ತಡೆಯುತ್ತದೆ. ಮನೆಯೊಳಗೆ ಹೆಚ್ಚು ಸಮಯ ಕಳೆಯುವುದು ವಿಟಮಿನ್ ಡಿ ಕೊರತೆಗೆ ಕಾರಣವಾಗಬಹುದು. ವಿಟಮಿನ್ ಡಿ ಸಮೃದ್ಧವಾಗಿರುವ ಆಹಾರವನ್ನು ನೀವು ಸೇವಿಸದಿದ್ದರೆ ವಿಟಮಿನ್ ಡಿ ಕೊರತೆ ಉಂಟಾಗುತ್ತದೆ. ಬೊಜ್ಜು ಹೊಂದಿರುವ ಜನರು ದೇಹದ ಕೊಬ್ಬಿನ ಹೆಚ್ಚಿನ ಶೇಕಡಾವಾರು ಪ್ರಮಾಣವನ್ನು ಹೊಂದಿರುತ್ತಾರೆ. ಪರಿಣಾಮವಾಗಿ, ಅವರ ರಕ್ತಪ್ರವಾಹದಲ್ಲಿ ಕಡಿಮೆ ಮಟ್ಟದ ವಿಟಮಿನ್ ಡಿ ಇರುತ್ತದೆ.

ಬೆವರುವಿಕೆಯು ದೇಹದ ಉಷ್ಣತೆಯನ್ನು ನಿಯಂತ್ರಿಸುತ್ತದೆ. ಆದಾಗ್ಯೂ, ನಾವು ದೈಹಿಕವಾಗಿ ಸಕ್ರಿಯವಾಗಿಲ್ಲದಿದ್ದಾಗ ಅಥವಾ ಬೆಚ್ಚಗಿನ ವಾತಾವರಣದಲ್ಲಿದ್ದಾಗಲೂ, ನಮ್ಮ ದೇಹವು ಅತಿಯಾದ ಬೆವರುವಿಕೆಯನ್ನು ಉತ್ಪಾದಿಸುತ್ತದೆ. ಇದಕ್ಕೆ ವಿಟಮಿನ್ ಡಿ ಕೊರತೆ ಕಾರಣ ಎಂದು ವೈದ್ಯರು ಹೇಳುತ್ತಾರೆ. ವಿಟಮಿನ್ ಡಿ ಬೆವರು ಗ್ರಂಥಿಗಳಿಂದ ಬೆವರಿನ ಉತ್ಪಾದನೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ದೇಹದಲ್ಲಿ ವಿಟಮಿನ್ ಡಿ ಕೊರತೆಯಾದಾಗ, ಈ ಗ್ರಂಥಿಗಳು ಅತ್ಯಂತ ಸಕ್ರಿಯವಾಗುತ್ತವೆ. ಅವು ಅಗತ್ಯಕ್ಕಿಂತ ಹೆಚ್ಚು ಬೆವರನ್ನು ಉತ್ಪಾದಿಸುತ್ತವೆ. ಆ ಮೂಲಕ ಅತಿಯಾದ ಬೆವರುವಿಕೆಗೆ ಕಾರಣವಾಗುತ್ತದೆ.

**ಆಯಾಸ:** ದೇಹದಲ್ಲಿ ಶಕ್ತಿಯನ್ನು ಉತ್ಪಾದಿಸುವಲ್ಲಿ ವಿಟಮಿನ್ ಡಿ ಪ್ರಮುಖ ಪಾತ್ರ ವಹಿಸುತ್ತದೆ. ಸಾಕಷ್ಟು ವಿಟಮಿನ್ ಡಿ ಇಲ್ಲದಿದ್ದರೆ, ನಿಮಗೆ ಸಾಕಷ್ಟು ನಿದ್ರೆ ಸಿಗದಿದ್ದರೂ ಸಹ ನೀವು ಆಯಾಸಗೊಳ್ಳುತ್ತೀರಿ. ಸ್ನಾಯುಗಳ ಬೆಳವಣಿಗೆ ಮತ್ತು ಕಾರ್ಯನಿರ್ವಹಣೆಗೆ ವಿಟಮಿನ್ ಡಿ ಅತ್ಯಗತ್ಯ. ವಿಟಮಿನ್ ಡಿ ಕೊರತೆಯು ಸ್ನಾಯು ದೌರ್ಬಲ್ಯಕ್ಕೆ ಕಾರಣವಾಗಬಹುದು. ಇದು ದೈನಂದಿನ ಕಾರ್ಯಗಳನ್ನು ಕಷ್ಟಕರವಾಗಿಸುತ್ತದೆ.

**ಮನಸ್ಥಿತಿ ಬದಲಾವಣೆಗಳು:** ವಿಟಮಿನ್ ಡಿ ಯನ್ನು ಸನ್ಶೈನ್ ವಿಟಮಿನ್ ಎಂದೂ ಕರೆಯಲಾಗುತ್ತದೆ. ಏಕೆಂದರೆ ಇದು ಸಿರೊಟೋನಿನ್ ಉತ್ಪಾದನೆಗೆ ಸಹಾಯ ಮಾಡುತ್ತದೆ. ಸೆರೊಟೋನಿನ್ ನಮ್ಮ ಮನಸ್ಥಿತಿಯನ್ನು ನಿಯಂತ್ರಿಸುವ ಹಾರ್ಮೋನ್ ಆಗಿದೆ. ವಿಟಮಿನ್ ಡಿ ಕೊರತೆಯು ಮಾನಸಿಕ ಪ್ರಕ್ಷುಬ್ಧತೆ ಮತ್ತು ಖಿನ್ನತೆಗೆ ಕಾರಣವಾಗಬಹುದು.

ಹೆಲ್ತ್ ಟಿಪ್ಸ್

**ಮೂಳೆ ನೋವು:** ವಿಟಮಿನ್ ಡಿ ಕ್ಯಾಲ್ಸಿಯಂ ಮತ್ತು ರಂಜಕವನ್ನು ಒದಗಿಸಲು ಸಹಾಯ ಮಾಡುತ್ತದೆ, ಇದು ಆರೋಗ್ಯಕರ ಮೂಳೆಗಳಿಗೆ ನಿರ್ಣಾಯಕವಾಗಿದೆ. ವಿಟಮಿನ್ ಡಿ ಕೊರತೆಯು ಮೂಳೆಗಳನ್ನು ದುರ್ಬಲಗೊಳಿಸುತ್ತದೆ ಮತ್ತು ಆಸ್ಟಿಯೊಪೊರೋಸಿಸ್ ಅಪಾಯವಿದೆ. **ಕೂದಲು ಉದುರುವಿಕೆ:** ಕೂದಲಿನ ಬೆಳವಣಿಗೆಯಲ್ಲಿ ವಿಟಮಿನ್ ಡಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಕೊರತೆಯು ಕೂದಲು ಉದುರುವಿಕೆ ಅಥವಾ ತೆಳುವಾಗಲು ಕಾರಣವಾಗಬಹುದು.



## ರಾಜ್‌ಕುಮಾರ್ ರಾವ್‌ಗೆ ಮಾನುಷಿ ಚಿಲ್ಲರ್ ನಾಯಕಿ



ಬಾಲಿವುಡ್ ಬೆಡಗಿ ಮಾನುಷಿ ಚಿಲ್ಲರ್ ಸದಾ ಒಂದಲ್ಲಾ ಒಂದು ವಿಚಾರವಾಗಿ ಸುದ್ದಿಯಾಗುತ್ತಲೇ ಇರುತ್ತಾರೆ. ಸಕ್ಸಸ್ ಗಾಗಿ ಉತ್ತಮ ಅವಕಾಶಕ್ಕಾಗಿ ಎದುರು ನೋಡ್ತಿರೋ ಮಾನುಷಿಗೆ ಈಗ ಬಂಪರ್ ಆಫರ್‌ವೊಂದು ಸಿಕ್ಕಿದೆ. ಬಿಗ್ ಬಜೆಟ್ ಸಿನಿಮಾದಲ್ಲಿ ರಾಜ್‌ಕುಮಾರ್ ರಾವ್ ಜೊತೆ ನಟಿಸುವ ಚಾನ್ಸ್ ಸಿಕ್ಕಿದೆ.

ವಿಭಿನ್ನ ಪ್ರೇಮಕಥೆಯಲ್ಲಿ ರಾಜ್ ಕುಮಾರ್ ರಾವ್ ಮತ್ತು ಮಾನುಷಿ ಜೊತೆಯಾಗಿ ನಟಿಸಲಿದ್ದಾರೆ. ಈ ಜೋಡಿಗೆ 'ಭಕ್ಷಕ್' ಸಿನಿಮಾ ಡೈರೆಕ್ಟರ್ ಪುಲ್ಕಿತ್ ಆ?ಯಕ್ಷನ್ ಕಟ್ ಹೇಳ್ತಿದ್ದಾರೆ. ಇದೇ ಸೆಪ್ಟೆಂಬರ್‌ನಿಂದ ಶೂಟಿಂಗ್ ಶುರುವಾಗಲಿದೆ. ಚಿತ್ರವನ್ನು ಮುಂದಿನ ವರ್ಷ ರಿಲೀಸ್ ಮಾಡಲು ಚಿತ್ರತಂಡ ನಿರ್ಧರಿಸಿದೆ.

ಸ್ತ್ರೀ, ಶ್ರೀಕಾಂತ್ ಸಿನಿಮಾ ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿ ಸೈ ಎನಿಸಿಕೊಂಡಿರುವ ರಾಜ್‌ಕುಮಾರ್ ರಾವ್‌ಗೆ ಮೊದಲ ಬಾರಿಗೆ ಮಾನುಷಿ ಜೋಡಿಯಾಗ್ತಿರೋದ್ರಿಂದ ಈ ಸಿನಿಮಾದ ಬಗ್ಗೆ ಬೆಟ್ಟದಷ್ಟು ನಿರೀಕ್ಷೆ ಫ್ಯಾನ್ಸ್‌ಗೆ ಇದೆ. ಇಬ್ಬರ ಕಾಂಬಿನೇಷನ್ ಅದ್ಯಾವ ರೀತಿ ಮೂಡಿ ಬರಲಿದೆ ಎಂದು ಫ್ಯಾನ್ಸ್ ಎದುರು ನೋಡ್ತಿದ್ದಾರೆ.ಅಂದಹಾಗೆ, 'ಸಾಮ್ರಾಟ್ ಪೃಥ್ವಿರಾಜ್' ಸಿನಿಮಾದಲ್ಲಿ ಅಕ್ಷಯ್ ಕುಮಾರ್‌ಗೆ ನಾಯಕಿಯಾಗಿ ಮಾನುಷಿ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟರು. ಬಳಿಕ ಸಾಲು ಸಾಲು ಸಿನಿಮಾಗಳಲ್ಲಿ ನಟಿಸಿದ್ದರು. ಆದರೆ ಕೆರಿಯರ್‌ಗೆ ಬ್ರೇಕ್ ಕೊಡುವಂತಹ ಸಿನಿಮಾ ಇನ್ನೂ ಸಿಕ್ಕಿಲ್ಲ.



## ಮಳೆಗಾಲದ ಕಾಯಿಲೆ ನಿಭಾಯಿಸಲು ರಾಷ್ಟ್ರವ್ಯಾಪಿ ಲಸಿಕೆ ಪ್ರಚಾರ ಆರಂಭಿಸಿದ ಅಪೋಲೋ ಕ್ಲಿನಿಕ್

ಮಳೆಗಾಲ ಸಂಬಂಧಿತ ರೋಗಗಳು ಮತ್ತು ಕಾಯಿಲೆಗಳನ್ನು ನಿಭಾಯಿಸುವುದಕ್ಕೆ ಭಾರತೀಯರಿಗೆ ನೆರವಾಗುವ ಗುರಿಯೊಂದಿಗೆ, ಭಾರತದ ಮುಂಚೂಣಿ ಸ್ವೆಶಲ್ಟಿ ಕ್ಲಿನಿಕ್ ಸರಪಳಿಗಳ ಪೈಕಿ ಒಂದಾದ ಅಪೋಲೋ ಕ್ಲಿನಿಕ್ (ಂಠಿಠಟಟಠ ಅಟಟಿಥಿ) ರಾಷ್ಟ್ರವ್ಯಾಪಿ ಲಸಿಕೆ ಪ್ರಚಾರವನ್ನು ಪ್ರಾರಂಭಿಸಿದೆ. ಈ ಪ್ರಚಾರದ ಭಾಗವಾಗಿ, ಕ್ಲಿನಿಕ್ ಸರಪಳಿಯು, ಮಳೆಗಾಲ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು, 10 ಲಸಿಕೆಗಳ ಸೆಟ್ ಮತ್ತು 10 ಇನ್ನೂ ಇತರ ಪರೀಕ್ಷೆಗಳ ಸೆಟ್ ಒದಗಿಸಲಿದೆ. ಈ ಪ್ರಚಾರದ ಮೂಲಕ, ತನ್ನ ಎಲ್ಲಾ 102 ಕ್ಲಿನಿಕ್ಗಳಾದ್ಯಂತ ಹೆಚ್ಚು ರೋಗಿಗಳನ್ನು ತಲುಪುವುದು ಕ್ಲಿನಿಕ್ನ ಗುರಿಯಾಗಿದೆ.

ಈ ಪ್ರಚಾರದ ಬಗ್ಗೆ ಮಾತನಾಡುತ್ತಾ, ಅಪೋಲೋ ಕ್ಲಿನಿಕ್ನ ಬಾತ್ಮೀದಾರ ಹೀಗೆ ಹೇಳಿದರು, ''ಪ್ರತಿವರ್ಷ ಮಳೆಗಾಲದ ಋತುವಿನಲ್ಲಿ, ನಾವು ಹಲವಾರು ಕಾಯಿಲೆಗಳು ಹೆಚ್ಚಾಗುತ್ತಿರುವುದು ಮತ್ತು ಹರಡುತ್ತಿರುವ ಕುರಿತಾದ ಅನೇಕ ಸುದ್ದಿಗಳನ್ನು ನೋಡುತ್ತಿರುತ್ತೇವೆ. ಇದು, ಡೆಂಗ್ಯೂ, ಮಲೇರಿಯ, ಇನ್ಫ್ಲುಯೆಂಜಾ, ಋತುಮಾನಿಕ ಫ್ಲೂ ಮುಂತಾದವನ್ನು ಒಳಗೊಂಡಿದೆ. ಈ ಕಾಯಿಲೆಗಳ ಸಾಂಕ್ರಾಮಿಕತೆ ಅನೇಕ ವೈದ್ಯಕೀಯ ಸಂಸ್ಥೆಗಳಲ್ಲಿ ರೋಗಿಗಳ ಅಧಿಕ ಭೇಟಿಗಳಿಗೆ ಕಾರಣವಾಗಿ, ಸಾಮಾನ್ಯ ಜನರ ಜೀವನದ ಮೇಲೂ ಪ್ರಭಾವ ಬೀರುತ್ತದೆ. ಇದನ್ನು ಗಮನದಲ್ಲಿರಿಸಿಕೊಂಡು ನಾವು ಈ ವರ್ಷ ಈ ಕಾಯಿಲೆಯ ಹೊರೆಯನ್ನು ಕಡಿಮೆ ಮಾಡುವ ಸಲುವಾಗಿ ಈ ಪ್ರಚಾರವನ್ನು ಪ್ರಾರಂಭಿಸಲು ತೀರ್ಮಾನಿಸಿದೆವು. ಈ ಋತುವಿನಲ್ಲಿ ನಮ್ಮ ರೋಗಿಗಳು ಇನ್ನಷ್ಟು ಸಂತೋಷಕರವಾದ ಹಾಗೂ ಆರೋಗ್ಯಕರವಾದ ಜೀವನ ನಡೆಸುವುದಕ್ಕೆ ನಾವು ನೆರವಾಗುತ್ತೇವೆ ಎಂಬ ವಿಶ್ವಾಸ ನಮಗಿದೆ.''




ಭಾರತದಲ್ಲಿ, ಪ್ರತಿ ಮಳೆಗಾಲದ ಋತು, ಡೆಂಗ್ಯೂ, ಮಲೇರಿಯಾ, ಟೈಫಾಯ್ಡ್, ಋತುಮಾನಿಕ ಫ್ಲೂ ಮುಂತಾದ ಕಾಯಿಲೆಗಳ ಹೆಚ್ಚಳಿಕೆಯನ್ನು ಕಾಣುತ್ತಾ ಬಂದಿದೆ. ವಿಶ್ವ ಆರೋಗ್ಯ ಸಂಸ್ಥೆಯ ಒಂದು ವರದಿಯ ಪ್ರಕಾರ, ಡೆಂಗ್ಯೂ ಏರ್ಪಡುವ ಜಗತ್ತಿನ 30 ಅತ್ಯಂತ ಸಾಂಕ್ರಾಮಿಕ ದೇಶಗಳ ಪೈಕಿ ಸ್ಥಾನ ಪಡೆದುಕೊಂಡಿದೆ. ರಾಷ್ಟ್ರೀಯ ರೋಗನಿಯಂತ್ರಣ ಕೇಂದ್ರದ ಪ್ರಕಾರ, ಟೈಫಾಯ್ಡ್, ಡೆಂಗ್ಯೂ, ಸ್ಕಬ್ ಟೈಫಸ್, ಮತ್ತು ಇನ್ಫ್ಲುಯೆನ್ಜಾ ಕಳೆದ 2 ವರ್ಷಗಳಲ್ಲಿ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿ ಹೊರಹೊಮ್ಮಿದೆ. ಭಾರತದಲ್ಲಿ ವಾರ್ಷಿಕವಾಗಿ, ಸರಿಸುಮಾರು 4,5 ದಶಲಕ್ಷ ಮಂದಿ ಟೈಫಾಯ್ಡ್ನಿಂದ ಬಾಧಿತರಾಗುತ್ತಾರೆ ಎಂದು ತಿಳಿಸಿರುವ ವರದಿಯು, ಇದು ಸುಮಾರು 9,000 ಮರಣಗಳಿಗೆ ಕಾರಣವಾಗುತ್ತಿದೆ ಎಂದು ಸೂಚಿಸಿದೆ.

ಇದನ್ನು ಪರಿಹರಿಸುವ ಅಗತ್ಯವನ್ನು ಗುರುತಿಸಿ ಕ್ಲಿನಿಕ್ ಸರಪಳಿಯು, ಈ ತಿಂಗಳು ಆರೋಗ್ಯ ಪ್ರಚಾರವನ್ನು ಪ್ರಾರಂಭಿಸಿದೆ. ಈ ಕ್ಲಿನಿಕ್ಗಳು, ವೈರಲ್ ಜ್ವರ, ಇನ್ಫ್ಲುಯೆನ್ಜಾ, ಋತುಮಾನಿಕ ಫ್ಲೂ, ಹೊಟ್ಟೆಯ ಸೋಂಕುಗಳು, ಲೆಪ್ಟೋಸ್ಪೈರೋಸಿಸ್ ರಾಶಸ್(ದದ್ದು) ಮತ್ತು ಇತರ ಕಾಯಿಲೆಗಳಿಗೆ ಸಮಾಲೋಚನೆ, ಪ್ರಯೋಗಾಲಯ ಪರಿಶೋಧಗಳು ಹಾಗೂ ರೇಡಿಯಾಲಜಿ ಪರೀಕ್ಷೆಗಳನ್ನು ಒದಗಿಸುತ್ತದೆ. ಲಸಿಕೆಯಿಂದ ತಡೆಗಟ್ಟಬಹುದಾದ ರೋಗಗಳಿಗೆ ರೋಗನಿರೋಧಕ ಲಸಿಕೆ ಒದಗಿಸುವುದರ ಜೊತೆಗೆ ಈ ಕ್ಲಿನಿಕ್ಗಳು, ಡೆಂಗ್ಯೂ, ಮಲೇರಿಯಾ, ಟೈಫಾಯ್ಡ್, ಚಿಕುನ್ಗುನ್ಯ ಮುಂತಾದ ಋತುಮಾನಿಕ ಕಾಯಿಲೆಗಳಿಗೆ ವಿಶೇಷವಾದ ಸಮಗ್ರ ಜ್ವರ ಪರೀಕ್ಷೆ ಪ್ಯಾಕೇಜ್ಗಳನ್ನು ಕೂಡ ಒದಗಿಸುತ್ತದೆ.ಈ ಜ್ವರದ ಪ್ಯಾನೆಲ್, ಸಂಪೂರ್ಣ ರಕ್ತ ಪ್ರಮಾಣ(ಕಂಪ್ಲೀಟ್ ಬ್ಲಡ್ ಕೌಂಟ್), ಮಲೇರಿಯಾದ ಆಂಟಿಜೆನ್, ವೈಡಲ್ ಪರೀಕ್ಷೆ, ಸಂಪೂರ್ಣ ಮೂತ್ರ ಪರೀಕ್ಷೆ, ಡೆಂಗ್ಯೂ IgM & IgG, ಡೆಂಗ್ಯೂ NS1DAಆಂಟಿಜೆನ್, ಟೈಫಿಡಾಟ್-IgM ಮತ್ತು ಇತರ ಪರಿಶೋಧನೆಗಳನ್ನು ಒಳಗೊಂಡಿರುತ್ತದೆ. ಈ ಆರೋಗ್ಯ ಪ್ಯಾಕೇಜ್, ಆಗಸ್ಟ್ 31, 2024ರವರೆಗೆ, ಎಲ್ಲಾ ಕ್ಲಿನಿಕ್ಗಳಲ್ಲೂ ಲಭ್ಯವಿರುತ್ತದೆ. ಕ್ಲಿನಿಕ್ನ ವೆಬ್ಸೈಟ್ನಲ್ಲಿ ಆನ್ಲೈನ್ನಲ್ಲಿ, ಕರೆ ಮಾಡುವ ಮೂಲಕ ಅಥವಾ ಹತ್ತಿರ ಕ್ಲಿನಿಕ್ಗೆ ಭೇಟಿ ನೀಡುವ ಮೂಲಕ ಇದಕ್ಕೆ ಸಮಯನಿಗದಿ(ಅಪಾಯಿಂಟ್ಮೆಂಟ್)ಗಳನ್ನು ಬುಕ್ ಮಾಡಬಹುದು.

## ಮುಖದ ಮೇಲಿನ ಕಲೆ ನಿವಾರಿಸಲು ಮದ್ದು

ಬ್ಯೂಟಿ ಟಿಪ್ಸ್



ಸುಕ್ಕು, ಕಲೆ ಇಲ್ಲದ ಶುದ್ಧವಾದ ತ್ವಚೆ ನಮ್ಮದಾಗಬೇಕು ಅನ್ನೋ ಆಸೆ ಸಹಜ. ಚರ್ಮದ ಮೇಳೆ ಕಲೆಗಳಿಲ್ಲದೇ ಶುಭ್ರವಾಗಿದ್ದರೆ ಮುಖವೂ ಹೊಳೆಯುತ್ತಿರುತ್ತದೆ. ಮುಖದ ಮೇಲೆ ಕಲೆಗಳಿವೆ ಅಂದಾಕ್ಷಣ ಅದನ್ನು ಮೇಕಪ್ನಿಂದ ಮುಚ್ಚಿಹಾಕಲು ಎಲ್ಲರೂ ಪ್ರಯತ್ನಿಸ್ತಾರೆ. ಹಾಗೆ ಮಾಡುವ ಬದಲು ಕಲೆಗಳನ್ನು ಶಾಶ್ವತವಾಗಿ ಹೋಗಲಾಡಿಸುವ ಕ್ರಮಗಳನ್ನು ಅನುಸರಿಸಬೇಕು.

**ಈರುಳ್ಳಿ ರಸ:** ಈರುಳ್ಳಿ ರಸವು ಮುಖದ ಕಲೆಗಳನ್ನು ಹೋಗಲಾಡಿಸಲು ಪ್ರಯೋಜನಕಾರಿಯಾಗಿದೆ. ಈರುಳ್ಳಿಯನ್ನು ತುರಿದು ಅದರ ರಸವನ್ನು ಹಿಂಡಿ ತೆಗೆಯಿರಿ. ಹತ್ತಿಯ ಸಹಾಯದಿಂದ ಅದನ್ನು ಕಲೆಗಳ ಮೇಲೆ ಹಚ್ಚಿಕೊಳ್ಳಿ. 20 ನಿಮಿಷ ಹಾಗೇ ಬಿಡಿ. ನಂತರ ಶುದ್ಧವಾದ ನೀರಿನಿಂದ ತೊಳೆದುಕೊಳ್ಳಿ.

**ನೆಲ್ಲಿಕಾಯಿ:** ನೆಲ್ಲಿಕಾಯಿಯಲ್ಲಿ ವಿಟಮಿನ್ ಸಿ ಕಂಡುಬರುತ್ತದೆ. ವಿಟಮಿನ್ ಸಿ ಚರ್ಮಕ್ಕೆ ತುಂಬಾ ಪ್ರಯೋಜನಕಾರಿ. ಒಂದು ನೆಲ್ಲಿಕಾಯಿಯನ್ನು ತುರಿದು ಅದಕ್ಕೆ ಆಲಿವ್ ಎಣ್ಣೆಯನ್ನು ಮಿಶ್ರಣ ಮಾಡಿ. ನಂತರ ಈ ಮಿಶ್ರಣವನ್ನು ಕಲೆಗಳ ಮೇಲೆ ಹಚ್ಚಿಕೊಳ್ಳಿ. ಲಘುವಾಗಿ ಕೈಗಳಿಂದ ಮಸಾಜ್ ಮಾಡಿ. ಹೀಗೆ ಮಾಡುವುದರಿಂದ ಮುಖದ ಮೇಲಿನ ಕಲೆಗಳು ಕಡಿಮೆಯಾಗುತ್ತವೆ.

**ಮೊಸರು:** ಮೊಸರು ಸೇವನೆಯಿಂದ ಸಾಕಷ್ಟು ಪ್ರಯೋಜನಗಳಿವೆ. ಅದೇ ರೀತಿ ಮೊಸರನ್ನು ಚರ್ಮದ ಮೇಲೆ ಹಚ್ಚಿಕೊಳ್ಳುವುದರಿಂದ್ಲೂ ಸಾಕಷ್ಟು ಅನುಕೂಲವಿದೆ. ಮೊಸರಿನಲ್ಲಿ ಆಂಟಿ ಒಕ್ಸಿಡೆಂಟ್ ಮತ್ತು ಉರಿಯೂತ ನಿವಾರಕ ಗುಣಗಳು ಕಂಡುಬರುತ್ತವೆ. ಮೊಸರಿಗೆ 2 ಚಿಟಿಕೆ ಅರಿಶಿನವನ್ನು ಮಿಶ್ರಣ ಮಾಡಿ. ನಂತರ ಈ ಪೇಸ್ಟ್ ಅನ್ನು ಮುಖದ ಮೇಲಿನ ಕಲೆಗಳಿಗೆ ಹಚ್ಚಿಕೊಂಡು ನಿಧಾನವಾಗಿ ಮಸಾಜ್ ಮಾಡಿ. ನಂತರ ಸ್ವಚ್ಛವಾಗಿ ತೊಳೆದುಕೊಳ್ಳಿ. ಹೀಗೆ ಮಾಡುವುದರಿಂದ ಕಲೆಗಳು ನಿವಾರಣೆಯಾಗುವುದರ ಜೊತೆಗೆ ಚರ್ಮಕ್ಕೆ ಹೊಳಪು ಬರುತ್ತದೆ.



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

## ರಾಶಿ ಭವಿಷ್ಯ

**ಮೇಷ:** ಅಧಿಕ ಧನ ಸಂಪಾದನೆ, ರಿಯಲ್ ಎಸ್ಟೇಟ್‌ನವರಿಗೆ ಅನುಕೂಲ, ಮನೋವ್ಯಾಧಿ, ಅತಿಯಾದ ಕೋಪ ಸಂಕಟ

**ವೃಷಭ:** ಧನ ನಷ್ಟ, ಅಪಮಾನಗಳಿಗೆ ಗುರಿಯಾಗುವಿರಿ, ಸಾಲದ ಸುಳಿಗೆ ಸಿಲುಕುವಿರಿ

**ಮಿಥುನ:** ಸಾಲದ ಚಿಂತೆ, ಸಹೋದ್ಯೋಗಿಗಳಿಂದ ಸಾಲ, ಅನಾರೋಗ್ಯ ಸಮಸ್ಯೆ,

**ಕಟಕ:** ಮಕ್ಕಳಿಂದ ನಷ್ಟ, ಸೇವಕರಿಂದ ಕಿರಿಕಿರಿ, ನಿದ್ರಾಭಂಗ, ಉದ್ಯೋಗನಿಮಿತ್ತ ಪ್ರಯಾಣ

**ಸಿಂಹ:** ಧನಾಗಮನ ಮತ್ತು ಲಾಭ, ಕೆಲಸ ಕಾರ್ಯಗಳಲ್ಲಿ ಜಯ, ಆರ್ಥಿಕ ನಷ್ಟ ಮತ್ತು ಮೋಸ

**ಕನ್ಯಾ:** ಆರೋಗ್ಯ ಸಮಸ್ಯೆ, ಉದ್ಯೋಗ ಒತ್ತಡಗಳಿಂದ ನಿದ್ರಾಭಂಗ, ಸ್ನೇಹಿತರಿಂದ ತೊಂದರೆ, ದಾಂಪತ್ಯದಲ್ಲಿ ಬಿರುಕು

**ತುಲಾ:** ಸಂಗಾತಿಯಿಂದ ಧನಾಗಮನ, ತಂದೆಯೊಡನೆ ಕಿರಿಕಿರಿ, ಅನಿರೀಕ್ಷಿತ ನಷ್ಟ

**ವೃಶ್ಚಿಕ:** ಪ್ರಯಾಣದಿಂದ ಅನುಕೂಲ, ಆಕಸ್ಮಿಕ ಅಧಿಕ ಧನಾಗಮನ, ಆರೋಗ್ಯದಲ್ಲಿ ವ್ಯತ್ಯಾಸ

**ಧನಸ್ಸು:** ಬಡ್ಡಿ ವ್ಯವಹಾರಸ್ಥರಿಗೆ ಅನುಕೂಲ, ಉದ್ಯೋಗ ಸ್ಥಳದಲ್ಲಿ ಅಧಿಕ ಒತ್ತಡ, ಅನಿರೀಕ್ಷಿತ ತಪ್ಪು

**ಮಕರ:** ಪಿತ್ರಾರ್ಜಿತ ಆಸ್ತಿ ಮೇಲೆ ಸಾಲ, ಮಿತ್ರರಿಂದ ಆರ್ಥಿಕ ಸಹಾಯ, ಆರೋಗ್ಯದಲ್ಲಿ ವ್ಯತ್ಯಾಸ, ದಾಂಪತ್ಯದಲ್ಲಿ ಕಲಹ

**ಕುಂಭ:** ಆರೋಗ್ಯದಲ್ಲಿ ಏರುಪೇರು, ಗಂಡು ಮಕ್ಕಳಿಂದ ಧನಾಗಮನ, ಶತ್ರುಗಳಿಂದ ತೊಂದರೆ, ಆಯುಷ್ಯಕ್ಕೆ ಕುತ್ತು

**ಮೀನ:** ಸ್ಥಿರಾಸ್ಥಿಯಿಂದ ಧನಾಗಮನ, ಆರ್ಥಿಕ ಸಂಕಷ್ಟಗಳು ಬಗೆಹರಿಯುವುದು, ಸೇವಾವೃತ್ತಿ ಉದ್ಯೋಗಗಳು ದೊರಕುವುದು, ಆರೋಗ್ಯ ಸಮಸ್ಯೆ

## ವಿಶ್ವ ಸಿಂಹ ದಿನ

ಆಗಸ್ಟ್ 10 ರಂದು ವಿಶ್ವ ಸಿಂಹ ದಿನವು ಸಿಂಹಗಳು ಎದುರಿಸುತ್ತಿರುವ ದುಃಸ್ಥಿತಿಯ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ. ವೈಜ್ಞಾನಿಕವಾಗಿ 'ಪ್ಯಾಂಥೆರೋ ಲಿಯೋ' ಎಂದು ಕರೆಯಲ್ಪಡುವ ಸಿಂಹಗಳು ಅಲ್ಲಿನ ಅತ್ಯಂತ ಪ್ರಸಿದ್ಧ ಮತ್ತು ಜನಪ್ರಿಯ ಪ್ರಾಣಿ ಜಾತಿಗಳಲ್ಲಿ ಒಂದಾಗಿದೆ. ಅವರ ದೊಡ್ಡ ದೇಹಗಳು ಮತ್ತು ಭಾರವಾದ, ಹೊಳೆಯುವ ಮೇನ್ಗಳಿಂದ ರಚಿಸಲಾದ ಅವರ ಬಂಧನ ಮತ್ತು ಭಯಂಕರ ವ್ಯಕ್ತಿತ್ವದಿಂದಾಗಿ ಅವರನ್ನು 'ಕಾಡಿನ ರಾಜರು' ಎಂದು ಕರೆಯಲಾಗುತ್ತದೆ. ಸಿಂಹದ ಶಕ್ತಿಯುತ ಘರ್ಜನೆ ಯಾವುದಕ್ಕೂ ಎರಡನೆಯದಲ್ಲ, ಮತ್ತು ಅದು ಐದು ಮೈಲುಗಳಷ್ಟು ದೂರದಲ್ಲಿಯೂ ಕೇಳಬಹುದು. ದಿ ಲಯನ್ ಕಿಂಗ್ ನಿಂದ ಸಿಂಬಾದಂತಹ ಪಾಪ್ ಸಂಸ್ಕೃತಿಯ ಐಕಾನ್ಗಳ ಕಾರಣದಿಂದಾಗಿ, ಸಿಂಹಗಳು ಮಕ್ಕಳಿಂದಲೂ ಪ್ರೀತಿಸಲ್ಪಡುತ್ತವೆ. ಆದಾಗ್ಯೂ, ಸಿಂಹಗಳು 100 ವರ್ಷಗಳ ಹಿಂದೆ ದೊಡ್ಡ ಜನಸಂಖ್ಯೆಯಲ್ಲಿ ಅಸ್ತಿತ್ವದಲ್ಲಿದ್ದವು, ಇಂದು, ಬೇಟೆಯಾಡುವುದು ಮತ್ತು ಬೇಟೆಯಾಡುವ ಪರಿಣಾಮವಾಗಿ ಅವುಗಳ ಸಂಖ್ಯೆಯು ಪ್ರಪಂಚದಾದ್ಯಂತ 50,000 ಕ್ಕಿಂತ ಕಡಿಮೆಯಾಗಿದೆ. ಆದ್ದರಿಂದ, ವಿಶ್ವ ಸಿಂಹ ದಿನವು ಈ ಅಳಿವಿನಂಚಿನಲ್ಲಿರುವ ಪ್ರಭೇದಗಳಿಗೆ ನಿಧಿಯನ್ನು ಸಂಗ್ರಹಿಸುವ ಮೂಲಕ ಮತ್ತು ರಕ್ಷಣಾತ್ಮಕ ಕ್ರಮಗಳನ್ನು ಹೆಚ್ಚಿಸುವ ಮೂಲಕ ಗಮನವನ್ನು ತರುತ್ತದೆ.

ಮೊದಲ ವಿಶ್ವ ಸಿಂಹ ದಿನವು 2013 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರ ನೇತೃತ್ವವನ್ನು ಡೆರೆಕ್ ಮತ್ತು ಬೆವರ್ಲಿ ಜೌಬರ್ಟ್ ದಂಪತಿಗಳು, ಸಂರಕ್ಷಣೆ ಮತ್ತು ಕಾಡು ಬೆಕ್ಕುಗಳ ಬಗ್ಗೆ ಆಸಕ್ತಿ ಹೊಂದಿದ್ದಾರೆ. ವಿಶ್ವಾದ್ಯಂತ ಸಿಂಹಗಳ ಜನಸಂಖ್ಯೆಯು ತೀವ್ರವಾಗಿ ಕಡಿಮೆಯಾಗಿದೆ ಎಂದು ಅರಿತುಕೊಂಡ ನಂತರ, ಜೌಬರ್ಟ್ಸ್ ಬ್ರ್ಯಾಂಡ್ನ ಸಹಾಯಕ್ಕಾಗಿ ನ್ಯಾಷನಲ್ ಜಿಯಾಗ್ರಫಿಕ್ ಅನ್ನು ಸಂಪರ್ಕಿಸಿದರು. ಅವರೊಂದಿಗೆ ಪಾಲುದಾರಿಕೆಯನ್ನು ರೂಪಿಸುವ ಮೂಲಕ, ದಂಪತಿಗಳು 2009 ರಲ್ಲಿ ಬಿಗ್ ಕ್ಯಾಟ್ ಇನಿಶಿಯೇಟಿವ್ ಯೊಂದಿಗೆ ಬಂದರು. ಅರಣ್ಯನಾಶ, ಹವಾಮಾನ ಬದಲಾವಣೆ ಮತ್ತು ಮಾನವ ಹಸ್ತಕ್ಷೇಪದಂತಹ ಅಂಶಗಳು ಸಿಂಹಗಳ ಜನಸಂಖ್ಯೆಯ ಮೇಲೆ ಪರಿಣಾಮ ಬೀರಿರಬಹುದು, ಆದರೆ ಅಧ್ಯಯನಗಳು ತೋರಿಸಿವೆ ಅವುಗಳ ಅತ್ಯಂತ ಕಡಿಮೆ ಸಂಖ್ಯೆಗಳು ಹಿಮಯುಗಗಳು ಮತ್ತು ನೈಸರ್ಗಿಕ ಪರಿಸರ ವಿಪತ್ತುಗಳೊಂದಿಗೆ ಕೆಲವು ದೇಶಗಳಲ್ಲಿ ಏಕಾಂತವಾಗಲು ಕಾರಣವಾಗಿವೆ. ವಿಶ್ವ, ಅವುಗಳೆಂದರೆ ಭಾರತ ಮತ್ತು ದಕ್ಷಿಣ ಆಫ್ರಿಕಾ. ಇಲ್ಲಿಯವರೆಗೆ, ಬಿ.ಸಿ.ಐ. 150+ ಅನುದಾನ ಪ್ರಶಸ್ತಿಗಳನ್ನು ಪಡೆಯುವುದರಿಂದ ಹಿಡಿದು 3,000 ಕಾಡು ಬೆಕ್ಕುಗಳಿಗೆ ಸುಮಾರು 3,000 ಬೆದರಿಕೆಗಳನ್ನು ಕಡಿಮೆ ಮಾಡುವವರೆಗೆ 13,000 ಜೀವಕ್ಕೆ ಅಪಾಯಕಾರಿ ಬಲೆಗಳನ್ನು ತೆಗೆದುಹಾಕುವವರೆಗೆ ಗಣನೀಯವಾದ ಚಿಮ್ಮಿದೆ.

ಸಿಂಹವು 'ಫೆಲಿಡೆ' ಬೆಕ್ಕುಗಳ ಕುಟುಂಬದಿಂದ ಬಂದಿದೆ ಮತ್ತು ಇದನ್ನು ಪರಭಕ್ಷಕ ಎಂದು ಪರಿಗಣಿಸಲಾಗಿದೆ. ಇದು ಸುಮಾರು 300 ರಿಂದ 600 ಪೌಂಡ್ ತೂಕದ ಎರಡನೇ ಅತಿದೊಡ್ಡ ಬೆಕ್ಕು, ಮೊದಲನೆಯದು ಅದರ ಸೋದರಸಂಬಂಧಿ, ಹುಲಿ. ಸರಾಸರಿ ಸಿಂಹದ ದೇಹವು ಸಣ್ಣ ಸುತ್ತಿನ ತಲೆ ಮತ್ತು ಕಿವಿಗಳು ಮತ್ತು ಟಫ್ಟ್ ಬಾಲದೊಂದಿಗೆ ಸ್ನಾಯುಗಳನ್ನು ಹೊಂದಿರುತ್ತದೆ. ಅದರ ಲಿಂಗವನ್ನು ಅದರ ಭಾರವಾದ ಮತ್ತು ಸುವಾಸನೆಯ ಮೇನ್ ಮೂಲಕ ಗುರುತಿಸಬಹುದು, ಅದು ಸಿಂಹಿಣಿಗಳ ಮೇಲೆ ಇರುವುದಿಲ್ಲ.

# ಭಾರತೀಯ ಜಮೀನ್ ಪಾರ್ಟಿ; ಸದನದಲ್ಲಿ ವಕ್ಫ್ ಮಸೂದೆ ಮಂಡನೆಗೆ ಬಿಜೆಪಿ ವಿರುದ್ಧ ಅಖಿಲೇಶ್ ಯಾದವ್ ವಾಗ್ದಾಳಿ

**ನವದೆಹಲಿ:** ನ್ಯಾಶನಲ್ ಡೆಮಾಕ್ರಟಿಕ್ ಅಲಯನ್ಸ್ (ಎನ್‌ಡಿಎ) ನೇತೃತ್ವದ ಕೇಂದ್ರ ಸರ್ಕಾರವು ಇಂದು (ಆಗಸ್ಟ್ 8) ಲೋಕಸಭೆಯಲ್ಲಿ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆಯನ್ನು ಮಂಡಿಸಿದ ಬೆನ್ನಲ್ಲೇ, ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಬಿಜೆಪಿ 'ರಿಯಲ್ ಎಸ್ಟೇಟ್' ಕಂಪನಿಯಂತೆ ಕೆಲಸ ಮಾಡುತ್ತಿದೆ. ಹೀಗಾಗಿ, ಅದರ ಹೆಸರನ್ನು ಭಾರತೀಯ ಜನತಾ ಪಾರ್ಟಿಯ ಬದಲು 'ಭಾರತೀಯ ಜಮೀನ್ ಪಾರ್ಟಿ' ಎಂದು ಬದಲಾಯಿಸಬೇಕು ಎಂದು ಟೀಕಿಸಿದ್ದಾರೆ.

ಇದಕ್ಕೂ ಮುನ್ನ ಕೇಂದ್ರ ಸಂಸದೀಯ ವ್ಯವಹಾರಗಳ ಕಿರಣ್ ರಿಜಿಜು ಅವರು ಇಂಡಿಯಾ ಬಣದ ವಿರೋಧ ಪಕ್ಷದ ಸಂಸದರ ಘೋಷಣೆಗಳ ನಡುವೆ ಲೋಕಸಭೆಯಲ್ಲಿ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಈ ಬಗ್ಗೆ ಎಕ್ಸ್ ಪೇಜಿನಲ್ಲಿ ಅಖಿಲೇಶ್ ಯಾದವ್ ಪೋಸ್ಟ್ ಮಾಡಿದ್ದು, 'ವಕ್ಫ್ ಬೋರ್ಡ್'ನ ಈ ಎಲ್ಲಾ ತಿದ್ದುಪಡಿಗಳು ರಕ್ಷಣೆ, ರೈಲ್ವೆ ಮತ್ತು ನಜುಲ್ ಭೂಮಿಯಂತಹ ಜಮೀನನ್ನು ಮಾರಾಟ ಮಾಡುವ ಗುರಿ ಹೊಂದಿದೆ ಎಂದಿರುವ ಅಖಿಲೇಶ್ ಯಾದವ್ ವಕ್ಫ್ ಮಂಡಳಿಗಳಿಗೆ ಸೇರಿದ ಜಮೀನುಗಳನ್ನು ಮಾರಾಟ ಮಾಡುವುದಿಲ್ಲ ಎಂದು ಲಿಖಿತ ಭರವಸೆಯನ್ನು ಕೇಳಿದರು.



''ವಕ್ಫ್ ಬೋರ್ಡ್‌ನ ಜಮೀನುಗಳನ್ನು ಮಾರಾಟ ಮಾಡುವುದಿಲ್ಲ ಎಂದು ಲಿಖಿತ ಭರವಸೆ ನೀಡಬೇಕು. ಬಿಜೆಪಿ ರಿಯಲ್ ಎಸ್ಟೇಟ್ ಕಂಪನಿಯಂತೆ ಕೆಲಸ ಮಾಡುತ್ತಿದೆ. ಅದಕ್ಕೆ 'ಜನತಾ' ಬದಲಿಗೆ 'ಜಮೀನ್' ಎಂದು ಸೇರಿಸುವ ಮೂಲಕ ಅದರ ಹೆಸರನ್ನು ಭಾರತೀಯ ಜಮೀನ್ ಪಾರ್ಟಿ ಎಂದು ಬದಲಾಯಿಸಬೇಕು'' ಎಂದು ಅವರು ಹೇಳಿದರು.

ವಕ್ಫ್ ಕಾಯಿದೆ ತಿದ್ದುಪಡಿ ಮಸೂದೆಯು ದೇಶಾದ್ಯಂತ ವಕ್ಫ್ ಬೋರ್ಡ್‌ಗಳ ಅಧಿಕಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಮತ್ತು ವಕ್ಫ್ ಆಸ್ತಿಗಳ ನೋಂದಣಿ ಮತ್ತು ಸಮೀಕ್ಷೆ ಮತ್ತು ಅತಿಕ್ರಮಣಗಳನ್ನು ತೆಗೆದುಹಾಕಲು ಪ್ರಯತ್ನಿಸುತ್ತದೆ. ವಕ್ಫ್ ಕಾಯಿದೆ ತಿದ್ದುಪಡಿ ಮಸೂದೆಯ ಮೂಲಕ ಕೇಂದ್ರ ಸರ್ಕಾರವು ವಕ್ಫ್ ಮಂಡಳಿಗಳ ಅಧಿಕಾರವನ್ನು ನಿಗ್ರಹಿಸುವ ಗುರಿಯನ್ನು ಹೊಂದಿದೆ ಮತ್ತು ಇದು ಹೆಚ್ಚಿದ ಸರ್ಕಾರಿ ನಿಯಂತ್ರಣವನ್ನು ಸಹ ಒದಗಿಸುತ್ತದೆ.

ಮುಸ್ಲಿಂ ಸಮುದಾಯದ ಭೂಮಿ, ಆಸ್ತಿ ಮತ್ತು ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಇಂಡಿಯಾ ಬ್ಲಾಕ್‌ನ ವಿರೋಧ ಪಕ್ಷದ ಸಂಸದರು ಪ್ರತಿಪಾದಿಸಿದ್ದಾರೆ.

# ಮತ್ತೆ ಕ್ಯಾತೆ ತೆಗೆದ ಜಯಾ ಅಮಿತಾಭ್ ಬಚ್ಚನ್

**ನವದೆಹಲಿ:** ನಟಿ–ರಾಜಕಾರಣಿ ಜಯಾ ಬಚ್ಚನ್ ಮತ್ತು ರಾಜ್ಯಸಭಾ ಸ್ಪೀಕರ್ ಜಗದೀಪ್ ಧನಕರ್ ನಡುವೆ ಶುಕ್ರವಾರ ಮತ್ತೊಮ್ಮೆ ಮಾತಿನ ಚಕಮಕಿ ನಡೆದಿದೆ.ಸ್ಪೀಕರ್ ಧನಕರ್ ಅವರು ರಾಜ್ಯಸಭೆಯಲ್ಲಿ ಜಯಾ ಅವರನ್ನು ಚರ್ಚೆಯಲ್ಲಿ ಮಾತನಾಡಲು ಆಹ್ವಾನಿಸಿದಾಗ ''ಜಯಾ ಅಮಿತಾಭ್ ಬಚ್ಚನ್'' ಎಂದು ಉಲ್ಲೇಖಿಸಿದ್ದಾರೆ. ಮತ್ತೆ ತಮ್ಮ ಹೆಸರಿನಲ್ಲಿ ''ಅಮಿತಾಭ್'' ಎಂದು ಉಲ್ಲೇಖಿಸಿದ್ದಕ್ಕೆ ಸಿಟ್ಟಿಗೆದ್ದ ಜಯಾ, ಸ್ಪೀಕರ್ ತಮ್ಮೊಂದಿಗೆ ಸ್ವೀಕಾರಾರ್ಹವಲ್ಲದ ಧ್ವನಿಯಲ್ಲಿ ಮಾತನಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಸಮಾಜವಾದಿ ಪಕ್ಷದ ಸಂಸದೆ ಜಯಾ ಶುಕ್ರವಾರ ಮೇಲ್ಮನೆಯಲ್ಲಿ ಮಾತನಾಡುತ್ತಾ, ನಾನೊಬ್ಬ ಕಲಾವಿದೆ. ನಾನು ದೇಹ ಭಾಷೆ ಮತ್ತು ಅಭಿವ್ಯಕ್ತಿಗಳನ್ನು ಅರ್ಥಮಾಡಿಕೊಳ್ಳುತ್ತೇನೆ.



ಆದರೆ ನೀವು ನನಗೆ ಬಳಸಿದ ಟೋನ್ ಸರಿಯಾಗಿಲ್ಲ. ನಾವು ನಿಮ್ಮ ಸಹೋದ್ಯೋಗಿಗಳು. ಆದರೆ ನಿಮ್ಮ ಧ್ವನಿ ಸ್ವೀಕಾರಾರ್ಹವಲ್ಲ ಎಂದು ಬಚ್ಚನ್ ಹೇಳಿದರು.ಇದಕ್ಕೆ ಸಿಡಿಮಿಡಿಗೊಂಡ ಧನಕರ್, ಜಯಾ ಜೀ, ನೀವು ದೊಡ್ಡ ಖ್ಯಾತಿಯನ್ನು ಗಳಿಸಿದ್ದೀರಿ.ಒಬ್ಬ ನಟ ಡೈರೆಕ್ಟರ್‌ನ ನಿರ್ದೇಶನಕ್ಕೆ ಒಳಪಟ್ಟಿರುತ್ತಾರೆ ಎಂಬುದು ನಿಮಗೆ ತಿಳಿದಿದೆ. ಆದರೆ ಪ್ರತಿದಿನ ನಾನು ಈ ವಿಚಾರವನ್ನು ಪುನರಾವರ್ತಿಸಲು ಬಯಸುವುದಿಲ್ಲ. ಪ್ರತಿದಿನ ನಾನು ನಿಮಗೆ ಕ್ಲಾಸ್ ಮಾಡಲು ಬಯಸುವುದಿಲ್ಲ. ನೀವು ನನ್ನ ಟೋನ್ ಬಗ್ಗೆ ಮಾತನಾಡುತ್ತಿದ್ದೀರಿ.ನೀವು ಯಾರೇ ಆಗಿರಲಿ, ನೀವು ಸೆಲೆಬ್ರಿಟಿಯಾಗಿದ್ದರೂ ನಾವು ಇಲ್ಲಿ ಹೇಳುವುದನ್ನು ಸ್ವೀಕರಿಸಬೇಕು ಎಂದು ಜಯಾ ವಿರುದ್ಧ ವಾಗ್ದಾಳಿ ನಡೆಸಿದರು.ಈ ಹಿಂದೆಯೂ ರಾಜ್ಯಸಭೆಯಲ್ಲಿ ಜಯಾ ಹಾಗೂ ಸ್ಪೀಕರ್ ನಡುವೆ ವಾಗ್ವಾದ ಏರ್ಪಟ್ಟಿತ್ತು.

## ಜೈಲಿನಿಂದ ಹೊರಬಂದ ಮನೀಶ್ ಸಿಸೋಡಿಯಾ

**ದೆಹಲಿ:** ಅಬಕಾರಿ ನೀತಿ ಹಗರಣದಲ್ಲಿ ಬಂಧನಗೊಂಡಿದ್ದ ದೆಹಲಿಯ ಮಾಜಿ ಉಪಮುಖ್ಯಮಂತ್ರಿ, ಎಎಪಿ ನಾಯಕ ಮನೀಶ್ ಸಿಸೋಡಿಯಾ 17 ತಿಂಗಳುಗಳ ನಂತರ ಜೈಲಿನಿಂದ ಹೊರಬಂದಿದ್ದಾರೆ.ಮನೀಶ್ ಸಿಸೋಡಿಯಾ ಜೈಲಿನಿಂದ ಹೊರಬರುತ್ತಿದ್ದಂತೆ ದೆಹಲಿ ಸಚಿವೆ ಅತಿಶಿ, ಸೇರಿದಂತೆ ಹಲವಾರು ಎಎಪಿ ನಾಯಕರು, ಕಾರ್ಯಕರ್ತರು ಮನೀಶ್ ಸಿಸೋಡಿಯಾ ಅವರನ್ನು ಬರಮಾಡಿಕೊಂಡರು. ಕಳೆದ 17 ತಿಂಗಳುಗಳಿಂದ ನಾನು (ಒಂಟಿಯಾಗಿ) ಜೈಲಿನಲ್ಲಿ ಇರಲಿಲ್ಲ. ಆದರೆ ದೆಹಲಿಯ ಪ್ರತಿಯೊಬ್ಬರು, ದೆಹಲಿಯ ಶಾಲಾ ಮಕ್ಕಳು ಭಾವನಾತ್ಮಕವಾಗಿ ನನ್ನೊಂದಿಗಿದ್ದರು ಎಂದು ಮನೀಶ್ ಸಿಸೋಡಿಯಾ ಹೇಳಿದ್ದಾರೆ.



## ಮದುವೆ ವಯಸ್ಸು ಇಳಿಕೆ

**ಬಾಗ್ದಾದ್:** ಇರಾಕ್ ಸರಕಾರವು ಹೆಣ್ಣು ಮತ್ತು ಗಂಡು ಮಕ್ಕಳ ಮದುವೆ ವಯಸ್ಸು ಇಳಿಕೆ ಮಾಡುವ ಕಾನೂನು ಜಾರಿ ಮಾಡಲು ಹೊರಟಿದ್ದು, ಸಾಕಷ್ಟು ವಿವಾದಕ್ಕೆ ಕಾರಣವಾಗಿದೆ. ಉದ್ದೇಶಿತ ಕಾಯ್ದೆಯ ಅನು ಸಾರ ಹೆಣ್ಣು ಮಕ್ಕಳ ಮದುವೆ ವಯಸ್ಸನ್ನು 9ಕ್ಕೆ ಮತ್ತು ಗಂಡು ಮಕ್ಕಳ ವಯಸ್ಸನ್ನು 15ಕ್ಕೆ ಇಳಿಕೆ ಮಾಡಲಾಗುತ್ತಿದೆ. ಇದೇ ವೇಳೆ, ವಾರಸುದಾರಿಕೆ, ಮಕ್ಕಳ ಪಾಲನೆ ಮತ್ತು ವಿಚ್ಛೇದನ ಸೇರಿ ಕೌಟುಂಬಿಕ ವ್ಯಾಜ್ಯಗಳನ್ನು ಬಗೆಹರಿಸಲು ನಾಗರಿಕರು ಧಾರ್ಮಿಕ ಗುರುಗಳು ಅಥವಾ ನಾಗರಿಕ ನ್ಯಾಯಾಂಗ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಲಿದೆ. ಈ ಕರಡು ಮಸೂದೆಗೆ ವ್ಯಾಪಕ ವಿರೋಧ ವ್ಯಕ್ತವಾಗಿದೆ.



# ಬಾಂಗ್ಲಾದ ಹಿಂದೂಗಳ ರಕ್ಷಣೆಗೆ ಮೋದಿ ಸರ್ಕಾರ ಮಹತ್ವದ ನಿರ್ಧಾರ

**ನವದೆಹಲಿ:** ಬಾಂಗ್ಲಾದೇಶದಲ್ಲಿ ಮೀಸಲಾತಿ ವಿರೋಧಿಸಿ ಉಂಟಾದ ತೀವ್ರ ಹಿಂಸಾಚಾರದಿಂದ ಅಲ್ಲಿನ ಹಿಂದೂಗಳು ಸೇರಿದಂತೆ ಜನಾಂಗೀಯ ಹಲ್ಲೆ ನಡೆಯುತ್ತಿವೆ.

ಈ ಹಿನ್ನೆಲೆಯಲ್ಲಿ ಬಾಂಗ್ಲಾದಲ್ಲಿ ನೆಲೆಸಿರುವ ಹಿಂದೂಗಳ ರಕ್ಷಣೆಗೆ ಮುಂದಾಗಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬಾಂಗ್ಲಾದೇಶ ಗಡಿಯ ಪರಿಸ್ಥಿತಿ ಮೇಲ್ವಿಚಾರಣೆಗೆ ಉನ್ನತ ಮಟ್ಟದ ಸಮಿತಿ ರಚಿಸಿದೆ ಎಂದು ಕೇಂದ್ರ ಗೃಹಮಂತ್ರಿ ಅಮಿತ್ ಶಾ ತಿಳಿಸಿದ್ದಾರೆ.ಭಾರತದ ಭದ್ರತಾ ಸಲಹೆಗಾರ ಅಜಿತ್ ದೋವಲ್ ಈ ಸಮಿತಿಯನ್ನು ನಿಭಾಯಿಸಲಿದ್ದಾರೆ.

ಕೇಂದ್ರ ರಚಿಸಿರುವ ಈ ಉನ್ನಟ ಮಟ್ಟದ ಸಮಿತಿಯು ಅಲ್ಲಿ ನೆಲೆಸಿರುವ ಭಾರತೀಯ ಪ್ರಜೆಗಳು, ಹಿಂದೂಗಳು, ಇತರ ಅಲ್ಪಸಂಖ್ಯಾತ ಸಮುದಾಯಗಳ ಸುರಕ್ಷತೆ ವಿಚಾರಿಸುವ ಜೊತೆಗೆ



ಭದ್ರತೆಯನ್ನೂ ಖಾತರಿಪಡಿಸಿಕೊಳ್ಳಲಿದೆ. ಇದಕ್ಕಾಗಿ ಬಾಂಗ್ಲಾದೇಶದ ತಮ್ಮ ಸಹವರ್ತಿ ಅಧಿಕಾರಿಗಳೊಂದಿಗೆ ಸಂಪರ್ಕ ಕೊಂಡಿಯಾಗಿ ಈ ಕಮಿಟಿಯು ತುರ್ತಾಗಿ ಕಾರ್ಯ ನಿರ್ವಹಿಸಲಿದೆ.

ಶೇಖ್ ಹಸೀನಾ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಬಾಂಗ್ಲಾದೇಶ ತೊರೆದಿದ್ದರು. ಅಲ್ಲಿಂದ ಮತ್ತಷ್ಟು ನಾಗರಿಕ ದಂಗೆಯು ಅಲ್ಲಿ ತೀವ್ರ ಸ್ವರೂಪ ಪಡೆದುಕೊಂಡಿದ್ದು ಗೊತ್ತೇ ಇದೆ.

## ಬಾಂಗ್ಲಾಕ್ಕೆ ಎರಡನೇ ಸ್ವಾತಂತ್ರ್ಯ ಸಿಕ್ಕಿತು: ಮುಹಮ್ಮದ್ ಯೂನಸ್



**ಢಾಕಾ:** ಬಾಂಗ್ಲಾದೇಶಕ್ಕೆ ಎರಡನೇ ಸ್ವಾತಂತ್ರ್ಯ ಸಿಕ್ಕಿದೆ. ಇಂದು ನಮಗೆ ಮಹತ್ವದ ದಿನವಾಗಿದೆ' ಎಂದು ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಮುಹಮ್ಮದ್ ಯೂನಸ್ ಗುರುವಾರ ಹೇಳಿದ್ದಾರೆ. ಮಧ್ಯಂತರ ಸರಕಾರದ ಮುಖ್ಯಸ್ಥರಾಗಿ ಪ್ರಮಾಣ ವಚನ ಸ್ವೀಕರಿಸಲು ಪ್ಯಾರಿಸ್ನಿಂದ ಢಾಕಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಅವರು 'ಮನೆಗೆ ಮರಳಿರುವುದರಿಂದ ಮನಸ್ಸಿಗೆ ನೆಮ್ಮದಿಯಾಗಿದೆ' ಎಂದು ಹೇಳಿದರು.

ಒಂದು ತಿಂಗಳಿಗೂ ಹೆಚ್ಚು ಸಮಯ ನಡೆದ ವಿದ್ಯಾರ್ಥಿಗಳ ಪ್ರತಿಭಟನೆಗೆ ಮಣಿದು ಶೇಖ್ ಹಸೀನಾ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ ಭಾರತಕ್ಕೆ ಪಲಾಯನ ಮಾಡಿದ ಬಳಿಕ, ಚುನಾವಣೆ ನಡೆಯುವವರೆಗೆ ಮಧ್ಯಂತರ ಸರಕಾರವನ್ನು ಮುನ್ನಡೆಸಲು 84 ವರ್ಷದ ಯೂನಸ್ರನ್ನು ಅಧ್ಯಕ್ಷ ಮುಹಮ್ಮದ್ ಶಹಾಬುದ್ದೀನ್ ನೇಮಕಗೊಳಿಸಿದ್ದರು. ಹಿಂಸಾತ್ಮಕ ಪ್ರತಿಭಟನೆ, ಘರ್ಷಣೆಯಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಮುಹಮ್ಮದ್ ಯೂನಸ್ 'ಇವರ ತ್ಯಾಗದಿಂದ ರಾಷ್ಟ್ರಕ್ಕೆ ಎರಡನೇ ಸ್ವಾತಂತ್ರ್ಯ ದಕ್ಕಿದೆ. ಬಾಂಗ್ಲಾದೇಶ ಹೊಸ ವಿಜಯದ ದಿನವನ್ನು ಸೃಷ್ಟಿಸಿದೆ . ಇದೀಗ ಶಾಂತಿ, ಕಾನೂನು ಸುವ್ಯವಸ್ಥೆ ಸ್ಥಾಪನೆಗೆ ನಾವು ಮೊದಲ ಆದ್ಯತೆ ನೀಡಬೇಕಿದೆ. ಕಾನೂನು ಸುವ್ಯವಸ್ಥೆ ಸ್ಥಾಪನೆಯಾಗದೆ ನಾವು ಒಂದು ಹೆಜ್ಜೆಯನ್ನೂ ಮುಂದಿರಿಸಲು ಆಗದು ಎಂದರು. 'ನಿಮಗೆ ನನ್ನ ಮೇಲೆ ವಿಶ್ವಾಸವಿರುವುದಾದರೆ, ದೇಶದ ಎಲ್ಲಿಯೂ, ಯಾರ ವಿರುದ್ಧವೂ ದಾಳಿ ನಡೆಯದಂತೆ ನೋಡಿಕೊಳ್ಳಿ. ಪ್ರತಿಯೊಬ್ಬ ವ್ಯಕ್ತಿಯೂ ನಮ್ಮ ಸಹೋದರರು. ಅವರನ್ನು ರಕ್ಷಿಸುವುದು ನಮ್ಮ ಕಾರ್ಯವಾಗಿದೆ. ಇಡೀ ಬಾಂಗ್ಲಾದೇಶವು ಒಂದು ದೊಡ್ಡ ಕುಟುಂಬವಾಗಿದೆ' ಎಂದರು.

## ಸರಕಾರದ ಮುಖ್ಯಸ್ಥರ ಬಳಿ 27 ಖಾತೆ

**ಢಾಕಾ:** ಬಾಂಗ್ಲಾದೇಶದ ಮಧ್ಯಾಂತರ ಸರಕಾರದ ಮುಖ್ಯಸ್ಥರಾಗಿ ನೊಬೆಲ್ ಪುರಸ್ಕೃತ ಮೊಹಮ್ಮದ್ ಯೂನುಸ್ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ, ಸಲಹಾ ಸಮಿತಿಯ 16 ಸದಸ್ಯರಿಗೆ ವಿವಿಧ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. 84 ವರ್ಷದ ಯೂನುಸ್, ರಕ್ಷಣೆ, ಸಾರ್ವಜನಿಕ ಆಡಳಿತ, ಶಿಕ್ಷಣ, ಇಂಧನ ಸೇರಿ 27 ಖಾತೆಗಳನ್ನು ತಮ್ಮ ಬಳಿ ಇಟ್ಟುಕೊಂಡಿದ್ದಾರೆ. ಮಾಜಿ ಸಚಿವ ಹುಸೇನ್ ಅವರಿಗೆ ವಿದೇಶಾಂಗ ಖಾತೆ ನೀಡಲಾಗಿದೆ. ಬಾಂಗ್ಲಾದೇಶ ಬ್ಯಾಂಕ್ನ ಮಾಜಿ ಗವರ್ನರ್ ಸಲಾಹುದ್ದೀನ್ ಅಹ್ಮದ್ಗೆ ವಿತ್ತ ಖಾತೆ, ಮಾಜಿ ಅಟಾರ್ನಿ ಜನರಲ್ ಎ.ಎಫ್.ಹಸನ್ ಆರೀಫ್ಗೆ ಸ್ಥಳೀಯ ಆಡಳಿತ ಜವಾಬ್ದಾರಿ ನೀಡಲಾಗಿದೆ. ಇನ್ನು ಸರಕಾರದ ಭಾಗವಾಗಿರುವ ವಿದ್ಯಾರ್ಥಿ ಚಳವಳಿಯ ಮುಖಂಡರಾದ ಎಂ.ನಹೀದ್ ಇಸ್ಲಾಂ, ಆಸಿಫ್ ಮಹಮ್ಮದ್ಗೆ ಕ್ರಮವಾಗಿ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ, ಹಾಗೂ ಕ್ರೀಡಾ ಇಲಾಖೆ ನೀಡಲಾಗಿದೆ.

## ಟ್ರಂಪ್ ಪ್ರಯಾಣಿಸುತ್ತಿದ್ದ ವಿಮಾನದಲ್ಲಿ ತಾಂತ್ರಿಕ ದೋಷ: ತುರ್ತು ಭೂಸ್ಪರ್ಶ



**ಅಮೆರಿಕ:** ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತೆರಳುತ್ತಿದ್ದ ವಿಮಾನದಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿದ್ದು, ಬಿಲ್ಲಿಂಗ್ಸ್ ನಗರದಲ್ಲಿ ವಿಮಾನವನ್ನು ಸುರಕ್ಷಿತವಾಗಿ ಲ್ಯಾಂಡಿಂಗ್ ಮಾಡಿಸಲಾಗಿದೆ.

ತಾಂತ್ರಿಕ ಸಮಸ್ಯೆಯಿಂದ ವಿಮಾನ ಮಾರ್ಗದ ಬದಲಾವಣೆ ಮಾಡಲಾಗಿದೆ. ಅಮೆರಿಕದ ಮೌಂಟಾನದ ಭೋಝ್ಮನ್ ಗೆ ಅಮೆರಿ ಅಧ್ಯಕ್ಷೀಯ ಅಭ್ಯರ್ಥಿ ಟ್ರಂಪ್ ತೆರಳುತ್ತಿದ್ದರು.

ತಾಂತ್ರಿಕ ಸಮಸ್ಯೆ ಕಾರಣ ಬಿಲ್ಲಿಂಗ್ಸ್ ನಗರದಲ್ಲಿ ವಿಮಾನವನ್ನು ಸುರಕ್ಷಿತವಾಗಿ ಲ್ಯಾಂಡಿಂಗ್ ಮಾಡಲಾಗಿದೆ.

ಟ್ರಂಪ್ ವಿಮಾನ ಲ್ಯಾಂಡಿಂಗ್ ಗೆ ಮುನ್ನ ಯಾಂತ್ರಿಕ ಸಮಸ್ಯೆ ಉಂಟಾಗಿತ್ತು. ಯಾವುದೇ ಭದ್ರತಾ ಸಮಸ್ಯೆಗೆ ಸಂಬಂಧಿಸಿಲ್ಲ ಎಂದು ರಹಸ್ಯ ಸೇವೆ ತಿಳಿಸಿದೆ.

ಯುಎಸ್ ಸೀಕ್ರೆಟ್ ಸರ್ವೀಸ್ ಪ್ರಕಾರ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಮಾನವು ಯಾಂತ್ರಿಕ ಸಮಸ್ಯೆಯಿಂದ ಬಳಲುತ್ತಿರುವ ನಂತರ ಶುಕ್ರವಾರ ರಾತ್ರಿ ಮೊಂಟಾನಾದ ಬಿಲ್ಲಿಂಗ್ಸ್ನಲ್ಲಿ ಇಳಿಯಿತು. ವಿಮಾನದ ಯಾಂತ್ರಿಕ ಸಮಸ್ಯೆಯು ಯಾವುದೇ ಭದ್ರತಾ ಸಮಸ್ಯೆಗೆ ಸಂಬಂಧಿಸಿಲ್ಲ. ಟ್ರಂಪ್ ಔತಣಕೂಟ ನಿಧಿಸಂಗ್ರಹಣೆ ಮತ್ತು ರ್ಯಾಲಿಯಲ್ಲಿ ಕಾಣಿಸಿಕೊಳ್ಳಲಿರುವ ಬಿಲ್ಲಿಂಗ್ಸ್ ಅಥವಾ ಬೋಜ್ಮನ್ನಲ್ಲಿ ಇಳಿಯುವುದು ಮೂಲ ಉದ್ದೇಶವಾಗಿದೆಯೇ ಎಂಬುದು ಅಸ್ಪಷ್ಟವಾಗಿದೆ.

## ಇರಾನ್ ನೌಕಾಪಡೆಗೆ ಅತ್ಯಾಧುನಿಕ ಕ್ಷಿಪಣಿಗಳ ನಿಯೋಜನೆ

**ಇರಾನ್:** ತನ್ನ ನೌಕಾಪಡೆಯು ಸ್ಫೋಟಕ ಸಿಡಿತಲೆಗಳೊಂದಿಗೆ ಸುಸಜ್ಜಿತವಾದ ನೂತನ ಕ್ರೂಸ್ ಕ್ಷಿಪಣಿಗಳನ್ನು ಹೊಂದಿರುವುದಾಗಿ ಇರಾನಿಯನ್ ರೆವಲ್ಯೂಶನರಿ ಗಾರ್ಡ್ಸ್ (ಐಆರ್‌ಜಿಸಿ) ಶುಕ್ರವಾರ ತಿಳಿಸಿದೆ.ಜುಲೈ 31ರಂದು ಟೆಹರಾನ್ನಲ್ಲಿ ಹಮಾಸ್ ನಾಯಕ ಇಸ್ಮಾಯೀಲ್ ಹಾನಿಯೆಹ್ ಅವರ ಹತ್ಯೆಯ ಪ್ರತಿಕಾರ ತೀರಿಸುವುದಾಗಿ ಇರಾನ್ ಪ್ರತಿಜ್ಞೆಗೈದ ಬೆನ್ನಲ್ಲೇ ಐಆರ್‌ಜಿಸಿ ಈ ಘೋಷಣೆ ಮಾಡಿದೆ. ವಿವಿಧ ಶ್ರೇಣಿಯ ದೀರ್ಘ ಹಾಗೂ ಮಧ್ಯಮ ವ್ಯಾಪ್ತಿಯ ಕ್ಷಿಪಣಿ ವ್ಯವಸ್ಥೆಗಳನ್ನು, ವಿಚಕ್ಷಣಾ ಡ್ರೋನ್‌ಗಳನ್ನು ಹಾಗೂ ನೌಕಾಪಡೆಯ ರಾಡಾರ್‌ಗಳನ್ನು ತನ್ನ ನೌಕಾಪಡೆಗೆ ಸೇರಿಸಲಾಗಿದೆ ಎಂದು ಐಆರ್‌ಜಿಸಿ ತಿಳಿಸಿದೆ. ಇರಾನಿಯನ್ ನೌಕಾಪಡೆಯ ಹಲವಾರು ಶಸ್ತ್ರಾಸ್ತ್ರಗಳನ್ನು ಸರಕಾರಿ ಸ್ವಾಮ್ಯದ ಟೆಲಿವಿಶನ್ ಶುಕ್ರವಾರ ಪ್ರದರ್ಶಿಸಿದೆ. ಇರಾನ್ ದೇಶವು ಮಧ್ಯಪ್ರಾಚ್ಯದ ಅತ್ಯಂತ ಬೃಹತ್ ಕ್ಷಿಪಣಿ ಕಾರ್ಯಕ್ರಮಗಳನ್ನು ಹೊಂದಿದೆ.



# ಒಡಿಶಾದಲ್ಲಿ ಮದ್ಯ ನಿಷೇಧ; ಹೊಸ ಮದ್ಯದಂಗಡಿಗಳ ಕುರಿತು ಅಬಕಾರಿ ಸಚಿವರ ಮಹತ್ವದ ಘೋಷಣೆ

**ಪುರಿ:** ಒಡಿಶಾದ ಕಾನೂನು ಸಚಿವ ಪೃಥ್ವಿರಾಜ್ ಹರಿಚಂದನ್ ರಾಜ್ಯದ ಮದ್ಯ ಉದ್ಯಮಕ್ಕೆ ಸಂಬಂಧಿಸಿದಂತೆ ಮಹತ್ವದ ಘೋಷಣೆ ಮಾಡಿದ್ದಾರೆ. ಒಡಿಶಾದಲ್ಲಿ ಯಾವುದೇ ಹೊಸ ಮದ್ಯದ ಅಂಗಡಿಗಳು ಸ್ಥಾಪನೆಯಾಗುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಒಡಿಶಾ ಮಾರುಕಟ್ಟೆಯಲ್ಲಿ ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟುವುದು ಒಡಿಶಾದ ಅಬಕಾರಿ ಸಚಿವಾಲಯದ ಪ್ರಮುಖ ಸವಾಲು ಎಂದು ಸಚಿವರು ಹೇಳಿದ್ದಾರೆ. ತೆರಿಗೆ ರಹಿತ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಲ್ಲಿಸುವುದು ಇದರ ಉದ್ದೇಶವಾಗಿದೆ. ಅಬಕಾರಿ ನಿಯಮಗಳಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಲೋಪದೋಷಗಳನ್ನು ಗುರುತಿಸಲು ಮತ್ತು ಮುಚ್ಚುವ ಗುರಿಯನ್ನು ಸಚಿವಾಲಯ ಹೊಂದಿದೆ ಎಂದಿದ್ದಾರೆ.



''ಒಡಿಶಾದಲ್ಲಿ ಹೊಸ ಮದ್ಯದ ಅಂಗಡಿಗಳು ಇರುವುದಿಲ್ಲ'' ಎಂದು ಹರಿಚಂದನ್ ಹೇಳಿದ್ದಾರೆ. ''ಅಬಕಾರಿ ನೀತಿಯನ್ನು ಸ್ಪಷ್ಟಪಡಿಸುವ ಮೂಲಕ ಒಡಿಶಾದಲ್ಲಿ ಯಾವುದೇ ಹೊಸ ಮದ್ಯದ ಅಂಗಡಿಗಳನ್ನು ತೆರೆಯಲು ಅವಕಾಶ ನೀಡುವುದಿಲ್ಲ'' ಎಂದು ಅಬಕಾರಿ ಸಚಿವರು ವಿವರಿಸಿದ್ದಾರೆ.

ಕಾನೂನು ಮತ್ತು ಕಾರ್ಯ ಸಚಿವಾಲಯಗಳ ಜವಾಬ್ದಾರಿಗಳನ್ನು ಹೊಂದಿರುವ ಹರಿಚಂದನ್, ''ಅಕ್ರಮ ಮದ್ಯ ಮಾರಾಟವನ್ನು ತಡೆಯಲು ನಾವು ನಮ್ಮ ಅತ್ಯುತ್ತಮ ಪ್ರಯತ್ನವನ್ನು ಮಾಡುತ್ತಿದ್ದೇವೆ'' ಎಂದು ಹೇಳಿದ್ದಾರೆ. 2025ರಲ್ಲಿ ರಾಜ್ಯದಲ್ಲಿ ಅಬಕಾರಿ ನೀತಿಯಲ್ಲಿ ಹಲವು ಬದಲಾವಣೆಗಳನ್ನು ಕಾಣಲಿದೆ. ಆದ್ದರಿಂದ ಒಡಿಶಾದಲ್ಲಿ ಯಾವುದೇ ಹೊಸ ಮದ್ಯದ ಅಂಗಡಿಗಳು ಅಥವಾ ಅಕ್ರಮ ಮದ್ಯ ಮಾರಾಟ ಇರುವುದಿಲ್ಲ ಎಂದು ಹರಿಚಂದನ್ ಹೇಳಿದ್ದಾರೆ. ಈ ಹಿಂದೆ ಜೂನ್ 15ರಂದು ಒಡಿಶಾ ಪಿಆರ್ ಇಲಾಖೆ ರಾಜ್ಯದಲ್ಲಿ ಮದ್ಯ ನಿಷೇಧದ ಬಗ್ಗೆ ಸುಳ್ಳು ಸುದ್ದಿಗಳ ಪ್ರಸಾರದ ಬಗ್ಗೆ ಸ್ಪಷ್ಟನೆ ನೀಡಿತ್ತು. ನಂತರ ಜುಲೈ 26ರಂದು ಒಡಿಶಾ ಸರ್ಕಾರವು ರಾಜ್ಯದಲ್ಲಿ ಹಂತ ಹಂತವಾಗಿ ಮದ್ಯ ನಿಷೇಧವನ್ನು ಯೋಜಿಸಿದೆ ಎಂದು ವರದಿಯಾಗಿದೆ ಎಂದು ಸಾಮಾಜಿಕ ಭದ್ರತಾ ಸಚಿವ ನಿತ್ಯಾನಂದ ಗೊಂಡ್ ಹೇಳಿದ್ದಾರೆ.

# ದಕ್ಷಿಣ ಚೀನಾ ಸಮುದ್ರದಲ್ಲಿ ಜಗತ್ತಿನ ಅತಿ ದೊಡ್ಡ ನೈಸರ್ಗಿಕ ಅನಿಲ ನಿಕ್ಷೇಪ ಪತ್ತೆ!

**ಬೀಜಿಂಗ್:** ವಿವಾದಿತ ದಕ್ಷಿಣ ಚೀನಾ ಸಮುದ್ರದಲ್ಲಿ ಜಗತ್ತಿನ ಅತಿ ದೊಡ್ಡ ನೈಸರ್ಗಿಕ ಅನಿಲ ನಿಕ್ಷೇಪವನ್ನು ಪತ್ತೆ ಮಾಡಲಾಗಿದೆ ಎಂದು ಚೀನಾ ಮಾಹಿತಿ ನೀಡಿದೆ.



ದಕ್ಷಿಣ ಚೀನಾ ಸಮುದ್ರ ವಿಚಾರವಾಗಿ ಈಗಾಗಲೇ ಹಲವು ದೇಶಗಳಲ್ಲಿ ಮಿಲಿಟರಿ ಮತ್ತು ರಾಜತಾಂತ್ರಿಕ ಕಿತ್ತಾಟ ನಡೆಯುತ್ತಿದೆ.

ಈಗ ಅನಿಲ ನಿಕ್ಷೇಪ ಪತ್ತೆಯಾದ ಬಳಿಕ ಈ ಕಿತ್ತಾಟ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ.

ಚೀನಾ ಸರ್ಕಾರ ರಾಷ್ಟ್ರೀಯ ಕಡಲಾಚೆಯ ತೈಲ ನಿಗಮ ಈ ವಿಚಾರವನ್ನು ತಿಳಿಸಿದ್ದು ಸಂಬಂಧಿತ ಸರ್ಕಾರಿ ಅಧಿಕಾರಿಗಳು ಡೇಟಾವನ್ನು ಅನುಮೋದಿಸಿದ್ದಾರೆ ಎಂದು ಹೇಳಿದೆ. ಈ ಅನಿಲ ನಿಕ್ಷೇಪ ಇರುವ ಪ್ರದೇಶವು ವಿವಾದಿತ ದಕ್ಷಿಣ ಚೀನಾ ಸಮುದ್ರ ವ್ಯಾಪ್ತಿಯೊಳಗೆ ಇದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಅದು ಯಾವುದೇ ವಿವರ ನೀಡಿಲ್ಲ.

ಲಿಂಗ್ಶುಯಿ 36–1 ಹೆಸರಿನ ಅನಿಲ ನಿಕ್ಷೇಪ ಇರುವ ಜಾಗ ಚೀನಾದ ದಕ್ಷಿಣದ ದ್ವೀಪ ಪ್ರಾಂತ್ಯದ ಹೈನಾನ್ನ ಆಗ್ನೇಯ ಭಾಗದ ನೀರಿನಲ್ಲಿದೆ. ದಕ್ಷಿಣ ಚೀನಾ ಸಮುದ್ರ ವಿಚಾರವಾಗಿ ಈಗಾಗಲೇ ಫಿಲಿಪೈನ್ಸ್, ವಿಯೆಟ್ನಾಂ, ಮಲೇಷ್ಯಾ, ಬ್ರೂನಿ ಮತ್ತು ತೈವಾನ್ ಜೊತೆ ಚೀನಾ ಸಂಘರ್ಷ ನಡೆಸುತ್ತಿದೆ. ಈ ಸಣ್ಣ ದೇಶಗಳಿಗೆ ಅಮೆರಿಕ, ಐರೋಪ್ಯ ಒಕ್ಕೂಟ, ಜಪಾನ್ ಹಾಗೂ ಇತರ ಮಿತ್ರರಾಷ್ಟ್ರಗಳು ಬೆಂಬಲಕ್ಕೆ ನಿಂತಿವೆ. ದಕ್ಷಿಣ ಚೀನಾ ಸಮುದ್ರ ವಿಶ್ವದ ಅತ್ಯಂತ ಜನನಿಬಿಡ ಹಡಗು ಮಾರ್ಗಗಳಲ್ಲಿ ಒಂದಾಗಿದೆ. ಜಾಗತಿಕ ವ್ಯಾಪಾರದಲ್ಲಿ 20% ವ್ಯಾಪಾರ ಈ ಮಾರ್ಗದ ಮೂಲಕ ಹಾದುಹೋಗುತ್ತದೆ.

# ಅಕ್ರಮವಾಗಿ ಮರ ಕಡಿದು ಮಾರಾಟ ಮಾಡಿದ್ರೆ 50 ಸಾವಿರ ರೂ. ದಂಡ

**ದೆಹಲಿ:** ಇನ್ನುಮುಂದೆ ಅಕ್ರಮವಾಗಿ ಮರ ಕಡಿದು, ಮಾರಾಟ ಮಾಡಿದರೆ 50 ಸಾವಿರ ರೂ. ದಂಡ ತೆರಬೇಕಾಗುತ್ತದೆ. ರಾಜ್ಯದಲ್ಲಿ ಸದಾ ಹಸಿರು ನೆಲೆಸಿರುವಂತೆ ಮಾಡಲು ಅಕ್ರಮವಾಗಿ ಮರ ಕಡಿಯುವವರ ವಿರುದ್ಧದ ಕ್ರಮಕ್ಕೆ ಮಹಾರಾಷ್ಟ್ರ ಸರ್ಕಾರ ಮುಂದಾಗಿದೆ. ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಕ್ರಮವಾಗಿ ಮರಗಳನ್ನು ಕಡಿಯುವವರಿಗೆ ವಿಧಿಸುವ ದಂಡವನ್ನು 1000 ರೂ.ಗಳಿಂದ 50,000 ರೂ.ಗಳಿಗೆ ಹೆಚ್ಚಿಸುವ ಪ್ರಸ್ತಾವನೆಯನ್ನು ಕೃಷಿ ಇಲಾಖೆ ಮಂಡಿಸಿತು.

ಇದನ್ನು ರಾಜ್ಯದಲ್ಲಿ ಜಾರಿಗೆ ತರಲು ಕೃಷಿ ಇಲಾಖೆ ಸರ್ಕಾರದ ನಿರ್ಣಯವನ್ನು ಹೊರಡಿಸುತ್ತದೆ. ಅಸ್ತಿತ್ವದಲ್ಲಿರುವ ಮಹಾರಾಷ್ಟ್ರ ಮರ ಕಡಿಯುವ ಕಾಯಿದೆ 1964 ಅನ್ನು ಸೆಕ್ಷನ್ 4 ರಲ್ಲಿ ತಿದ್ದುಪಡಿ ಮಾಡಲಾಗುವುದು, ಇದರಿಂದಾಗಿ ಮರ ಕಡಿಯುವವರು, ಅಕ್ರಮವಾಗಿ ಕತ್ತರಿಸಿದ ಮರವನ್ನು ಸಾಗಿಸುವ ವಾಹನಗಳನ್ನು ವಶಪಡಿಸಿಕೊಳ್ಳುವುದು ಮುಂತಾದ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಲಾಗಿದೆ.

ಮಹಾರಾಷ್ಟ್ರ ಸರ್ಕಾರವು ರಾಜ್ಯದಲ್ಲಿ ಹರ್ ಘರ್



ತಿರಂಗ ಅಭಿಯಾನದ ಭಾಗವಾಗಿ ಆಗಸ್ಟ್ 9 ರಿಂದ 15 ರವರೆಗೆ 2.5 ಕೋಟಿ ಮನೆಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಲು ನಿರ್ಧರಿಸಿದೆ. ಶಿಂಧೆ, ಉಪಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಮತ್ತೊಬ್ಬ ಡಿಸಿಎಂ ದೇವೇಂದ್ರ ಫಡ್ನವಿಸ್ ಆಗಸ್ಟ್ ಕ್ರಾಂತಿ ಮೈದಾನಕ್ಕೆ ಭೇಟಿ ನೀಡಿ ಮುಂಬೈನಲ್ಲಿ ಧ್ವಜಾರೋಹಣದಲ್ಲಿ ಭಾಗವಹಿಸಲಿದ್ದಾರೆ.

ರೈತರ ಆತ್ಮಹತ್ಯೆ ಹೆಚ್ಚುತ್ತಿರುವ ಜಿಲ್ಲೆಗಳಲ್ಲಿ ನೀರಾವರಿ ವ್ಯವಸ್ಥೆಯನ್ನು ಸುಧಾರಿಸಲು ಸಂಪುಟ ನಿರ್ಧರಿಸಿದೆ ಎಂದು ಶಿಂಧೆ ಹೇಳಿದರು. 87,342.96 ಕೋಟಿ ಮೌಲ್ಯದ ನೀರಾವರಿ ಯೋಜನೆಗಳು ಮತ್ತು ಮಹತ್ವಾಕಾಂಕ್ಷೆಯ ವೈನಗಂಗಾ ಮತ್ತು ನಲ್ಗಂಗಾ ನದಿ ಜೋಡಣೆ ಯೋಜನೆಗೆ ಸಂಪುಟ ಅನುಮೋದನೆ ನೀಡಿದೆ ಎಂದರು.

ಇದು ಬರಪೀಡಿತ ಮರಾಠವಾಡ ಪ್ರದೇಶದಲ್ಲಿ 3.75 ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಲು ಸಹಾಯ ಮಾಡುತ್ತದೆ. ಅಲ್ಲದೆ, ವಿದರ್ಭ ಪ್ರದೇಶಗಳಲ್ಲಿ ಮುಖ್ಯವಾಗಿ ನಾಗ್ಪುರ, ವಾರ್ಧಾ, ಅಮರಾವತಿ, ಯವತ್ಮಾಲ್, ಅಕೋಲಾ ಮತ್ತು ಬುಲ್ದಾನ ಜಿಲ್ಲೆಗಳಲ್ಲಿ ಕಾಲುವೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಹೇಳಿದರು.

# ಬಿಹಾರದ ದೇವಾಲಯ, ಮಠಗಳ ಆಸ್ತಿ ವಿವರಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸುವುದು ಕಡ್ಡಾಯ

**ಪಾಟ್ನಾ:** ಎಲ್ಲಾ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳು (ಡಿಎಂಗಳು) ತಮ್ಮ ಪ್ರದೇಶಗಳಲ್ಲಿ ನೋಂದಣಿಯಾಗದ ದೇವಸ್ಥಾನಗಳು, ಮಠಗಳು ಮತ್ತು ಟ್ರಸ್ಟ್‌ಗಳ ನೋಂದಣಿಯನ್ನು ಖಚಿತಪಡಿಸಿಕೊಳ್ಳಬೇಕೆಂದು ಬಿಹಾರ ಸರ್ಕಾರವು ಕಡ್ಡಾಯಗೊಳಿಸಿದೆ. ಈ ಘಟಕಗಳು ತಮ್ಮ ಸ್ಥಿರ ಆಸ್ತಿಗಳ ವಿವರಗಳನ್ನು ಆನ್‌ಲೈನ್ ಪಟ್ಟಿಗಾಗಿ ಬಿಹಾರ ರಾಜ್ಯ ಧಾರ್ಮಿಕ ಟ್ರಸ್ಟ್‌ಗಳ ಮಂಡಳಿಗೆ ಸಲ್ಲಿಸುವ ಅಗತ್ಯವಿದೆ. ಃಖಃಖಿ ರಾಜ್ಯದ ಕಾನೂನು ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

ಈ ಕುರಿತು ಇಂದು ಮಾತನಾಡಿದ ಬಿಹಾರದ ಕಾನೂನು ಸಚಿವ ನಿತಿನ್ ನಬಿನ್, ''ನೋಂದಣಿಯಾಗದ ದೇವಾಲಯಗಳು, ಮಠಗಳು ಮತ್ತು ಟ್ರಸ್ಟ್‌ಗಳನ್ನು ಆದ್ಯತೆಯ ಆಧಾರದ ಮೇಲೆ ನೋಂದಾಯಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ'' ಎಂದು ಹೇಳಿದ್ದಾರೆ.

ಎಲ್ಲಾ ನೋಂದಾಯಿತ ದೇವಾಲಯಗಳು ಮತ್ತು ಮಠಗಳ ಸ್ಥಿರಾಸ್ತಿಗಳ ವಿವರಗಳನ್ನು ಆನ್ ಲೈನ್ ಪ್ರಕಟಣೆಗಾಗಿ ತ್ವರಿತವಾಗಿ ಬಿಎಸ್‌ಬಿಆರ್‌ಟಿಗೆ ಸಲ್ಲಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು



ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ. ಈ ನಿಟ್ಟಿನಲ್ಲಿ ನಾನು ಇತ್ತೀಚೆಗೆ ಎಲ್ಲಾ ಡಿಎಂಗಳಿಗೆ ಪತ್ರವನ್ನು ಕಳುಹಿಸಿದ್ದೇನೆ. ಇದುವರೆಗೆ 18 ಜಿಲ್ಲೆಗಳು ಮಾತ್ರ ಬಿಎಸ್‌ಬಿಆರ್‌ಟಿಗೆ ಡೇಟಾವನ್ನು ಸಲ್ಲಿಸಿವೆ ಎಂದು ಅವರು ಹೇಳಿದ್ದಾರೆ.

ಬಿಹಾರದ ಹಿಂದೂ ಧಾರ್ಮಿಕ ಟ್ರಸ್ಟ್ ಆಕ್ಟ್, 1950 ರ ಪ್ರಕಾರ, ಬಿಹಾರದ ಎಲ್ಲಾ ಸಾರ್ವಜನಿಕ ದೇವಾಲಯಗಳು, ಮಠಗಳು, ಟ್ರಸ್ಟ್‌ಗಳು ಮತ್ತು ಧರ್ಮಶಾಲಾಗಳನ್ನು ಬಿಎಸ್‌ಬಿಆರ್‌ಟಿ ಅಡಿಯಲ್ಲಿ ನೋಂದಾಯಿಸಬೇಕು. ನೋಂದಾಯಿತ ದೇವಸ್ಥಾನಗಳು, ಮಠಗಳು ಅಥವಾ ಟ್ರಸ್ಟ್‌ಗಳ ಅಕ್ರಮ ಆಸ್ತಿ ವಹಿವಾಟುಗಳಲ್ಲಿ ತೊಡಗಿರುವವರ ವಿರುದ್ಧ ಮತ್ತು ಬಿಎಸ್‌ಬಿಆರ್‌ಟಿಯಲ್ಲಿ ನೋಂದಾಯಿಸಲು ವಿಫಲವಾದ ನೋಂದಣಿಯಾಗದ ಘಟಕಗಳ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳುತ್ತದೆ.

ಈ ಸಮಸ್ಯೆಗಳ ನಿವಾರಣೆಗೆ ಕಾನೂನು, ಕಂದಾಯ, ಭೂಸುಧಾರಣೆ ಇಲಾಖೆಗಳ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಲಾಗುವುದು. ನೋಂದಾಯಿತ ಮತ್ತು ನೋಂದಣಿಯಾಗದ ದೇವಾಲಯಗಳ ಭೂಮಿ ಸೇರಿದಂತೆ ಆಸ್ತಿಯನ್ನು ಅನಧಿಕೃತ ಕ್ಲೈಮ್‌ಗಳಿಂದ ರಕ್ಷಿಸಲು ನೋಂದಣಿ ನಿರ್ಣಾಯಕವಾಗಿದೆ.

ಇತ್ತೀಚಿನ ಮಾಹಿತಿಯ ಪ್ರಕಾರ, ಬಿಹಾರದಲ್ಲಿ ಸುಮಾರು 2,512 ನೋಂದಣಿಯಾಗದ ದೇವಾಲಯಗಳು ಮತ್ತು ಮಠಗಳು ಒಟ್ಟಾರೆಯಾಗಿ 4,321.64 ಎಕರೆ ಭೂಮಿಯನ್ನು ಹೊಂದಿವೆ. ಬಿಹಾರದಲ್ಲಿ ಸರಿಸುಮಾರು 2,499 ನೋಂದಾಯಿತ ದೇವಾಲಯಗಳಿವೆ. ಅವುಗಳು ಒಟ್ಟಾಗಿ 18,456 ಎಕರೆಗಳನ್ನು ಹೊಂದಿವೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

## ಭಾವಿ ಸೊಸೆಯನ್ನು 'ಹಾಟ್ ಗರ್ಲ್' ಎಂದು ಕರೆದಿದ್ದ ಅಕ್ಕಿನೇನಿ ನಾಗಾರ್ಜುನ

ಚಿತ್ರರಂಗದಲ್ಲಿ ಯಾರ ಮೇಲೆ ಯಾವಾಗ ಪ್ರೀತಿ ಮೂಡುತ್ತದೆ ಎಂದು ಗೊತ್ತಾಗುವುದಿಲ್ಲ. ಬಾಲಿವುಡ್ ನಲ್ಲಿ ಅಮಿತಾಭ್ ಬಚ್ಚನ್, ಅಭಿಷೇಕ್ ಬಚ್ಚನ್ ಹಾಗೂ ಐಶ್ವರ್ಯಾ ರೈ 'ಕಜ್ರಾ ರೇ..' ಹಾಡಿಗೆ ಒಟ್ಟಾಗಿ ಡ್ಯಾನ್ಸ್ ಮಾಡಿದ್ದರು. ಐಶ್ವರ್ಯಾ ತಮ್ಮ ಸೊಸೆ ಆಗಿ ಬರುತ್ತಾರೆ ಎಂದು ಅಮಿತಾಭ್ ಗೆ ಆ ಸಂದರ್ಭದಲ್ಲಿ ಗೊತ್ತಿರಲಿಲ್ಲ. ಈಗ ಅಕ್ಕಿನೇನಿ ನಾಗಾರ್ಜುನ ಅವರ ವಿಚಾರದಲ್ಲೂ ಹಾಗೆಯೇ ಆಗಿದೆ. ಅವರು ಶೋಭಿತಾ ಬಗ್ಗೆ ನೀಡಿದ್ದ ಹೇಳಿಕೆ ಸಖತ್ ವೈರಲ್ ಆಗುತ್ತಿದೆ.

ನಾಗಾರ್ಜುನ ಅವರ ಮಗ ನಾಗ ಚೈತನ್ಯ ಅವರು ನಟಿ ಶೋಭಿತಾ ಧುಲಿಪಾಲ್ ಅವರ ಜೊತೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ. ಇವರ ಎಂಗೇಜ್ ಮೆಂಟ್ ಫೋಟೋಗಳನ್ನು ಸ್ವತಃ ನಾಗಾರ್ಜುನ ಅವರು ಶೇರ್ ಮಾಡಿ ನವಜೋಡಿಗೆ ಶುಭಕೋರಿದ್ದಾರೆ. ಈ ಫೋಟೋಗಳು ಸಖತ್ ವೈರಲ್ ಆಗಿವೆ. ಈ ಮಧ್ಯೆ ಸಮಂತಾ ಫ್ಯಾನ್ಸ್ ನಾಗ ಚೈತನ್ಯ ಬಗ್ಗೆ ಅಪಸ್ವರ ತೆಗೆದಿದ್ದಾರೆ. ಇವರು ಮಾಡಿದ್ದು ಸರಿ ಅಲ್ಲ ಎನ್ನುತ್ತಿದ್ದಾರೆ. ಕೆಲವರು ನಾಗಾರ್ಜುನ ಅವರ ಹಳೆಯ ವಿಡಿಯೋನ ವೈರಲ್ ಮಾಡಿದ್ದಾರೆ.





'ಶೋಭಿತಾ ಧುಲಿಪಾಲ್ ಅವರು ಚೆನ್ನಾಗಿದ್ದಾರೆ. ನಾನು ಈ ರೀತಿ ಹೇಳಬಾರದು. ಅವರು ಸಿನಿಮಾದಲ್ಲಿ ಹಾಟ್ ಆಗಿ ಕಾಣಿಸಿಕೊಂಡಿದ್ದಾರೆ. ಅವರು ಸಿನಿಮಾದಲ್ಲಿ ಅಟ್ರ್ಯಾಕ್ಟಿವ್ ಆಗಿ ಕಾಣಿಸಿಕೊಂಡಿದ್ದಾರೆ. ಅವರು ಬ್ಯೂಟಿಫುಲ್ ಆಗಿ ಕಾಣಿಸಿಕೊಂಡಿದ್ದಾರೆ' ಎಂದು ಅಕ್ಕಿನೇನಿ ನಾಗಾರ್ಜುನ ಹೇಳಿದ್ದರು. ಈ ವಿಡಿಯೋನ ಈಗ ವೈರಲ್ ಆಗುತ್ತಿದೆ.

ಸಮಂತಾ ಹಾಗೂ ನಾಗ ಚೈತನ್ಯ 2021ರಲ್ಲಿ ವಿಚ್ಛೇದನ ಪಡೆದರು. ಆ ಬಳಿಕ ನಾಗ ಚೈತನ್ಯ ಅವರು ಸಿಂಗಲ್ ಆಗಿದ್ದರು. ಆ ಬಳಿಕೆ ಅವರಿಗೆ ಶೋಭಿತಾ ಜೊತೆ ಪ್ರೀತಿ ಮೂಡಿತು. ಈಗ ಶೋಭಿತಾ ಹಾಗೂ ನಾಗ ಚೈತನ್ಯ ನಿಶ್ಚಿತಾರ್ಥ ಮಾಡಿಕೊಂಡಿದ್ದು, ಹೊಸ ಬಾಳಿಗೆ ಕಾಲಿಡಲು ರೆಡಿ ಆಗಿದ್ದಾರೆ. ಇವರ ಮದುವೆ ಯಾವಾಗ ಆಗಲಿದೆ ಎಂಬುದನ್ನು ಕಾದು ನೋಡಬೇಕಿದೆ.

# ಭೀಮ ಸಿನಿಮಾ ಕೂಡ ಪಕ್ಕಾ ರೌಡಿಸಂ ಕಥೆ

ದುನಿಯಾ ವಿಜಯ್ ನಿರ್ದೇಶನದ ಮೊದಲ ಸಿನಿಮಾ 'ಸಲಗ' ಯಶಸ್ಸು ಕಂಡಿತ್ತು. ಆ ಬಳಿಕ ಅವರು ಕೈಗೆತ್ತಿಕೊಂಡಿದ್ದು 'ಭೀಮ' ಚಿತ್ರವನ್ನು. ಈ ಸಿನಿಮಾ ಕೂಡ ಪಕ್ಕಾ ರೌಡಿಸಂ ಕಥೆ ಅನ್ನೋದು ಟ್ರೇಲರ್ ನೋಡಿದವರಿಗೆ ಗೊತ್ತಾಗಿದೆ. (ಆಗಸ್ಟ್ 9) ಸಿನಿಮಾ ಬಿಡುಗಡೆ ಕಂಡಿದೆ. ಈ ಚಿತ್ರದಲ್ಲಿ ದುನಿಯಾ ವಿಜಯ್ ಜೊತೆ ರಂಗಾಯಣ ರಘು, ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ ಮೊದಲಾದವರು ನಟಿಸಿದ್ದಾರೆ. ಈ ಸಿನಿಮಾ ಬಗ್ಗೆ ಫ್ಯಾನ್ಸ್ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಹಾಗಾದರೆ ಈ ಚಿತ್ರದ ಮೊದಲಾರ್ಧದಲ್ಲಿ ಏನೆಲ್ಲ ಇದೆ ಸಿನಿಮಾದಲ್ಲಿ ಏನನ್ನು ಹೇಳಲು ಹೊರಟಿದ್ದಾರೆ.





ಭೀಮ ಸಿನಿಮಾನಲ್ಲಿ ಬೆಂಗಳೂರಿನ ಗಲ್ಲಿಗಳ ಕತೆಯನ್ನು ಅನಾವರಣ ಮಾಡಿರುವ ದುನಿಯಾ ವಿಜಯ್.

ಗಾಂಜಾ ಮೋಹ ಮತ್ತು ಬೆಂಗಳೂರಿನ ಸ್ಲಂ ಯುವಕರನ್ನು ರೌಡಿಗಳು ಬಳಸಿಕೊಳ್ಳುತ್ತಿರುವ ರೀತಿಯ ಬಗ್ಗೆ ತೋರಿಸಲಾಗಿದೆ.



ಸಿನಿಮಾದ ಆರಂಭದಲ್ಲಿ ಮುಖ್ಯ ಪಾತ್ರಗಳ ಪರಿಚಯ ಮತ್ತು ಅವರ ವ್ಯಕ್ತಿತ್ವ ಅನಾವರಣ ಮಾಡಿದ್ದಾರೆ ನಿರ್ದೇಶಕ ವಿಜಿ. ಸಿನಿಮಾದ ವಿಲನ್ ಪಾತ್ರಕ್ಕೆ ನೀಡಿರುವ ಹಿನ್ನೆಲೆ ಚೆನ್ನಾಗಿದೆ. ದುನಿಯಾ ವಿಜಯ್ ಎಂಟ್ರಿ ಮಾಸ್ ಹಾಡಿನ ಮೂಲಕ ಆಗುತ್ತದೆ. ಸೆಂಟಿಮೆಂಟ್ ದೃಶ್ಯದಲ್ಲಿ ಮಾಸ್ ಹಾಡಿನ ಮೂಲಕ ಎಂಟ್ರಿ ಕೊಡುವ ದುನಿಯಾ ವಿಜಿ. ಸಿನಿಮಾದಲ್ಲಿ ಫಿಲ್ಟರ್ ಇಲ್ಲದೆ ಬೈಗುಳಗಳನ್ನು ಬಳಸಲಾಗಿದೆ. ಅಮ್ಮ-ಅಕ್ಕ ಬೈಗುಳಗಳು ಪದೇ ಪದೇ ಕಿವಿ ಮೇಲೆ ಬೀಳುತ್ತಲೇ ಇರುತ್ತವೆ.

ಆರಂಭದಲ್ಲಿ ಬರುವ ಕೆಲವು ಹಾಡುಗಳು ಗಮನ ಸೆಳೆಯುತ್ತವೆ. ಹಾಡುಗಳಲ್ಲಿ ಬೆಂಗಳೂರಿನ ಗಲ್ಲಿಗಳನ್ನು ಇದ್ದಂತೆ ತೋರಿಸಿದ್ದಾರೆ ವಿಜಿ.

ಸಿನಿಮಾದ ಮೊದಲಾರ್ಧದಲ್ಲಿ ಕೆಲವು ಹಾಸ್ಯ ಸನ್ನಿವೇಶಗಳು ಬಹಳ ನಗಿಸುತ್ತವೆ. ಆದರೆ ಕೆಲವು ದೃಶ್ಯಗಳು, ಸಂಭಾಷಣೆ ಮುಜುಗರವನ್ನೂ ತರುತ್ತವೆ. ಸಿನಿಮಾದ ನಾಯಕಿಗೆ ಹಾಗೂ ನಾಯಕನ ಗೆಳೆಯರಿಗೆ ಹೆಚ್ಚೇನು ಕೆಲಸವಿಲ್ಲ. ನಾಯಕನ ಫೈಟ್ ಗಳನ್ನು ನೋಡಿ ಚಪ್ಪಾಳೆ ತಟ್ಟುವುದಷ್ಟೆ ಅವರ ಕೆಲಸ. ಸಿನಿಮಾದ ಮಧ್ಯಾರ್ಧದ ಬರುವ ಮುಂಚೆ ಖಡಕ್ ಪೊಲೀಸ್ ಅಧಿಕಾರಿ ಕತೆಗೆ ಎಂಟ್ರಿ. ನಾಯಕ ಹಾಗೂ ಖಡಕ್ ಅಧಿಕಾರಿ ಸೇರಿ ಗಾಂಜಾ ವಿತರಕರ ಮೇಲೆ ಸಮರ ಸಾರಿದ್ದಾರೆ.

ಸಿನಿಮಾದ ಮಧ್ಯಾರ್ಧದ ವೇಳೆಗೆ ನಾಯಕ ದುನಿಯಾ ವಿಜಯ್ ಮೇಲುಗೈ ಆಗಿ, ವಿಲನ್ ಜೈಲಿಗೆ ಹೋಗಿದ್ದಾನೆ. ಇನ್ನು ಮುಂದೆ ಇದು ದ್ವೇಷದ ಕತೆಯಾಗಿ ತಿರುವು ಪಡೆಯುವ ಸಾಧ್ಯತೆ ಇದೆ.

## ಅದ್ದೂರಿಯಾಗಿ ನಡೆದ ತರುಣ್-ಸೋನಲ್ ಅರಿಶಿಣ ಶಾಸ್ತ್ರ

ತರುಣ್ ಸುಧೀರ್ ಹಾಗೂ ಸೋನಲ್ ಮಧ್ಯೆ ಪ್ರೀತಿ ಮೂಡಿತ್ತು. ಈಗ ಈ ಪ್ರೀತಿಗೆ ಹೊಸ ಅರ್ಥ ನೀಡುತ್ತಿದ್ದಾರೆ. ಇವರ ಮದುವೆ ನೋಡಲು ಫ್ಯಾನ್ಸ್ ಕಾಯುತ್ತಿದ್ದಾರೆ. ತರುಣ್ ಅವರು ಚಿತ್ರರಂಗದಲ್ಲಿ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದಾರೆ. ಕೆಲವು ಸೂಪರ್ ಹಿಟ್ ಚಿತ್ರಗಳನ್ನು ಅವರು ನಿರ್ದೇಶನ ಮಾಡಿದ್ದಾರೆ. ಕಳೆದ ವರ್ಷ ರಿಲೀಸ್ ಆದ 'ಕಾಟೇರ' ಯಶಸ್ಸು ಕಂಡಿದೆ.

ಆಗಸ್ಟ್ 10 ಹಾಗೂ 11 ನಿರ್ದೇಶಕ ತರುಣ್ ಸುಧೀರ್ ಹಾಗೂ ನಟಿ ಸೋನಲ್ ಮೊಂತೆರೋ ಬಾಳಲ್ಲಿ ಮಹತ್ವದ ದಿನ. ಇಬ್ಬರೂ ಹೊಸ ಜೀವನಕ್ಕೆ ಕಾಲಿಡುತ್ತಿದ್ದಾರೆ. ಅದಕ್ಕೂ ಮೊದಲು ಅದ್ದೂರಿಯಾಗಿ ಅರಿಶಿಣ ಶಾಸ್ತ್ರಗಳನ್ನು ಮಾಡಿಕೊಳ್ಳಲಾಗಿದೆ.

ಆಗಸ್ಟ್ 10ರಂದು ಬೆಂಗಳೂರಲ್ಲಿ ಆರತಕ್ಷತೆ ಜರುಗಲಿದೆ. ಆಗಸ್ಟ್ 11ರಂದು ಇವರ ವಿವಾಹ ನೆರವೇರುತ್ತಿದೆ. ಇದಕ್ಕೂ ಮೊದಲು ಈ ಜೋಡಿ ಅರಿಶಿಣದ ನೀರಿನಲ್ಲಿ ಮಿಂದೆದ್ದಿದ್ದಾರೆ. ಈ ಫೋಟೋಗಳು ವೈರಲ್ ಆಗಿವೆ.

ಅರಿಶಿಣದ ನೀರನ್ನು ಹೊಯ್ದುಕೊಂಡು ಫೋಟೋಗೆ ತರುಣ್ ಹಾಗೂ ಸೋನಲ್ ಪೋಸ್ ಕೊಟ್ಟಿದ್ದಾರೆ. ಭಾವಿ ಪತಿ-ಪತ್ನಿಯನ್ನು ನೋಡಿ ಫ್ಯಾನ್ಸ್ ಮೆಚ್ಚುಗೆ ಸೂಚಿಸುತ್ತಿದ್ದಾರೆ. ಈ ಫೋಟೋಗಳಿಗೆ ಸಾಮಾಜಿಕ ಜಾಲತಾಣದಲ್ಲಿ ಲೈಕ್ ಸಿಕ್ಕಿದೆ. ಚಿತ್ರರಂಗದ ಅನೇಕರ ಜೊತೆ ತರುಣ್ ಸುಧೀರ್ ಗೆ ಒಳ್ಳೆಯ ಗೆಳೆತನ ಇದೆ. ಹೀಗಾಗಿ ನೆನಪಿರಲಿ ಪ್ರೇಮ್, ಶರಣ್ ಸೇರಿದಂತೆ ಅನೇಕರು ಅರಿಶಿಣ ಶಾಸ್ತ್ರಕ್ಕೆ ಬಂದು ಪೋಸ್ ಕೊಟ್ಟಿದ್ದಾರೆ.

ತರುಣ್ ಅವರು ಚಿತ್ರರಂಗದಲ್ಲಿ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದಾರೆ. ಕೆಲವು ಸೂಪರ್ ಹಿಟ್ ಚಿತ್ರಗಳನ್ನು ಅವರು ನಿರ್ದೇಶನ ಮಾಡಿದ್ದಾರೆ. ಕಳೆದ ವರ್ಷ ರಿಲೀಸ್ ಆದ 'ಕಾಟೇರ' ಯಶಸ್ಸು ಕಂಡಿದೆ. ಸೋನಲ್ ಅವರು ಚಿತ್ರರಂಗದಲ್ಲಿ ದೊಡ್ಡ ಮಟ್ಟದಲ್ಲಿ ಯಶಸ್ಸು ಕಂಡಿದ್ದಾರೆ. ಅವರು ನಟಿಯಾಗಿ ಸಿನಿಮಾ ರಂಗದಲ್ಲಿ ಗುರುತಿಸಿಕೊಂಡಿದ್ದಾರೆ.









### ಭಾರತಕ್ಕೆ ಆರನೇ ಪದಕ

## ಕುಸ್ತಿಯಲ್ಲಿ ಕಂಚಿನ ಪದಕ ಗೆದ್ದ ಅಮನ್ ಸೆಹ್ರಾವತ್

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತ ಆರನೇ ಪದಕವನ್ನು ತನ್ನ ಖಾತೆಗೆ ಹಾಕಿಕೊಂಡಿದೆ. ಚೊಚ್ಚಲ ಒಲಿಂಪಿಕ್ಸ್ ಆಡುತ್ತಿರುವ ಅಮನ್ ಸೆಹ್ರಾವತ್ ಪುರುಷರ 57 ಕೆಜಿ ತೂಕ ಕುಸ್ತಿ ವಿಭಾಗದಲ್ಲಿ ಕಂಚಿನ ಪದಕಕ್ಕೆ ಕೊರಳೊಡ್ಡಿದ್ದಾರೆ. ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಪೋರ್ಟೊ ರಿಕೊ ಕುಸ್ತಿಪಟು ಡೇರಿಯನ್ ಟೊಯಿ ಕ್ರೂಜ್ ಅವರನ್ನು 13-5 ರಿಂದ ಏಕಪಕ್ಷೀಯವಾಗಿ ಸೋಲಿಸುವ ಮೂಲಕ ಅಮನ್ ಕಂಚಿನ ಪದಕವನ್ನು ತನ್ನದಾಗಿಸಿಕೊಂಡರು. ಈ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಆರನೇ ಪದಕ ದಕ್ಕಿದೆ. ಒಟ್ಟಾರೆ, ಈ ಕ್ರೀಡಾಕೂಟದಲ್ಲಿ ಇದು ಭಾರತಕ್ಕೆ 5 ನೇ ಕಂಚಿನ ಪದಕವಾಗಿದ್ದರೆ, ಕುಸ್ತಿಯಲ್ಲಿ ಭಾರತಕ್ಕೆ ಸಿಕ್ಕ ಮೊದಲ ಪದಕವಾಗಿದೆ.

**ಕುಸ್ತಿಯಲ್ಲಿ ಸತತ 5ನೇ ಪದಕ:** ಅಮನ್ ಅವರ ಈ ಪದಕದೊಂದಿಗೆ 2008 ರಿಂದ ಕುಸ್ತಿಯಲ್ಲಿ ಭಾರತದ ಪದಕದ ಗೆಲುವಿನ ಸರಣಿ ಮುಂದುವರೆದಿದೆ. 2008 ರಿಂದ ಇಲ್ಲಿಯವರೆಗೆ, ಭಾರತವು ಸತತ 5 ಒಲಿಂಪಿಕ್ಸ್‌ಗಳಲ್ಲಿ ಕುಸ್ತಿಯಲ್ಲಿ ಪದಕಗಳನ್ನು ಗೆದ್ದಿದೆ. ಇದರೊಂದಿಗೆ ಹಾಕಿ ನಂತರ, ಭಾರತಕ್ಕೆ ಗರಿಷ್ಠ ಸಂಖ್ಯೆಯ ಪದಕ ಬಂದಿರುವುದು ಈ ಕುಸ್ತಿಯಲ್ಲಿ. ಇದುವರೆಗೆ ಭಾರತ ಕುಸ್ತಿಯಲ್ಲಿ 8 ಒಲಿಂಪಿಕ್ ಪದಕಗಳನ್ನು ಗೆದ್ದುಕೊಂಡಿದೆ. ಒಲಿಂಪಿಕ್ಸ್ ಇತಿಹಾಸದಲ್ಲಿ ಮೊದಲ ಬಾರಿಗೆ 1952 ರಲ್ಲಿ ಕೆಡಿ ಜಾಧವ್ ಭಾರತದ ಪರ ಕುಸ್ತಿಯಲ್ಲಿ ಕಂಚಿನ ಪದಕವನ್ನು ಗೆದ್ದರು. ಇದಾದ ನಂತರ ಭಾರತ 56 ವರ್ಷಗಳ ಕಾಲ ಕುಸ್ತಿಯಲ್ಲಿ ಪದಕದ ಬರ ಎದುರಿಸಬೇಕಾಯಿತು. ಆ ನಂತರ ಸುಶೀಲ್ ಕುಮಾರ್ 2008 ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಈ ಬರವನ್ನು ಕೊನೆಗೊಳಿಸಿದ್ದರು.



ಆ ನಂತರ 2012ರಲ್ಲಿ ನಡೆದ ಲಂಡನ್ ಒಲಿಂಪಿಕ್ಸ್ ನಲ್ಲಿ ಸುಶೀಲ್ ಕುಮಾರ್ ಬೆಳ್ಳಿ ಹಾಗೂ ಯೋಗೇಶ್ವರ್ ದತ್ ಕಂಚಿನ ಪದಕ ಗೆದ್ದಿದ್ದರು. ಇದರ ನಂತರ, 2016 ರಲ್ಲಿ ನಡೆದಿದ್ದ ರಿಯೊ ಒಲಿಂಪಿಕ್ಸ್ ನಲ್ಲಿ ಸಾಕ್ಷಿ ಮಲಿಕ್ ಕಂಚು ಗೆದ್ದಿದ್ದರು. ಹಾಗೆಯೇ 2020 ರಲ್ಲಿ ನಡೆದಿದ್ದ ಟೋಕಿಯೊ ಒಲಿಂಪಿಕ್ಸ್ ನಲ್ಲಿ, ರವಿ ದಹಿಯಾ 57 ಕೆಜಿ ತೂಕ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದಿದ್ದರೆ, ಬಜರಂಗ್ ಪುನಿಯಾ ಕಂಚಿನ ಪದಕ ಗೆದ್ದಿದ್ದರು. ಇದೀಗ ಅಮನ್ ಈ ಟ್ರೆಂಡ್ ಅನ್ನು ಮುಂದುವರೆಸಿದ್ದಾರೆ.

**ಪ್ರಧಾನಿ ಮೋದಿ ಮೆಚ್ಚುಗೆ:** ಇನ್ನು ಕುಸ್ತಿಯಲ್ಲಿ ಭಾರತಕ್ಕೆ ಮೊದಲ ಪದಕ ಹಾಗೂ ಒಟ್ಟಾರೆ ಭಾರತಕ್ಕೆ 6ನೇ ಪದಕವನ್ನು ಗೆದ್ದುಕೊಟ್ಟ ಕುಸ್ತಿಪಟು ಅಮಾನ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದು, ''ನಮ್ಮ ಕುಸ್ತಿಪಟುಗಳು ನಮಗೆ ಇನ್ನಷ್ಟು ಹೆಮ್ಮೆ ತಂದಿದ್ದಾರೆ! ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪುರುಷರ ಫ್ರೀಸ್ಟೈಲ್ 57 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಕ್ಕಾಗಿ ಅಮನ್ ಸೆಹ್ರಾವತ್ ಅವರಿಗೆ ಅಭಿನಂದನೆಗಳು. ಅವರ ಸಮರ್ಪಣೆ ಮತ್ತು ದೃಢತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಇಡೀ ರಾಷ್ಟ್ರವು ಈ ಅದ್ಭುತ ಸಾಧನೆಯನ್ನು ಆಚರಿಸುತ್ತಿದೆ ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

**ಸೆಮೀಸ್ ನಲ್ಲಿ ಏಕಪಕ್ಷೀಯ ಸೋಲು:** ಅಮನ್ ಸೆಮಿಫೈನಲ್‌ನಲ್ಲಿ ಜಪಾನ್‌ನ ರೇ ಹಿಗುಚಿ ವಿರುದ್ಧ 0-10 ಅಂತರದಿಂದ ಹೀನಾಯ ಸೋಲನ್ನು ಎದುರಿಸಬೇಕಾಯಿತು. ಆದರೆ, ಕಂಚಿನ ಪದಕದ ಪಂದ್ಯದಲ್ಲಿ ಆರಂಭದಿಂದಲೇ ಒತ್ತಡ ಹೇರಿದ ಅವರು ಡೇರಿಯನ್ ಟೊಯಿ ಕ್ರೂಜ್ ಗೆ ಹೆಚ್ಚಿನ ಅವಕಾಶ ನೀಡದೆ, ಅದ್ಭುತ ಆಟ ಪ್ರದರ್ಶಿಸಿ 13-5 ರಿಂದ ಪಂದ್ಯವನ್ನು ಗೆದ್ದುಕೊಂಡರು. ಈ ಮೂಲಕ ತಮ್ಮ ಚೊಚ್ಚಲ ಒಲಿಂಪಿಕ್ಸ್ ನಲ್ಲೇ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡರು.

## ರಿಯಲ್ ಹಿಂದೂ ವರ್ಸಸ್ ರೀಲ್ ಹಿಂದೂ ಚರ್ಚೆ ಹುಟ್ಟುಹಾಕಿದ ಬಿಜೆಪಿ

**ನವದೆಹಲಿ:** ರಿಯಲ್ ಹಿಂದೂ ವರ್ಸಸ್ ರೀಲ್ ಹಿಂದೂ ಎನ್ನುವ ಚರ್ಚೆಯನ್ನು ಎಕ್ಸ್ ನಲ್ಲಿ ಬಿಜೆಪಿಯು ಹುಟ್ಟುಹಾಕಿದೆ. ಕಾಂಗ್ರೆಸ್ ಪಕ್ಷಕ್ಕೆ ಹಿಂದೂಗಳ ಬಗ್ಗೆ ಕಾಳಜಿ ಇಲ್ಲ ಎಂದು ಬಿಜೆಪಿ ಹೇಳಿದೆ. ಈ ಕುರಿತು ಬಿಜೆಪಿ ವಕ್ತಾರ ಶೆಹಜಾದ್ ಎಕ್ಸ್ ಖಾತೆಯಲ್ಲಿ ರಿಯಲ್ ಹಿಂದೂ ವರ್ಸಸ್ ರೀಲ್ ಹಿಂದೂ ಎನ್ನುವ ಶೀರ್ಷಿಕೆಯೊಂದಿಗೆ ಪೋಸ್ಟ್ ಮಾಡಿದ್ದು ಅದರಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ರಾಹುಲ್ ಗಾಂಧಿ ಬೇರೆ ಬೇರೆ ಸಂದರ್ಭಗಳಲ್ಲಿ ವಿಭಿನ್ನ ವಿಚಾರಧಾರೆಯೊಂದಿಗೆ ಮಾಡಿರುವ ಪೋಸ್ಟ್ ಅನ್ನು ಹಂಚಿಕೊಂಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಬಾಂಗ್ಲಾದೇಶದ ಹಂಗಾಮಿ ಪ್ರಧಾನಿಯಾಗಿ ಅಧಿಕಾರವಹಿಸಿಕೊಂಡಿರುವ ಮೊಹಮ್ಮದ್ ಯೂಸುಫ್ ಗೆ ಶುಭಾಶಯ ತಿಳಿಸಿದ್ದಾರೆ. ಜತೆಗೆ ಹಿಂದೂ ಹಾಗೂ ಇತರೆ ಅಲ್ಪಸಂಖ್ಯಾತರ ಸುರಕ್ಷತೆಯ ಬಗ್ಗೆ ಮಾತನಾಡಿದ್ದಾರೆ.

ಆದರೆ ರಾಹುಲ್ ಗಾಂಧಿಯಾಗಲಿ, ಪ್ರಿಯಾಂಕಾಗಾಂಧಿಯಾಗಲಿ ಕೇವಲ ಯೂನಸ್ ಜೆ ಶುಭಾಶಯ ತಿಳಿಸಿರುವುದು ಬಿಟ್ಟರೆ ಯಾರೂ ಕೂಡ ಹಿಂದೂಗಳ ಸುರಕ್ಷತೆ ಬಗ್ಗೆ ಮಾತನಾಡಿಲ್ಲ.





ಇನ್ನು ಗಾಜಾ ವಿಚಾರಕ್ಕೆ ಬಂದರೆ, ಅಲ್ಲಿನ ಸಮಸ್ಯೆ ಕುರಿತು ಗಮನ ಕೊಟ್ಟಂತೆ ಇಲ್ಲಿ ಕೊಟ್ಟಿಲ್ಲ, ಗಾಜಾದಂತಹ ಸಮಸ್ಯೆಗಳ ಕುರಿತು, ಗಮನ ಸೆಳೆಯಲು ದೀರ್ಘ ಪೋಸ್ಟ್‌ಗಳನ್ನು ರಾಹುಲ್ ಗಾಂಧಿ ಮಾಡಿದ್ದರು.

ಅಲ್ಲಿನ ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಬರೆದಿದ್ದರು. ಹೀಗಾಗಿ ನರೇಂದ್ರ ಮೋದಿ ನಿಜವಾದ ಹಿಂದೂ ಆದರೆ ರಾಹುಲ್ ರೀಲ್ ಹಿಂದೂ ಎಂದು ಪೋಸ್ಟ್ ಹೇಳಿದೆ.

### ಬಾಂಗ್ಲಾದೇಶದಲ್ಲಿ ಹಿಂಸಾಚಾರ

## ಮಹಿಳಾ ಟಿ20 ವಿಶ್ವಕಪ್ ಸ್ಥಳಾಂತರ

ಐಸಿಸಿ ಮಹಿಳಾ ಟಿ20 ವಿಶ್ವಕಪ್ ಆರಂಭಕ್ಕೆ ಇನ್ನೆರಡು ತಿಂಗಳು ಬಾಕಿ ಉಳಿದಿದೆ. ಅಕ್ಟೋಬರ್ 3ರಿಂದ ಆರಂಭವಾಗಲಿರುವ ಚುಟುಕು ವಿಶ್ವಸಮರಕ್ಕೆ ಬಾಂಗ್ಲಾದೇಶ ಆತಿಥ್ಯವಹಿಸುತ್ತಿದೆ. ಆದರೆ ಸದ್ಯದ ಪರಿಸ್ಥಿತಿಯನ್ನು ನೋಡಿದರೆ, ಮಹಿಳಾ ಟಿ20 ವಿಶ್ವಕಪ್ ಬೇರೆಗೆ ಸ್ಥಳಾಂತರಗೊಳ್ಳುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ. ವಾಸ್ತವವಾಗಿ ಸರ್ಕಾರಿ ಹುದ್ದೆಯಲ್ಲಿನ ಮೀಸಲಾತಿಗೆ ಸಂಬಂಧಿಸಿದಂತೆ ಬಾಂಗ್ಲಾದೇಶದಲ್ಲಿ ಹಿಂಸಾಚಾರ ಭುಗಿಲೆದಿದ್ದೆ. ದಿನೇ ದಿನೇ ಹೋರಾಟದ ಸ್ವರೂಪ ಬದಲಾಗುತ್ತಿದೆ. ಈಗಾಗಲೇ ಈ ಹೋರಾಟದಲ್ಲಿ ನೂರಾರು ಸಾವುಗಳು ಸಂಭವಿಸಿವೆ. ಇದೀಗ ದೇಶದ ಪ್ರಧಾನಿ ಶೇಖ್ ಹಸೀನಾ ಕೂಡ ದೇಶ ತೊರೆದು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ. ಬಾಂಗ್ಲಾದೇಶದಲ್ಲಿ ಇಂತಹ ಪರಿಸ್ಥಿತಿ ಇರುವಾಗ ಮಹಿಳಾ ಟಿ20 ವಿಶ್ವಕಪ್ ನಡೆಯುವುದರ ಬಗ್ಗೆ ಅನುಮಾನ ಮೂಡಿದೆ.

**ಬಾಂಗ್ಲಾದೇಶದಲ್ಲಿ ಹಿಂಸಾಚಾರ:** ಬಾಂಗ್ಲಾದೇಶದಲ್ಲಿ ಸರ್ಕಾರದ ವಿರುದ್ಧ ಸಾವಿರಾರು ಜನ ಬೀದಿಗಿಳಿದಿದ್ದಾರೆ. ದೇಶದ ಪ್ರಧಾನಿ ಶೇಖ್ ಹಸೀನಾ ಅವರ ಕಚೇರಿಗೂ ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಈ ಹಿಂಸಾಚಾರ ಮತ್ತಷ್ಟು ಉಗ್ರರೂಪ ತಾಳುವುದರಲ್ಲಿ ಸಂದೇಹವಿಲ್ಲ. ಉದ್ಯೋಗ ಮೀಸಲಾತಿಯನ್ನು ತೆಗೆದುಹಾಕುವಂತೆ ಮತ್ತು ಪ್ರಧಾನಿ ಶೇಖ್ ಹಸೀನಾ ಅವರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನಾಕಾರರು ಬೀದಿಗಿಳಿದಿದ್ದಾರೆ. ಈ ಹಿಂಸಾಚಾರದಲ್ಲಿ ಇದುವರೆಗೆ 19 ಪೊಲೀಸರು ಮತ್ತು 100 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ನೂರಾರು ಜನರು ಕೂಡ ಗಾಯಗೊಂಡಿದ್ದಾರೆ. ಹಿಂಸಾಚಾರದ ಹಿನ್ನೆಲೆಯಲ್ಲಿ ದೇಶದಲ್ಲಿ ಅನಿರ್ದಿಷ್ಟಾವಧಿ ಕರ್ಫ್ಯೂ ಹೇರಲಾಗಿದೆ.



**ಗಡಿಯಲ್ಲಿ ಭದ್ರತೆ ಹೆಚ್ಚಳ:** ಬಾಂಗ್ಲಾದೇಶದ ಪ್ರಸ್ತುತ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬಿಎಸ್ಎಫ್ ಗಡಿಯಲ್ಲಿ ಭದ್ರತೆಯನ್ನು ಹೆಚ್ಚಿಸಿದೆ. ಬಾಂಗ್ಲಾದೇಶದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಭಾರತದಲ್ಲೂ ಎಚ್ಚರಿಕೆ ನೀಡಲಾಗಿದೆ. ಈ ಎಲ್ಲಾ ಪರಿಸ್ಥಿತಿಯಿಂದ ಟಿ20 ವಿಶ್ವಕಪ್ ಆಯೋಜನೆಯ ಮೇಲೆ ಪ್ರಶ್ನಾರ್ಥಕ ಚಿಹ್ನೆ ಮೂಡಿದೆ. ಬಾಂಗ್ಲಾದೇಶವನ್ನು ಹೊರತುಪಡಿಸಿ ಇತರ ತಂಡಗಳ ಭದ್ರತೆಯ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತಾರೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಹೀಗಾಗಿ ಬಾಂಗ್ಲಾದೇಶದಲ್ಲಿ ನಡೆಯಲಿರುವ ಟೂರ್ನಿಯಿಂದ ಕೆಲ ದೇಶಗಳು ಹಿಂದೆ ಸರಿಯುವ ಸಾಧ್ಯತೆಗಳಿವೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಐಸಿಸಿ, ಮಹಿಳಾ ಟಿ20 ವಿಶ್ವಕಪ್ ಗೆ ಬೇರೆ ಸ್ಥಳವನ್ನು ನಿಗದಿಪಡಿಸುವ ಸಾಧ್ಯತೆಗಳಿವೆ.

## ಯೂಟ್ಯೂಬ್ ನೋಡಿ ಬಾಂಬ್ ತಯಾರಿಸಿದ ಮಕ್ಕಳು!

## ಬಾಂಬ್ ಸ್ಫೋಟ: ಗಂಭೀರ ಗಾಯ

**ಪಾಟ್ನಾ:** ಇತ್ತೀಚೆಗಷ್ಟೇ ಬಿಹಾರದ ಮುಜಾಫರ್ ಪುರ ಜಿಲ್ಲೆಯಲ್ಲಿ ಐವರು ಮಕ್ಕಳು ಯೂಟ್ಯೂಬ್ ನೋಡಿ ಬಾಂಬ್ ತಯಾರಿಸಲು ಮುಂದಾಗಿದ್ದಾರೆ. ಬೆಂಕಿಕಡ್ಡಿಗಳಿಂದ ಹಿಡಿದು ಗನ್‌ಪೌಡರ್‌ನವರೆಗೆ ಎಲ್ಲವನ್ನೂ ಸಂಗ್ರಹಿಸಿ ಟಾರ್ಚ್‌ಲೈಟ್‌ಗೆ ಸುರಿದು ಬಾಂಬ್ ಒಂದನ್ನು ತಯಾರಿಸಿದ್ದಾರೆ. ಏಕಾಏಕಿ ಅದು ಸ್ಫೋಟಗೊಂಡಿದ್ದು, ಪರಿಣಾಮ ಒಂದು ಮಗು ಗಂಭೀರವಾಗಿ ಗಾಯಗೊಂಡಿದ್ದು, ಉಳಿದ ನಾಲ್ಕು ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಬಿಹಾರದ ಮುಜಾಫರ್‌ಪುರದ ಗೈಘಾಟ್ ಪೊಲೀಸ್ ಠಾಣೆ ವ್ಯಾಪ್ತಿಯ ಮುನ್ನಿ ಬಂಗ್ರಾ ಕಲ್ಯಾಣ್ ಗ್ರಾಮದಲ್ಲಿ ಐವರು ಮಕ್ಕಳು ಯೂಟ್ಯೂಬ್ ವಿಡಿಯೋ ನೋಡಿ ಬಾಂಬ್ ತಯಾರಿಸಲು ಬಯಸಿದ್ದರು. ಮಕ್ಕಳು ಬೆಂಕಿಕಡ್ಡಿಗಳು ಮತ್ತು ಗನ್‌ಪೌಡರ್‌ಗಳನ್ನು ಸಂಗ್ರಹಿಸಿ ಟಾರ್ಚ್ ಲೈಟ್‌ಗೆ ಸುರಿದಿದ್ದರು. ನಂತರ, ಅವರು ಅದರಲ್ಲಿ ಬ್ಯಾಟರಿಯನ್ನು ಹಾಕಿದ್ದಾರೆ. ಏಕಾಏಕಿ ಅದು ಸ್ಫೋಟಗೊಂಡಿದೆ. ಈ ಅವಘಡದಲ್ಲಿ ಒಂದು ಮಗು ಗಂಭೀರವಾಗಿ ಗಾಯಗೊಂಡಿದ್ದು, ಉಳಿದ ನಾಲ್ಕು ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸದ್ಯ ಮಕ್ಕಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಯೂಟ್ಯೂಬ್ ವಿಡಿಯೋ ನೋಡಿ ಮಕ್ಕಳು ತಯಾರಿಸಲು ಪ್ರಯತ್ನಿಸಿದ್ದು ಈ ವೇಳೆ ದೊಡ್ಡ ಸ್ಫೋಟ ಸಂಭವಿಸಿ ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ರಾಕೇಶ್ ಕುಮಾರ್ ತಿಳಿಸಿದ್ದಾರೆ. ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಪೋಷಕರು ತಮ್ಮ ಮಕ್ಕಳ ಆನ್‌ಲೈನ್ ಚಟುವಟಿಕೆಗಳ ಮೇಲೆ ನಿಗಾ ಇಡಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com